## ಅಧ್ಯಾಯ 14

# ಚೀಯೋನ್ ಪರ್ವತದ ಮೇಲೆ ಯಜ್ಞದ ಕುರಿಯಾದಾತನು ಹಾಗೂ 144,000 ಮಂದಿ

ಆರಾಮ್ಯರ (ಸಿರಿಯ) ಅರಸನು ಎಲೀಷನ ವಿಷಯದಲ್ಲಿ ಬೇಸರಗೊಂಡಿದ್ದನು ಯಾಕೆಂದರೆ ಪ್ರವಾದಿಯು ಇಸ್ರಾಯೇಲ್ಯರ ವಿರುದ್ಧವಾಗಿ ಆತನು ಮಾಡುತ್ತಿದ್ದ ಸಕಲ ಯೋಜನೆಗಳನ್ನು ಮುಂದಾಗಿಯೇ ಅರಿತುಕೊಳ್ಳುತ್ತಿದ್ದನು, ಆದ್ದರಿಂದ ಅರಸನು ಎಲೀಷನನ್ನು ಹುಡುಕಿಕೊಂಡು ಬರುವದಕ್ಕೆ "ರಥರಥಾಶ್ವಸಹಿತವಾದ ಮಹಾಸೈನ್ಯವನ್ನು" ಕಳುಹಿಸಿದನು, ಮತ್ತು "ಸೈನ್ಯದವರು ರಾತ್ರಿಯಲ್ಲಿ ಆ ಪಟ್ಟಣವನ್ನು ಸಮೀಪಿಸಿ ಅದಕ್ಕೆ ಮುತ್ತಿಗೆಹಾಕಿದರು" (2 ಅರಸು 6:14). ಮರು ದಿನದ ನಸುಕಿನ ಜಾವದಲ್ಲಿ, ಎಲೀಷನ ಸೇವಕನು ಹೊರಗೆ ಹೋದಾಗ, "ರಥರಥಾಶ್ವಸಹಿತವಾದ ಮಹಾಸೈನ್ಯವು ಬಂದು ಪಟ್ಟಣದ ಸುತ್ತಲೂ ನಿಂತಿರುವದನ್ನ" ಕಂಡನು. ಆತನು ಅವಸರದಿಂದ ಪುನಃ ಒಳಕ್ಕೆ ಓಡಿ ಹೋಗಿ, "ಅಯ್ಯೋ, ಸ್ವಾಮೀ ಏನು ಮಾಡೋಣ" ಎಂದು ಕೂಗಿಕೊಂಡನು (2 ಅರಸು 6:15).

ಪ್ರವಾದಿಯು ಹೀಗೆ ಉತ್ತರ ಕೊಟ್ಟನು, "ಹೆದರಬೇಡ; ಅವರ ಕಡೆಯಲ್ಲಿರುವವರಿಗಿಂತಲೂ ನಮ್ಮ ಕಡೆಯಲ್ಲಿರುವವರು ಹೆಚ್ಚಾಗಿದ್ದಾರೆ" (2 ಅರಸು 6:16). ಸೇವಕನಿಗೆ ಏನೂ ತೋಚದಂತಾಯಿತು ಎಂಬುದರಲ್ಲಿ ಸಂಶಯವೇನೂ ಇಲ್ಲ. ನೂರಾರು ವೈರಿಗಳು ಮತ್ತು ಅವರು ಮಾತ್ರ ಕೇವಲ ಇಬ್ಬರೇ ಇದ್ದರು! ಆಗ ಎಲೀಷನು ಪ್ರಾರ್ಥಿಸಿ, "ಯೆಹೋವನೇ, ಇವನು ನೋಡುವಂತೆ ಇವನ ಕಣ್ಣುಗಳನ್ನು ತೆರೆ" ಎಂದು ಬೇಡಿಕೊಂಡನು. ತಕ್ಷಣವೇ, ಸೇವಕನ ಕಣ್ಣುಗಳು ತೆರೆಯಲ್ಪಟ್ಟವು, "ಆಗ ಎಲೀಷನ ರಕ್ಷಣೆಗಾಗಿ ಸುತ್ತಣ ಗುಡ್ಡಗಳಲ್ಲಿ ಬಂದು ನಿಂತಿದ್ದ ಅಗ್ನಿಮಯವಾದ ರಥರಥಾಶ್ವಗಳು ಆ ಸೇವಕನಿಗೆ ಕಂಡವು" (2 ಅರಸು 6:17).

ಪ್ರಕಟನೆ 12 ಮತ್ತು 13 ಅಧ್ಯಾಯಗಳಲ್ಲಿ, ವಾಚಕನಿಗೆ ಅಪವಿತ್ರವಾದ ತ್ರಿಮೂರ್ತಿಗಳ ಪರಿಚಯ ಮಾಡಲಾಯಿತು: ಘಟಸರ್ಪ, ಮೃಗ, ಮತ್ತು ಸುಳ್ಳು ಪ್ರವಾದಿ. ಯೋಹಾನನು ಅವರ ಶಕ್ತಿ ಮತ್ತು ಪ್ರಭಾವದ ಕುರಿತಾದ ಒಂದು ಕಣ್ಣಿಗೆ ಕಟ್ಟಿದಂಥ, ಭಯಾನಕವೂ ಸಹ ಆದಂಥ ಚಿತ್ರಣವನ್ನು ಬಿಡಿಸಿದನು. ಆತನು "ಭೂಲೋಕದವರೆಲ್ಲರು ಆ ಮೃಗವನ್ನು ನೋಡುತ್ತಾ ಆಶ್ಚರ್ಯಪಟ್ಟರು" ಎಂದು ಸಹ ಘೋಷಿಸಿದನು (13:3). ಆತನು ಜನಸಮೂಹದ ಘೋಷಣೆಯನ್ನು ಸಹ ಬರೆದನು: "ಈ ಮೃಗಕ್ಕೆ ಸಮಾನರು ಯಾರು? ಇದರ ಮೇಲೆ

ಯುದ್ಧಮಾಡುವದಕ್ಕೆ ಯಾರು ಶಕ್ತರು?" (13:4). ಮೃಗಕ್ಕೆ "ದೇವಜನರ ಮೇಲೆ ಯುದ್ಧಮಾಡಿ ಅವರನ್ನು ಜಯಿಸುವದಕ್ಕೆ ಅದಕ್ಕೆ ಅಧಿಕಾರ" ಇರುವದೆಂದು ಸಹ ಆತನು ಗಮನಕ್ಕೆ ತಂದನು (13:7). ಶೋಷಣೆಗೊಳಗಾಗಿರುವ ಕ್ರೈಸ್ತರ ಕೂಗುಗಳನ್ನು ಕೇಳಿಸಿಕೊಳ್ಳದೆ, ಭೂಮಿಯುದ್ದಕ್ಕೂ ರಕ್ತಸಾಕ್ಷಿಗಳ ರಕ್ತವು ಹರಡುತ್ತಿರುವದನ್ನು ನೋಡದೆ 13ನೇ ಅಧ್ಯಾಯವನ್ನು ಓದುವದು ಕಷ್ಟಕರವಾಗುವದು.

ಬಹುಶಃ ಯೋಹಾನನ ದಿನದಲ್ಲಿ ಜೀವಿಸುತ್ತಿದ್ದ ಕೆಲವು ಕ್ರೈಸ್ತರು ಎಲೀಷನ ಸೇವಕನಂತೆ ಇದ್ದರು: ವೈರಿಯ ಮಿತಿಯಿಲ್ಲದ ಸಂಪನ್ಮೂಲಗಳನ್ನು ಮಾತ್ರವೇ ನೋಡುವದಕ್ಕೆ ಶಕ್ತರಾಗಿ "ಅಯ್ಯೋ, ಸ್ವಾಮೀ ಏನೂ ಮಾಡೋಣ" ಎಂದು ಕೂಗುತ್ತಿದ್ದರೆಂದು ತೋರುತ್ತದೆ. ಅವರಿಗೆ ಎಲೀಷನು ತನ್ನ ಸೇವಕನಿಗೆ ನೀಡಿದಂಥ ದೃಷ್ಟಿಯ ತೆರೆಯುವಿಕೆ ಅಗತ್ಯವಿತ್ತು: "ಹೆದರಬೇಡ; ಅವರ ಕಡೆಯಲ್ಲಿರುವವರಿಗಿಂತಲೂ ನಮ್ಮ ಕಡೆಯಲ್ಲಿರುವವರು ಹೆಚ್ಚಾಗಿದ್ದಾರೆ." ಪ್ರಕಟನೆ 14ನೇ ಅಧ್ಯಾಯದ ಉದ್ದೇಶವು ಯೋಹಾನನ ವಾಚಕರಿಗೆ ಅದೇ ದೃಷ್ಟಿಕೋನವನ್ನು ಒದಗಿಸುವದೇ ಆಗಿತ್ತು.

14ನೇ ಅಧ್ಯಾಯದ ಸಂದೇಶವು ಇಂದು ಅಗತ್ಯವಿರುವಂಥದ್ದು. ಕ್ರೈಸ್ತರು ತಮ್ಮ ಸುತ್ತಲಿರುವ ಕೆಟ್ಟತನವನ್ನೆಲ್ಲಾ ಕಂಡು ದಿಗಿಲುಗೊಳ್ಳುವಾಗ, ದೇವರು ಒದಗಿಸುವ ದೈವಿಕ ಸಂಪನ್ಮೂಲಗಳನ್ನು ಕಾಣುವಂತೆ ಅವರ ಕಣ್ಣುಗಳು ತೆರೆಯಲ್ಪಡುವದು ಅಗತ್ಯವಿರುತ್ತದೆ. ಕ್ರೈಸ್ತರು ಈಗಲೂ "ಅವರ ಕಡೆಯಲ್ಲಿರುವವರಿಗಿಂತಲೂ ನಮ್ಮ ಕಡೆಯಲ್ಲಿರುವವರು ಹೆಚ್ಚಾಗಿದ್ದಾರೆ" ಎಂಬುದನ್ನು ಅರ್ಥಮಾಡಿಕೊಳ್ಳುವ ಅಗತ್ಯವಿರುತ್ತದೆ.

14ನೇ ಅಧ್ಯಾಯವು ಸ್ವಾಭಾವಿಕವಾಗಿಯೇ ತನ್ನನ್ನು ಮೂರು ವಿಭಾಗಗಳಾಗಿ ಮಾಡಿಕೊಳ್ಳುತ್ತದೆ, ಪ್ರತಿಯೊಂದು ವಿಭಾಗವು "ನಾನು ... ಕಂಡೆನು" ಅಥವಾ ಅದರಂತಹ ಮಾತಿನಿಂದ ಆರಂಭಗೊಳ್ಳುತ್ತದೆ. ಮೂಲ ವಾಕ್ಯದಲ್ಲಿ, 1, 6, ಮತ್ತು 14 ವಚನಗಳು ಸರಿಯಾಗಿ ಒಂದೇ ವಿಧವಾದ ಎರಡು, καί εἶδον (*kai eidon*) ಗ್ರೀಕ್ ಪದಗಳಿಂದ ಆರಂಭಗೊಳ್ಳುತ್ತವೆ, ಅವುಗಳರ್ಥವು "ಮತ್ತು ನಾನು ಕಂಡೆನು." NASBಯೊಳಗೆ 1 ಮತ್ತು 14 ವಚನಗಳಲ್ಲಿ "ಬಳಿಕ ನಾನು ನೋಡಿದಾಗ" ಎಂದು, ಆದರೆ 6ನೇ ವಚನದಲ್ಲಿ "ನಾನು ನೋಡಿದೆನು" ಎಂದು ಇರುತ್ತದೆ. ತಾನು ಏನು ಕಂಡನೋ ಅದನ್ನು ವಾಚಕರು ಕಾಣಬೇಕೆಂಬುದು ಯೋಹಾನನ ಬಯಕೆಯಾಗಿತ್ತು. ದೇವರು ತನ್ನ ಜನರಿಗಾಗಿ ಏನು ಸಿದ್ಧ ಮಾಡಿಟ್ಟಿರುತ್ತಾನೆಂಬುದನ್ನು - ಮತ್ತು ಅವರನ್ನು ಪೀಡಿಸುವವರಿಗಾಗಿ ಏನನ್ನು ಸಿದ್ಧಮಾಡಿದ್ದಾನೆಂಬುದನ್ನು ಸಹ - ಕಾಣುವಂತೆ ಅವರ ಕಣ್ಣುಗಳು ತೆರೆಯಲ್ಪಡಬೇಕು ಎಂದು ಆತನು ಬಯಸಿದ್ದನು.

## ಸಿಂಹಾಸನದ ಮುಂದೆ 144,000 ಮಂದಿ ಆರಾಧಿಸುತ್ತಾರೆ (14:1-5)

**1ನಾನು ನೋಡಲಾಗಿ ಯಜ್ಞದ ಕುರಿಯಾದಾತನು ಚೀಯೋನ್ ಪರ್ವತದ ಮೇಲೆ ನಿಂತಿರುವದನ್ನು ಕಂಡೆನು. ಆತನ ಜೊತೆಯಲ್ಲಿ ಒಂದು ಲಕ್ಷ ನಾಲ್ವತ್ತು ನಾಲ್ಕು ಸಾವಿರ ಮಂದಿ ಇದ್ದರು; ಅವರವರ ಹಣೆಯ ಮೇಲೆ ಆತನ ಹೆಸರೂ ಆತನ ತಂದೆಯ ಹೆಸರೂ ಬರೆಯಲ್ಪಟ್ಟಿದ್ದವು. 2ಇದಲ್ಲದೆ ಪರಲೋಕದ ಕಡೆಯಿಂದ ಜಲಪ್ರವಾಹದ ಘೋಷದಂತೆಯೂ ದೊಡ್ಡ ಗುಡುಗಿನ ಶಬ್ದದಂತೆಯೂ ಇದ್ದ ಶಬ್ದವನ್ನು ಕೇಳಿದೆನು. ನಾನು ಕೇಳಿದ ಆ ಶಬ್ದವು ವೀಣೆಗಳನ್ನು ನುಡಿಸಿಕೊಂಡು ಹಾಡುತ್ತಿರುವ ವೀಣೆಗಾರರ ಶಬ್ದದಂತಿತ್ತು. 3ಅವರು ಸಿಂಹಾಸನದ ಮುಂದೆಯೂ ಆ ನಾಲ್ಕು ಜೀವಿಗಳ ಮತ್ತು ಹಿರಿಯರ ಮುಂದೆಯೂ ಹೊಸ ಹಾಡನ್ನು ಹಾಡಿದರು.**

**ಭೂಲೋಕದೊಳಗಿಂದ ಕೊಂಡುಕೊಳ್ಳಲ್ಪಟ್ಟ ಆ ಲಕ್ಷದ ನಾಲ್ವತ್ತು ನಾಲ್ಕು ಸಾವಿರ ಜನರೇ ಹೊರತು ಬೇರೆ ಯಾರೂ ಆ ಹಾಡನ್ನು ಕಲಿಯಲಾರರು. [4]ಸ್ತ್ರೀ ಸಹವಾಸದಿಂದ ಮಲಿನರಾಗದವರು ಇವರೇ; ಇವರು ಕನ್ಯೆಯರಂತೆ ನಿಷ್ಕಳಂಕರು. ಯಜ್ಞದ ಕುರಿಯಾದಾತನು ಎಲ್ಲಿ ಹೋದರೂ ಇವರು ಆತನ ಹಿಂದೆ ಹೋಗುವರು. ಇವರು ಮನುಷ್ಯರೊಳಗಿಂದ ಸ್ವಕೀಯ ಜನರಾಗಿ ಕೊಂಡುಕೊಳ್ಳಲ್ಪಟ್ಟು ದೇವರಿಗೂ ಯಜ್ಞದ ಕುರಿಯಾದಾತನಿಗೂ ಪ್ರಥಮಫಲದಂತಾದರು. [5]ಇವರ ಬಾಯಲ್ಲಿ ಸುಳ್ಳು ಸಿಕ್ಕಲಿಲ್ಲ; ಇವರು ನಿರ್ದೋಷಿಗಳಾಗಿದ್ದಾರೆ.**

**ವಚನ 1.** ಮೃಗವು, 13 ಅಧ್ಯಾಯದಲ್ಲಿ ಬಣ್ಣಿಸಲ್ಪಟ್ಟಿರುವ ಪ್ರಕಾರ ಭೂಮಿಯನ್ನು ನಿಯಂತ್ರಣಕ್ಕೆ ತೆಗೆದುಕೊಂಡದ್ದನ್ನು ಕಂಡು ಘಟಸರ್ಪನು ಬಹಳ ಸಂತೋಷಗೊಂಡಿರಬೇಕು. ಭೂಮಿಯ ಮೇಲೆ ಅಂಧಕಾರಕ್ಕೆ ಆಧಿಪತ್ಯ ಸಿಕ್ಕಿತ್ತು, ಮತ್ತು ಮನುಷ್ಯರ ಹೃದಯಗಳಲ್ಲಿ ಕೆಟ್ಟತನವು ತುಂಬಿತ್ತು. ಜನರೆಲ್ಲಾ ಸ್ವಯಂಚಾಲಿತ ಯಂತ್ರಗಳಂತೆ ಅಥವಾ "ನಡೆದಾಡುವ-ಶವಗಳಂಥ ಭಕ್ತರ"[1] ಹಾಗೆ ಭೂಮಿಯ ಮೇಲೆಲ್ಲಾ ಸಂಚರಿಸುತ್ತಿದ್ದರು, ಮೃಗದ ಪ್ರತಿಯೊಂದು ಆಜ್ಞೆಗೆ ವಿಧೇಯರಾಗುತ್ತಿದ್ದರು. ಹೇಗೂ, 14ನೇ ಅಧ್ಯಾಯದ ಆರಂಭದಲ್ಲಿ, ಅದೊಂದು ರೀತಿಯಲ್ಲಿ ಕಣಿವೆಗಳಿಂದ ಸುತ್ತುವರೆಯಲ್ಪಟ್ಟಿದ್ದ ಪರ್ವತದ ತುದಿಯನ್ನು ಸೂರ್ಯನ ಬೆಳಕು ಒಮ್ಮೆಲೆ ಪ್ರಕಾಶಗೊಳಿಸಿದಂತೆ ಕಂಡಿತ್ತು. ಅಂಧಕಾರದ ಮೇಲ್ಗಡೆಯಲ್ಲಿ ಎತ್ತರದಲ್ಲಿ ಕುರಿಯಾದಾತನು ತನ್ನ ಜನರೊಂದಿಗೆ ಜಯಶಾಲಿಯಾಗಿ ನಿಂತಿದ್ದನು. **ನಾನು ನೋಡಲಾಗಿ ಯಜ್ಞದ ಕುರಿಯಾದಾತನು ಚೀಯೋನ್ ಪರ್ವತದ ಮೇಲೆ ನಿಂತಿರುವದನ್ನು ಕಂಡೆನು. ಆತನ ಜೊತೆಯಲ್ಲಿ ಒಂದು ಲಕ್ಷ ನಾಲ್ವತ್ತು ನಾಲ್ಕು ಸಾವಿರ ಮಂದಿ ಇದ್ದರು.** 1 ಮತ್ತು 14 ವಚನಗಳಲ್ಲಿರುವ **ನಾನು ನೋಡಲಾಗಿ** ಎಂಬ ಪದಗಳು ಮುಂಬರುವ ದರ್ಶನದ ಅಚ್ಚರಿಗೊಳಿಸುವ ಸ್ವಭಾವವನ್ನು ಕುರಿತು ಒತ್ತಿ ಹೇಳುತ್ತದೆ.

ಈ ದೃಶ್ಯದಲ್ಲಿ ಕಾಣಿಸಿಕೊಳ್ಳುವ ಪಾತ್ರದಾರಿಗಳು ಪ್ರಕಟನೆ ಪುಸ್ತಕದಲ್ಲಿ ಇದಕ್ಕೆ ಮುಂಚೆಯೇ ಪರಿಚಯಿಸಲ್ಪಟ್ಟವರು. **ಕುರಿಯಾದಾತನು**, ಖಂಡಿತವಾಗಿಯೂ ಯೇಸು ಕ್ರಿಸ್ತನೇ. 5ನೇ ಅಧ್ಯಾಯದಲ್ಲಿ ಆತನು ಏಳು ಮುದ್ರೆಗಳುಳ್ಳ ಸುರುಳಿಯನ್ನು ಒಡೆಯುವದಕ್ಕೆ ಯೋಗ್ಯನಾದ ಕುರಿಯಾದಾತನು ಎಂಬದಾಗಿ ಬಣ್ಣಿಸಲ್ಪಟ್ಟಿದ್ದಾನೆ. 7ನೇ ಅಧ್ಯಾಯದ ಕಡೇ ಭಾಗದಲ್ಲಿ, ಮಹಾಸಮೂಹವು ಯಜ್ಞದಕುರಿಯಾದಾತನ ಮುಂದೆಯೂ ಸಿಂಹಾಸನದ ಮುಂದೆಯೂ ನಿಂತಿತ್ತು, ಅವರು ಸ್ತುತಿಗೀತೆಯನ್ನು ಹಾಡುತ್ತಿದ್ದರು. 6, 12, ಮತ್ತು 13 ಅಧ್ಯಾಯಗಳಲ್ಲಿ ಸಹ ಕುರಿಯಾದಾತನು ಪ್ರಸ್ತಾಪಿಸಲ್ಪಟ್ಟಿದ್ದಾನೆ.

7ನೇ ಅಧ್ಯಾಯದ ಚರ್ಚೆಯ ವೇಳೆ, **ಒಂದು ಲಕ್ಷ ನಾಲ್ವತ್ತು ಸಾವಿರ ಮಂದಿ** ದೇವರ ಜನರನ್ನು ಪ್ರತಿನಿಧಿಸುತ್ತಾರೆಂಬ ಸಲಹೆ ಮಾಡಲಾಯಿತು (7:4-8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಅವರ ಹಣೆಗಳ ಮೇಲೆ ಮುದ್ರೆ ಒತ್ತಲಾಗಿತ್ತು, ನಾಶನದ ಗಾಳಿಗಳು ಬೀಸುವದಕ್ಕೆ ಆರಂಭಿಸುವ ವೇಳೆ ಅವರು ಕಾಪಾಡಲ್ಪಡುವರು ಎಂಬುದನ್ನು ಸೂಚಿಸುತ್ತದೆ. 14:1ರಲ್ಲಿ ಅವರು ಯೇಸುವಿನ ಸಂಗಡ ಚೀಯೋನ್ ಪರ್ವತದಲ್ಲಿ ಜಯಶಾಲಿಗಳಾಗಿ ನಿಂತಿರುವದಾಗಿ ಕಾಣಿಸುತ್ತಾರೆ. 14ನೇ ಅಧ್ಯಾಯದಲ್ಲಿ "144,000" ಸಾಂಕೇತಿಕ ಅಂಕೆಯು ಪುನರಾವರ್ತಿಸಲ್ಪಟ್ಟಿರುವದು ಒತ್ತಿ ಹೇಳುವದೇನೆಂದರೆ ಎರಡು ಮೃಗಗಳು ಎಷ್ಟೇ ಪ್ರಬಲವಾದವರಂತೆ ಕಾಣಬಹುದು, ನಂಬಿಗಸ್ತರೆ*ಲ್ಲರೂ* ಯೇಸುವಿನ ಸಂಗಡ ಜಯದಲ್ಲಿ ನಿಂತುಕೊಳ್ಳುವರು ಎಂಬದೆ (7:4ರ ಮೇಲಿನ ವ್ಯಾಖ್ಯಾನಗಳನ್ನು ನೋಡಿರಿ). ಒಬ್ಬನೇ ಒಬ್ಬನು ಸಹ ನಾಶಗೊಳ್ಳುವದಿಲ್ಲ!

7ನೇ ಅಧ್ಯಾಯದಲ್ಲಿ 144,000 ಮಂದಿಗೆ ಅವರ ಹಣೆಗಳ ಮೇಲೆ ಒಂದು *ಮುದ್ರೆ* ಒತ್ತಲ್ಪಟ್ಟಿತ್ತು; 14ನೇ ಅಧ್ಯಾಯದಲ್ಲಿ ಅವರ ಹಣೆಗಳ ಮೇಲೆ ಕುರಿಯಾದಾತನ *ಹೆಸರೂ* **ಆತನ ತಂದೆಯ ಹೆಸರೂ ಬರೆಯಲ್ಪಟ್ಟಿದ್ದವು.** ಮುದ್ರೆ ಮತ್ತು ಹೆಸರು ಎರಡು ಬೇರೆ ಬೇರೆ ಸಂಗತಿಗಳನ್ನು ಸೂಚಿಸುವದಿಲ್ಲ, ಆದರೆ ಒಂದೇ ಸಂಗತಿಯ ಎರಡು ಬೇರೆ ಬೇರೆ ಕೋನಗಳನ್ನು ಸೂಚಿಸುತ್ತದೆ: ಮುದ್ರೆಯು ಭದ್ರತೆಯನ್ನು ಒತ್ತಿ ಹೇಳುತ್ತದೆ; ಹೆಸರು ಒಡೆತನವನ್ನು ಒತ್ತಿ ಹೇಳುತ್ತದೆ. 3ನೇ ಅಧ್ಯಾಯದಲ್ಲಿ ಯೇಸು "ಜಯಹೊಂದುವ" ಎಲ್ಲರಿಗೂ ಇದನ್ನು ವಾಗ್ದಾನ ಮಾಡಿದನು: "ನನ್ನ ದೇವರ ... ಹೆಸರನ್ನೂ ನನ್ನ ಹೊಸ ಹೆಸರನ್ನೂ ಅವನ ಮೇಲೆ ಬರೆಯುವೆನು" (3:12). 14ನೇ ಅಧ್ಯಾಯವು ಆ ವಾಗ್ದಾನದ ನೆರವೇರಿಕೆಯನ್ನು ತೋರಿಸುತ್ತದೆ. ದೇವರು ಒಂದು ವಾಗ್ದಾನ ಮಾಡಿದರೆ, ಅದು ಖಾತ್ರಿಯಾಗಿರುತ್ತದೆ.

14:1-5ರಲ್ಲಿನ ಪಾತ್ರದಾರಿಗಳು ಪರಿಚಿತರಿರಬಹುದು, ಆದರೆ ದೃಶ್ಯಾವಳಿಯು ಹೊಸದಾಗಿದೆ: ಅವರು **ಚೀಯೋನ್ ಪರ್ವತದ ಮೇಲೆ ನಿಂತಿ**ದ್ದರು. ಪ್ರಕಟನೆ ಪುಸ್ತಕದುದ್ದಕ್ಕೂ, ಹಳೆಯ ಒಡಂಬಡಿಕೆಯ ಪರಿಚಯವಿದ್ದವರಿಗಾಗಿ ವಿಶೇಷ ಮಹತ್ವವನ್ನು ಹೊಂದಿರುವ ಅನೇಕ ಸಂಕೇತಗಳಿರುತ್ತವೆ. ಹಳೆಯ ಒಡಂಬಡಿಕೆಯ ಬೇರೆ ಯಾವ ಚಿತ್ರಣವು ಸಹ ಚೀಯೋನ್ ಪರ್ವತದಷ್ಟು ಹೆಚ್ಚು ಅರ್ಥದೊಂದಿಗೆ ಭರಿತವಾಗಿರಲಿಲ್ಲ.

ಚೀಯೋನ್ ಯೆರೂಸಲೇಮಿನಲ್ಲಿ ಎತ್ತರದಲ್ಲಿದ್ದ ಪ್ರಾಂತ್ಯವಾಗಿದ್ದು ಅದು ದಾವೀದನು ಇಸ್ರಾಯೇಲ್ಯರ ಮೇಲೆ ಅರಸನಾದ ಬಳಿಕ ಸ್ವಾಧೀನಪಡಿಸಿಕೊಂಡ ಸ್ಥಳವಾಗಿತ್ತು (ನೋಡಿರಿ 2 ಸಮುವೇಲ 5:6-10; 1 ಅರಸು 8:1; 1 ಪೂರ್ವಕಾಲವೃತ್ತಾಂತ 11:5). ಕಾಲಕ್ರಮೇಣದಲ್ಲಿ, "ಚೀಯೋನ್" ಮತ್ತು "ಯೆರೂಸಲೇಮ್" ಎಂಬ ಪದಗಳನ್ನು ಪರ್ಯಾಯ ಪದವಾಗಿ ಬಳಸಲ್ಪಡುತ್ತಿದ್ದವು (2 ಅರಸು 19:21, 31; ಯೆಶಾಯ 2:3). "ಚೀಯೋನ್" ಎಂಬುದು "ದಾವೀದನ ನಗರ" ಆಗಿತ್ತು (1 ಅರಸು 8:1; 2 ಪೂರ್ವಕಾಲವೃತ್ತಾಂತ 5:2). ದಾವೀದನು ಬಳಿಕ ದೇವಾಲಯವನ್ನು ಕಟ್ಟುವದಕ್ಕೋಸ್ಕರ ಚೀಯೋನ್ ಪಟ್ಟಣದ ಉತ್ತರ ದಿಕ್ಕಿನ ಭಾಗವನ್ನು ಆಯ್ಕೆ ಮಾಡಿಕೊಂಡನು. ಯೆಹೂದ್ಯರ ಮನಸ್ಸಿಗಾದರೋ, ಚೀಯೋನ್ ಪರ್ವತವು ಲೋಕದಲ್ಲಿಯೇ ಅತ್ಯಂಥ ಪವಿತ್ರ ಸ್ಥಳವಾಗಿದೆ, ದೇವರು ತನ್ನ ಜನರನ್ನು ಭೇಟಿಯಾದ ಸ್ಥಳವಾಗಿದೆ (ನೋಡಿರಿ ಕೀರ್ತನೆ 9:11; 48:2, 3; 76:2; 87:2; 125:1; 132:13). ಅನಂತರದ ಹಳೆಯ ಒಡಂಬಡಿಕೆಯ ಬರಹಗಳಲ್ಲಿ, ಚೀಯೋನ್ ನಿರೀಕ್ಷೆಯ ಸಂಕೇತವಾಯಿತು. ರಕ್ಷಣೆಯು ಚೀಯೋನಿನೊಳಗಿಂದ ಬರುವದಾಗಿತ್ತು (ನೋಡಿರಿ ಕೀರ್ತನೆ 14:7). ವಿಮೋಚಕನು ಚೀಯೋನಿನೊಂದಿಗೆ ಸಂಬಂಧ ಹೊಂದಿರುವನು (ನೋಡಿರಿ ಯೆಶಾಯ 59:20). (ಪ್ರವಾದಿಗಳು "ಚೀಯೋನ್" ಎಂಬ ಪದವನ್ನು ಬಳಸಿದ ಇತರ ಉದಾಹರಣೆಗಳಿಗಾಗಿ, ನೋಡಿರಿ ಯೆಶಾಯ 2:2-4; 40:9; ಯೋವೇಲ 2:32; ಮೀಕನು 4:2; ಜೆಕರ್ಯ 8:1-3.)

ಹೊಸ ಒಡಂಬಡಿಕೆಯ ಲೇಖಕರು ಸಹ ಈ ಸಂಕೇತಿಕತೆಯನ್ನು ಎತ್ತಿಕೊಂಡರು. ದೇವರು "ಚೀಯೋನೆಂಬ ಪರಿಶುದ್ಧ ಪರ್ವತದಲ್ಲಿ" ಮೆಸ್ಸೀಯನಿಗೆ ಕಿರೀಟಧಾರಣೆ ಮಾಡುವನೆಂದು ಕೀರ್ತನೆ 2 ಹೇಳಿತ್ತು (ಕೀರ್ತನೆ 2:6). ಹೊಸ ಒಡಂಬಡಿಕೆಯಲ್ಲಿ, ಯೇಸುವು ಸತ್ತವರೊಳಗಿಂದ ಎಬ್ಬಿಸಲ್ಪಟ್ಟು ದೇವರ ಬಲಗಡೆಗೆ ಏರಿ ಹೋದ ಬಳಿಕ ಪ್ರೇರಿತ ಬೋಧಕರು ಕೀರ್ತನೆ 2ನ್ನು ಉಲ್ಲೇಖಿಸಿ ಅದು ನೆರವೇರಿತು ಎಂದು ಹೇಳಿದರು (ಅಪೊಸ್ತಲರ ಕೃತ್ಯಗಳು 13:32-37). ಇಬ್ರಿಯ ಪುಸ್ತಕದ ಲೇಖಕನು ತನ್ನ ವಾಚಕರಿಗೆ ಹೇಳಿದ್ದೇನೆಂದರೆ ಅವರು ಕಂಪಿಸುವ

ಸಿನಾಯ್ ಪರ್ವತದ ಬಳಿಗೆ ಬಂದರಲ್ಲ, ಆದರೆ ಬದಲಾಗಿ,

> ... ನೀವು *ಚೀಯೋನ್ ಪರ್ವತಕ್ಕೂ* ಜೀವಸ್ವರೂಪನಾದ ದೇವರ ಪಟ್ಟಣವಾಗಿರುವ ಪರಲೋಕದ ಯೆರೂಸಲೇಮಿಗೂ ಉತ್ಸವಸಂಘದಲ್ಲಿ ಕೂಡಿರುವ ಕೋಟ್ಯಾನುಕೋಟಿ ದೇವದೂತರ ಬಳಿಗೂ ಪರಲೋಕದಲ್ಲಿ ಹೆಸರು ಬರಸಿಕೊಂಡಿರುವ ಚೊಚ್ಚಲಮಕ್ಕಳ ಸಭೆಗೂ ಎಲ್ಲರಿಗೆ ನ್ಯಾಯಾಧಿಪತಿಯಾಗಿರುವ ದೇವರ ಬಳಿಗೂ ಸಿದ್ಧಿಗೆ ಬಂದಿರುವ ನೀತಿವಂತರ ಆತ್ಮಗಳ ಬಳಿಗೂ (ಇಬ್ರಿಯ 12:22, 23; ಒತ್ತಿ ಹೇಳಿದ್ದು ನನ್ನದು).

ಇಬ್ರಿಯ ಪುಸ್ತಕದ ಈ ವಾಕ್ಯಭಾಗವು ದೇವರ ರಾಜ್ಯದ ಕುರಿತು ಮಾತಾಡುತ್ತದೆ, ಅದು ಪರಲೋಕದ ಮತ್ತು ಭೂಲೋಕದ ಎರಡೂ ಅಂಶಗಳನ್ನು ಹೊಂದಿದೆ. ಭೂಲೋಕದ ಅಂಶವು ಸಭೆ ಆಗಿದೆ; ಪರಲೋಕದ ಅಂಶವು ಸಾಮಾನ್ಯವಾಗಿ ಪರಲೋಕ ಎಂದು ಯೋಚಿಸಲಾಗುತ್ತದೆ. ವಾಕ್ಯಭಾಗದ ಕಡೇ ಭಾಗವು ರಾಜ್ಯದ ಪೌರತ್ವವನ್ನು ಕುರಿತು ವಿವರವಾಗಿ ತಿಳಿಸುತ್ತದೆ, ಅದರಲ್ಲಿ ದೇವದೂತರು ಮತ್ತು ಮಾನವರು ಇಬ್ಬರೂ ಸೇರಿರುತ್ತಾರೆ. ಜನರಲ್ಲಿ ಕೆಲವರು ಇನ್ನೂ ಭೂಮಿಯ ಮೇಲಿದ್ದರು, ಮತ್ತು ಬೇರೆ ಕೆಲವರು ಈಗಾಗಲೇ ಮರಣಿಸಿದ್ದರು. "ಚೀಯೋನ್ ಪರ್ವತ"ವು "ಪರಲೋಕದಲ್ಲಿರುವ ಯೆರೂಸಲೇಮ್" ನೊಂದಿಗೆ ಸಂಬಂಧ ಹೊಂದಿರುವದನ್ನು ಗಮನಿಸಿರಿ. ಇದಕ್ಕೆ ಮುಂಚೆ ಯೇಸುವು "ನನ್ನ ದೇವರ ಬಳಿಯಿಂದ ಪರಲೋಕದೊಳಗಿಂದ ಇಳಿದುಬರುವ ಹೊಸ ಯೆರೂಸಲೇಮ್ ಪಟ್ಟಣವೆಂಬ ನನ್ನ ದೇವರ ಪಟ್ಟಣ" ಎಂಬುದರ ಕುರಿತು ಮಾತಾಡಿದನು (3:12). 21ನೆ ಅಧ್ಯಾಯವು "ಪರಿಶುದ್ಧ ಪಟ್ಟಣವಾದ ಹೊಸ ಯೆರೂಸಲೇಮು" ಕುರಿತು ಹೇಳುತ್ತದೆ. (ನೋಡಿರಿ 21:2, 10.)

ದರ್ಶನದಲ್ಲಿ "ಚೀಯೋನ್ ಪರ್ವತ" ಭೂಮಿಯಲ್ಲಿತ್ತೋ ಅಥವಾ ಪರಲೋಕದಲ್ಲಿತ್ತೋ ಎಂಬ ವಿಷಯದಲ್ಲಿ ವ್ಯಾಖ್ಯಾನಕಾರರೊಳಗೆ ಭಿನ್ನಾಭಿಪ್ರಾಯವಿರುತ್ತವೆ. ಕೆಲವು ವ್ಯಾಖ್ಯಾನಕಾರರು ಚೀಯೋನ್ ಪರ್ವತದ ದೃಶ್ಯವನ್ನು ಪ್ರಕಟನೆ ಪುಸ್ತಕದ ನಂತರ ಭಾಗದಲ್ಲಿ ಬಣ್ಣಿಸಲಾಗಿರುವ "ಯುದ್ಧ"ಕ್ಕಾಗಿ "ಕರ್ತನು ತನ್ನ ಸೈನ್ಯವನ್ನು ಸೇರಿಸಿಕೊಳ್ಳುತ್ತಿದ್ದಾನೆ" ಎಂಬುದಾಗಿ ಸೂಚಿಸುತ್ತಾರೆ. ಕೆಲವು ಸಹಸ್ರವರ್ಷಪೂರ್ವಾಡಳಿತ ಲೇಖಕರು ಚೀಯೋನ್ ಪರ್ವತವನ್ನು "ಸಹಸ್ರವರ್ಷದ ಆಳ್ವಿಕೆಗಾಗಿ ಭೂಲೋಕದ ಸ್ಥಳ" ಆಗಿರುವದೆಂದು ಅರ್ಥಮಾಡಿಕೊಳ್ಳುತ್ತಾರೆ, ಆದರೆ Robert Mounceನು ಹೀಗೆ ಹೇಳಿದನು, "ಇಡೀ ದೃಶ್ಯವು ಪರಲೋಕದ ಸಿಂಹಾಸನದ ಮುಂದೆ ಸ್ತುತಿಯ ದೃಶ್ಯಗಳಲ್ಲೊಂದಾಗಿದೆ."[2]

ಇನ್ನೊಂದು ಪ್ರಶ್ನೆಯು ಉದ್ಭವವಾಗುತ್ತದೆ: ದೃಶ್ಯವು ಪರಲೋಕದಲ್ಲಿ ನಡೆಯುತ್ತಿರುವದಾಗಿದ್ದಲ್ಲಿ, 144,000 ಜನರು ಯೋಹಾನನ ದಿನದಲ್ಲಿದ್ದ ನಂಬಿಗಸ್ತ ಕ್ರೈಸ್ತರನ್ನು ಪ್ರತಿನಿಧಿಸುತ್ತಾರೋ ಅಥವಾ ನಿತ್ಯತ್ವದುದ್ದಕ್ಕೂ ಆಶೀರ್ವಾದಗಳನ್ನು ಆನಂದಿಸುತ್ತಿರುವ *ಎಲ್ಲಾ* ನಂಬಿಗಸ್ತ ಕ್ರೈಸ್ತರನ್ನು ಪ್ರತಿನಿಧಿಸುತ್ತಾರೋ? ಕೆಲವು ವ್ಯಾಖ್ಯಾನಕಾರರು 144,000 ಮಂದಿಯನ್ನು ಸಭೆಯಿಂದ ಆರಿಸಿಕೊಂಡ ಒಂದು "ಒಳ-ಗುಂಪು" ಎಂದು ಮಾಡುತ್ತಾರೆ. ಇವರೆಲ್ಲಾ ರಕ್ತಸಾಕ್ಷಿಗಳಾಗಿ ಸತ್ತವರೆಂದು ಅನೇಕರು ವಾದಿಸುತ್ತಾರೆ. ಹೇಗೂ, ದೇವರು ತನ್ನ ನಂಬಿಗಸ್ತ ಮಕ್ಕಳಿಗಿಂತಲೂ ಅಧಿಕವಾಗಿ ರಕ್ತಸಾಕ್ಷಿಗಳನ್ನು ಹೆಚ್ಚಿನವರೆಂದು ಪರಿಗಣಿಸುತ್ತಾನೆಂಬ ಯಾವ ಸೂಚನೆಯೂ ಇರುವದಿಲ್ಲ.

ಇದು ವಿಮೋಚಿಸಲ್ಪಟ್ಟವರೆಲ್ಲರೂ ಪರಲೋಕದಲ್ಲಿರುವದರ ಒಂದು ದರ್ಶನವಾಗಿರುವ ಸಾಧ್ಯತೆಯು ಅಧಿಕವಾಗಿರುತ್ತದೆ. 7ನೇ ಅಧ್ಯಾಯದಲ್ಲಿ, ರಕ್ಷಣೆ ಹೊಂದಿದವರು ಮೊದಲು

ಭೂಮಿಯ ಮೇಲೆ 144,000 ಮಂದಿಯಾಗಿ ಮತ್ತು ಬಿಕ ಕುರಿಯಾದಾತನ ಮುಂದೆಯೂ ಸಿಂಹಾಸನದ ಮುಂದೆಯೂ ಇರುವ ಅಸಂಖ್ಯಾತ ಜನಸಮೂಹವಾಗಿ ಕಾಣಿಸುತ್ತಾರೆ. ಈ 144,000 ಮಂದಿಯು ಕುರಿಯಾದಾತನ ಮುಂದೆ ಮತ್ತು ಸಿಂಹಾಸನದ ಮುಂದೆ ಇರುತ್ತಾರೆ, ಆದ್ದರಿಂದ ಇದು 7ನೇ ಅಧ್ಯಾಯದಲ್ಲಿರುವ ಮಹಾ ಜನಸಮೂಹದ ರೀತಿಯಲ್ಲಿಯೇ ಅದೇ ಮೂಲಭೂತ ದೃಶ್ಯವಾಗಿರುವಂತೆ ತೋರುತ್ತದೆ. ಬೇರೆ ವಾದಗಳನ್ನು ಮಾಡಬಹುದಾಗಿದೆ: ಇವರು "ಭೂಲೋಕದೊಳಗಿಂದ ಕೊಂಡುಕೊಳ್ಳಲ್ಪಟ್ಟವರು" (14:3); ಇವರು "ಜಯಹೊಂದುವವರಿಗೆ" ಸಿಕ್ಕುವ ಪ್ರತಿಫಲವನ್ನು ಹೊಂದಿಕೊಂಡವರು.

ಯಾವ ರೀತಿಯಲ್ಲಿದ್ದರೂ ಸರಿಯೇ, Michael Wilcockನು ಹೇಳಿದ ಹಾಗೆ, 14ನೇ ಅಧ್ಯಾಯದ ಚೀಯೋನ್ "ಒಂದು ಭೂಲೋಕದಲ್ಲಿನ ಸ್ಥಳವಲ್ಲ," ಆದರೆ ಒಂದು "ಆತ್ಮೀಕ ವಾಸ್ತವಿಕತೆ"[3] ಆಗಿದೆ ಎಂಬುದು ಸ್ಪಷ್ಟವಾಗಿ ತೋರುತ್ತದೆ. ಇದು ಕ್ರಿಸ್ತನು ತನ್ನ ಜನರೊಂದಿಗೆ ಇರುವಂಥ ಆತ್ಮೀಕ ಸ್ಥಳವಾಗಿರುತ್ತದೆ. ಈ ದರ್ಶನದ ಪ್ರಾಮುಖ್ಯವಾದ ಅಂಶವು "ಯಾವಾಗ" ಅಥವಾ "ಎಲ್ಲಿ" ಎಂಬುದರಲ್ಲಿ ಇಲ್ಲ, ಆದರೆ "ಏನು" ಎಂಬುದರಲ್ಲಿಯೇ ಇರುತ್ತದೆ: 144,000 ಮಂದಿಯು ಜಯಶಾಲಿಗಳಾಗಿದ್ದರು. ಪವಿತ್ರಾತ್ಮನು ಯೋಹಾನನ ವಾಚಕರಿಗೆ ಹೀಗೆ ಹೇಳುತ್ತಿದ್ದಾನೆ: "ಮೃಗದಿಂದ ಹೆದರಿಕೆಗೊಳಗಾಗದಿರಿ. ನೀವು ನಂಬಿಗಸ್ತರಾಗಿದ್ದರೆ, ಜಯಶಾಲಿಗಳಾಗುವಿರಿ." ದೇವರ ಜನರು ಈ ಮಹಾ ಸತ್ಯಕ್ಕೆ ತಮ್ಮ ಕಣ್ಣುಗಳನ್ನು ಎಂದಾದರೂ ಮುಚ್ಚಿಕೊಳ್ಳುವರೋ? ಬಹುಶಃ ಹಾಗಿರಬಹುದಾಗಿದೆ. ಕ್ರೈಸ್ತರಿಗೆ ಇಂಥಹ ಮಹಾನ್ ವಾಕ್ಯಭಾಗಗಳನ್ನು ಜ್ಞಾಪಿಸುವದು ಅಗತ್ಯವಿರುತ್ತದೆ (ನೋಡಿರಿ 1 ಕೊರಿಂಥ 15:54; 1 ಯೋಹಾನ 5:4):

> ಯೆಹೋವಾ, ಮಹಿಮಪ್ರತಾಪ ವೈಭವ ಪರಾಕ್ರಮಪ್ರಭಾವಗಳು ನಿನ್ನವು ... ಮಹೋನ್ನತನಾಗಿ ಸರ್ವವನ್ನೂ ಆಳುವವನಾಗಿರುತ್ತೀ (1 ಪೂರ್ವಕಾಲವೃತ್ತಾಂತ 29:11).
>
> ... ಜಯವು ಯೆಹೋವನಿಂದಲೇ (ಜ್ಞಾನೋಕ್ತಿ 21:31).
>
> ... ದೇವರು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ನಮಗೆ ಜಯವನ್ನು ಕೊಟ್ಟಿದ್ದಾನೆ; ಆತನಿಗೆ ಸ್ತೋತ್ರ (1 ಕೊರಿಂಥ 15:57).

**ವಚನ 2.** 144,000 ಮಂದಿಯು ಚೀಯೋನ್ ಪರ್ವತದ ಮೇಲೆ ನಿಂತಿರುವ ವೇಳೆ ಏನು ಮಾಡುತ್ತಿದ್ದರು? ತಾವು ಅನುಭವಿಸಿ ಬಂದ ತೊಂದರೆಗಳನ್ನು ನೆನಪಿಸಿಕೊಳ್ಳುತ್ತಿದ್ದರೋ? ಯಾರು ಅತಿ ಹೆಚ್ಚು ಬಾಧೆಯನ್ನು ಅನುಭವಿಸಿದ್ದಾರೆಂದು ಪೈಪೋಟಿ ನಡಿಸಿದ್ದರೋ? ಇಲ್ಲ, ಅವರು ಜಯದ ಗೀತೆಯನ್ನು ಹಾಡುವವರಾಗಿ ಕೊಂಡಾಡುತ್ತಿದ್ದರು. ಯೋಹಾನನು ಹೀಗೆ ಬರೆದನು, **ಇದಲ್ಲದೆ ಪರಲೋಕದ ಕಡೆಯಿಂದ ಜಲಪ್ರವಾಹದ ಘೋಷದಂತೆಯೂ ದೊಡ್ಡ ಗುಡುಗಿನ ಶಬ್ದದಂತೆಯೂ ಇದ್ದ ಶಬ್ದವನ್ನು ಕೇಳಿದೆನು. ನಾನು ಕೇಳಿದ ಆ ಶಬ್ದವು ವೀಣೆಗಳನ್ನು ನುಡಿಸಿಕೊಂಡು ಹಾಡುತ್ತಿರುವ ವೀಣೆಗಾರರ ಶಬ್ದದಂತಿತ್ತು**.

ಯೋಹಾನನು ಒಂದು ಬಲವಾದ ಗಾನ ಮೇಳವನ್ನು ಕೇಳಿಸಿಕೊಂಡನು. **ಶಬ್ದ** ಎಂಬ ಪದವು ಏಕವಚನದಲ್ಲಿರುತ್ತದೆ; ಆದರೆ 3ನೇ ವಚನದಲ್ಲಿ ವಾಕ್ಯಭಾಗವು "ಅವರು" ಎಂದು ಹೇಳುತ್ತದೆ. ಆ "ಶಬ್ದ"ವು ಒಂದು ಗಾನ ಮೇಳದ್ದಾಗಿರುವದು ಸ್ಪಷ್ಟವಾಗಿರುತ್ತದೆ. ಸಾಂದರ್ಭಿಕವಾಗಿ, "ಶಬ್ದ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವಾದ φωνή (*phōnē*)

ಎಂಬುದು "ಸದ್ದು" ಎಂಬುದರ ಜಾತಿವಿಶಿಷ್ಟ ಪದವಾಗಿದೆ. "ದೂರವಾಣಿ" ಮತ್ತು "ಧ್ವನಿವರ್ಧಕ" ಎಂಬುಗಳಲ್ಲಿ ಗ್ರೀಕ್ ಪದವು ಗುರುತಿಸಲರ್ಹವಾಗಿದೆ. ಆ ಗಾನ ಮೇಳವು ಎಷ್ಟೊಂದು ಬಲವಾಗಿತ್ತೆಂದರೆ ಅದನ್ನು ಜಲಪ್ರವಾಹದ ಘೋಷಗಳಿಗೆ ಅಥವಾ ಗುಡುಗಿನ ಶಬ್ದದೊಂದಿಗೆ ಹೋಲಿಕೆ ಮಾಡಬಹುದಾಗಿತ್ತು ಮತ್ತು ಅದು ಎಷ್ಟೊಂದು ಮಧುರವಾಗಿತ್ತೆಂದರೆ ಅದನ್ನು ನುರಿತ ವೀಣಾವಾದಕರು ನುಡಿಸುವ ಸುಮಧುರ ಸಂಗೀತಕ್ಕೆ ಹೋಲಿಕೆ ಮಾಡಬಹುದಾಗಿತ್ತು. ಅಪೊಸ್ತಲನು ನಿಜವಾದ ಜಲಪ್ರವಾಹ, ಗುಡುಗುಗಳನ್ನು, ಅಥವಾ ವೀಣೆಯ ನಾದವನ್ನು ಕೇಳಿಸಿಕೊಳ್ಳಲಿಲ್ಲ; ಇವುಗಳು ಕೇವಲ ಆ ಅಮೋಘವಾದ ಹಾಡುಗಾರಿಕೆಯನ್ನು ಬಣ್ಣಿಸುವ ರೂಪಕಗಳು ಮಾತ್ರವೇ ಆಗಿರುತ್ತವೆ (5:8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಸಾವಿರಾರು ಹಾಡುಗಾರರಿಂದ ರಚಿಸಲ್ಪಟ್ಟ ಗಾನ ವೃಂದಗಳ ಶಕ್ತಿ ಹಾಗೂ ಸೌಂದರ್ಯವನ್ನು ಕಂಡು ಜನರು ಮೂಕವಿಸ್ಮಿತರಾಗಿದ್ದಾರೆ. 144,000 ಜನರು ಒಂದೇ ಸ್ವರದಲ್ಲಿ ಒಟ್ಟಾಗಿ ಸ್ತುತಿಗೀತೆ ಹಾಡುವದನ್ನು ನೀವು ಊಹಿಸಿಕೊಳ್ಳಬಲ್ಲಿರೋ?

**ವಚನ 3.** ಮಹಾ ಗಾನ ವೃಂದವು **ಸಿಂಹಾಸನ ... ನಾಲ್ಕು ಜೀವಿಗಳು ... ಮತ್ತು ಹಿರಿಯರು** ಇವರನ್ನೊಳಗೊಂಡ ಪ್ರೇಕ್ಷಕರ ಮುಂದೆ ಹಾಡುತ್ತಿತ್ತು. 4ನೇ ಅಧ್ಯಾಯದ ಅಧ್ಯಯನದಲ್ಲಿ, ಹಿರಿಯರು ಜಯಶಾಲಿಗಳಾಗಿರುವ ಕ್ರೈಸ್ತರನ್ನು ಪ್ರತಿನಿಧಿಸಬಹುದಾಗಿದೆ ಎಂಬುದನ್ನು ಸೂಚಿಸಲಾಗಿತ್ತು (4:10ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಈ ವ್ಯಖ್ಯಾನವು 14ನೇ ಅಧ್ಯಾಯದಲ್ಲಿ ಒಂದು ರೀತಿಯ ಸಮಸ್ಯೆಯನ್ನು ಮುಂದಿಡುತ್ತದೆ ಯಾಕೆಂದರೆ 144,000 ಜನರು ಸಹ ಜಯಶಾಲಿಗಳಾಗಿರುವ ಕ್ರೈಸ್ತರನ್ನು ಪ್ರತಿನಿಧಿಸುತ್ತಾರೆಂದು ಸೂಚಿಸಲಾಗುತ್ತದೆ (ವ. 1ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ನಾವು ಈ ದೃಷ್ಟಿಕೋನವನ್ನು ಪರಿಗಣಿಸಬೇಕು: "24 ಹಿರಿಯರು ಸಭೆಯನ್ನು ಪ್ರತಿನಿಧಿಸಬಲ್ಲವರಾಗಿದ್ದು ಅದೇ ವೇಳೆಯಲ್ಲಿ ಸಭೆಯಾಗಿರುವ 144,000 ಮಂದಿಯಿಂದ ಹಾಡನ್ನು ಕೇಳಿಸಿಕೊಳ್ಳಲು ಸಾಧ್ಯವೋ? ಖಂಡಿತವಾಗಿಯೂ ಸಾಧ್ಯವಿದೆ. ಪ್ರತಿಯೊಂದು ಅಂಕೆಗೂ ಅದರದ್ದೇ ಆದ ಅಂಶವಿರುತ್ತದೆ. ಸಭೆಯು ಸ್ತ್ರೀ ಮತ್ತು ಪಟ್ಟಣ ಎರಡೂ ಆಗಿರಬಲ್ಲದೋ? ಹೆಂಡತಿ ಮತ್ತು 'ನಿಶ್ಚಿತಾರ್ಥವಾಗಿರುವ' ಹುಡುಗಿ ಎರಡೂ ಆಗಿರಬಲ್ಲದೋ?"[4] 12ನೇ ಅಧ್ಯಾಯವನ್ನು ಅಧ್ಯಯನ ಮಾಡಿದ ವೇಳೆ, ಅಧ್ಯಾಯದ ಅಂತ್ಯದಲ್ಲಿ, ಸಭೆಯು ಸ್ತ್ರೀ ಮತ್ತು ಆಕೆಯ ಸಂತಾನ ಇಬ್ಬರಿಂದಲೂ ಪ್ರತಿನಿಧಿಸಲ್ಪಟ್ಟಿತ್ತೆಂಬುದನ್ನು ಗಮನಿಸಲಾಯಿತು. ಆದದರಿಂದ, ಹಿರಿಯರು ಮತ್ತು 144,000 ಮಂದಿ, McGuigganನು ಅಭಿಪ್ರಾಯ ಪಟ್ಟ ಪ್ರಕಾರ, ಒಂದೇ ಸಂಗತಿಯನ್ನು ನೋಡುವ ಎರಡು ಬೇರೆ ಬೇರೆ ರೀತಿಗಳಾಗಿರುತ್ತವಷ್ಟೇ.

3ನೇ ವಚನದಲ್ಲಿ, ವಾಚಕನು 4ನೇ ಅಧ್ಯಾಯದ ಸಿಂಹಾಸನದ ಕೋಣೆಗೆ ಹಿಂದಿರುಗಿ ಬಂದಿರುತ್ತಾನೆ ಮತ್ತು ಮತ್ತೊಂದಾವರ್ತಿ ಆತನು ತಂದೆಯ ಸನ್ನಿಧಿಯಲ್ಲಿರುತ್ತಾನೆ. ಕರಾರುವಾಕ್ಕಾಗಿ ಪರ್ವತದ ದರ್ಶನ ಹಾಗೂ ಸಿಂಹಾಸನದ ದರ್ಶನ ಹೇಗೆ ಒಂದಾಗಿ ಕೂಡಿಕೊಳ್ಳುತ್ತವೆಂಬುದು ಹೇಳಲ್ಪಟ್ಟಿಲ್ಲ. ಬಹುಶಃ ಚೀಯೋನ್ ಪರ್ವತವೆಂದರೆ ದೇವರ ಸಿಂಹಾಸನವಿರುವ ಪರಲೋಕದ ಬಗ್ಗೆ ಹೇಳುವ ಇನ್ನೊಂದು ರೀತಿಯಾಗಿರಬಹುದಷ್ಟೆ. ಹೇಗೂ, ಕೆಲವರು ಪರ್ವತದಲ್ಲಿರುವ 144,000 ಮಂದಿಯು ಸಿಂಹಾಸನದ ಕಡೆಗೆ ಕಣ್ಣೆತ್ತಿ ನೋಡುತ್ತಿರುವಂತೆ ಕಲ್ಪಿಸಿಕೊಳ್ಳುತ್ತಾರೆ.

ಹಾಡಲ್ಪಡುತ್ತಿರುವ ಗಾನವನ್ನು **ಹೊಸ ಹಾಡು** ಎಂದು ಕರೆಯಲಾಗಿದೆ. ಕೆಲವರು ಆ "ಶಬ್ದ"ವು ದೇವದೂತರದ್ದಾಗಿತ್ತೆಂದು ಮತ್ತು ಅವರು 144,000 ಮಂದಿಗೆ ಹೊಸ ಹಾಡನ್ನು

*ಕಲಿಸಿಕೊಟ್ಟರು* ಎಂದು ಯೋಚಿಸುತ್ತಾರೆ. ಈ ವಚನದ ಅತಿ ಸರಳವಾದ ಹಾಗೂ ಅತ್ಯಂಥ ಸ್ವಾಭಾವಿಕವಾದ ಅರ್ಥನಿರೂಪಣೆಯೆಂದರೆ ಆ ಪರಲೋಕದ ಗಾನವೃಂದವು 144,000 ಮಂದಿಯೇ ಆಗಿದ್ದರು ಎಂಬುದೆ. ಜಯವನ್ನು ವೈಯಕ್ತಿಕವಾಗಿ ಅನುಭವ ಮಾಡಿದವರು ಅವರೇ ಆಗಿದ್ದರು. "ಹೊಸ ಹಾಡು" ಎಂಬ ಪದವು ಹಳೆಯ ಒಡಂಬಡಿಕೆಯಲ್ಲಿ ಅನೇಕ ಸಾರಿ ಕರ್ತನಿಗೆ ಹಾಡುವ ಸ್ತುತಿಯನ್ನು ಸೂಚಿಸುವದಕ್ಕೆ ಬಳಸಲ್ಪಡುತ್ತಿತ್ತು (ಕೀರ್ತನೆ 33:3; 96:1; 149:1), ಮತ್ತು ವಿಶೇಷವಾಗಿ ವಿಮೋಚನೆ ಹಾಗೂ ಜಯ ಕೊಟ್ಟದ್ದಕ್ಕಾಗಿ ಮಾಡುವ ಸ್ತುತಿ ಗೀತೆಯನ್ನು ಸೂಚಿಸಲು ಬಳಸಲ್ಪಡುತ್ತಿತ್ತು (ಕೀರ್ತನೆ 40:1-3; 144:9-11). ಉದಾಹರಣೆಗೆ, ದಾವೀದನು ಕೀರ್ತನೆ 98:1ರಲ್ಲಿ ಹೀಗೆ ಬರೆದನು, "ಯೆಹೋವನಿಗೆ ಹೊಸ ಕೀರ್ತನೆಯನ್ನು ಹಾಡಿರಿ; ಆತನು ಅದ್ಭುತಕೃತ್ಯಗಳನ್ನು ನಡಿಸಿದ್ದಾನೆ. ಆತನ ಬಲಗೈಯೂ ಪರಿಶುದ್ಧಬಾಹುವೂ ಜಯವನ್ನು ಉಂಟುಮಾಡಿವೆ ..." ಪ್ರತಿಯೊಂದು ಹಾಡು "ಹೊಸ"ದಾಗಿತ್ತು ಯಾಕೆಂದರೆ ಪ್ರತಿಯೊಂದು ಜಯವು ವಿಶಿಷ್ಟವಾಗಿತ್ತು.

5ನೇ ಅಧ್ಯಾಯದಲ್ಲಿ, ನಾಲ್ಕು ಜೀವಿಗಳು ಮತ್ತು ಇಪ್ಪತ್ತುನಾಲ್ಕು ಹಿರಿಯರು ಯಜ್ಞದ ಕುರಿಯಾದಾತನಿಗೆ ಒಂದು "ಹೊಸ ಹಾಡನ್ನು" ಹಾಡಿದರು, ಆ ಹಾಡಿನಲ್ಲಿ ಈ ಪದಗಳಿದ್ದವು: "... ನೀನು ಯಜ್ಞಾರ್ಪಿತನಾಗಿ ನಿನ್ನ ರಕ್ತದಿಂದ ಸಕಲ ಕುಲ ಭಾಷೆ ಪ್ರಜೆ ಜನಾಂಗಗಳವರಿಂದ ಮನುಷ್ಯರನ್ನು ದೇವರಿಗಾಗಿ ಕೊಂಡುಕೊಂಡಿ; ಅವರನ್ನು ನಮ್ಮ ದೇವರಿಗೋಸ್ಕರ ರಾಜ್ಯವನ್ನಾಗಿಯೂ ಯಾಜಕರನ್ನಾಗಿಯೂ ಮಾಡಿದಿ ..." (5:9, 10; 5:9, 10ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). 144,000 ಮಂದಿಯಿಂದ ಹಾಡಲ್ಪಟ್ಟ "ಹೊಸ ಹಾಡು" ಅದೇ ವಿಷಯವನ್ನು ಒಳಗೊಂಡಿತ್ತೆಂಬುದರಲ್ಲಿ ಸಂಶಯವೇ ಇಲ್ಲ. ಅವರು "ಯಜ್ಞದ ಕುರಿಯಾದಾತನ ರಕ್ತದ" ಮೂಲಕವಾಗಿ ಜಯ ಹೊಂದಿದ್ದರು (12:11). "ಹೊಸ ಹಾಡು" ಕುರಿತ ಮತ್ತೊಂದು ಸುಳಿವುಗಾಗಿ, ಮುಂದಿನ ಅಧ್ಯಾಯದಲ್ಲಿ ಬರುವ ಜಯದ ಗೀತೆಯನ್ನು ನೋಡಿರಿ (15:2-4).

ವಾಚಕನಿಗೆ 14ನೇ ಅಧ್ಯಾಯದ ಹೊಸ ಹಾಡಿನಲ್ಲಿರುವ ನಿಖರವಾದ ಮಾತುಗಳನ್ನು ತಿಳಿಸಲಾಗಿರುವದಿಲ್ಲ, ಆದರೆ ಆತನಿಗೆ ಇದನ್ನು ಹೇಳಲಾಗಿರುತ್ತದೆ, ಏನೆಂದರೆ **ಆ ಲಕ್ಷದ ನಾಲ್ವತ್ತು ನಾಲ್ಕು ಸಾವಿರ ಜನರೇ ಹೊರತು ಬೇರೆ ಯಾರೂ ಆ ಹಾಡನ್ನು ಕಲಿಯಲಾರರು.** ಜಯವನ್ನು ಅನುಭವಿಸುವವರನ್ನು ಹೊರತು ಪಡಿಸಿ ಬೇರೆ ಯಾರೂ ಆ ಹಾಡನ್ನು **ಕಲಿಯಲಾರರು.** Daniel Russellನು ಹೇಳಿದ ಹಾಗೆ, "ವ್ಯಕ್ತಪಡಿಸುವದಕ್ಕೆ ಮುನ್ನ ಅನುಭವ ಮಾಡಿರಬೇಕು."[5] Myer Pearlmanನು ಈ ಯೋಚನೆಯನ್ನು ವಿಸ್ತರಿಸಿ ಹೇಳುತ್ತಾನೆ, "ನಾವು ಸತ್ಯವನ್ನು ನಿಜವಾಗಿಯೂ ವ್ಯಕ್ತಪಡಿಸುವದಕ್ಕೆ ಮುನ್ನ ಅದನ್ನು ಅನುಭವ ಮಾಡಿರಬೇಕು."[6] (2:17ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ.)

144,000 ಮಂದಿ **ಭೂಲೋಕದೊಳಗಿಂದ ಕೊಂಡುಕೊಳ್ಳಲ್ಪಟ್ಟ**ವರಾಗಿದ್ದರು. "ಭೂಲೋಕದೊಳಗಿಂದ" ಎಂಬುದು ಅವರು ಇನ್ನು ಮೇಲೆ ಭೂಮಿಯ ಮೇಲಿರಲಿಲ್ಲ ಎಂದು ಸೂಚಿಸುತ್ತಿರಬಹುದಾಗಿದೆ, ಅಥವಾ ಅವರು ಲೋಕದಿಂದ ಪ್ರತ್ಯೇಕಿಸಲ್ಪಟ್ಟಿದ್ದಾರೆಂದಷ್ಟೆ ಅದರ ಅರ್ಥವಾಗಿರಬಲ್ಲದು (ಯೋಹಾನ 17:16). ಎರಡರಲ್ಲಿ ಯಾವ ರೀತಿಯಿದ್ದರೂ ಸರಿಯೇ, "ಕೊಂಡುಕೊಳ್ಳುವದಕ್ಕೆ ಕೊಟ್ಟ ಕ್ರಯ" ಯೇಸುವಿನ ರಕ್ತವೇ ಆಗಿತ್ತು (1 ಪೇತ್ರ 1:18, 19). ಆತನ ರಕ್ತದ ಮೂಲಕವಾಗಿ, ಅವರು ಮಹಾ ಸಂಕಟಕಾಲವನ್ನು ಅನುಭವಿಸಿ ಬದುಕುಳಿದು ಬಂದಿದ್ದರು. ಅವರು ಯಜ್ಞದ ಕುರಿಯಾದಾತನ ಸಂಗಡ ಜಯಶಾಲಿಗಳಾಗಿ ನಿಂತರು. ಅವರಿಗೆ ಜಯ ಎಂದರೆ ಏನೆಂಬುದು ಗೊತ್ತಿತ್ತು. ಬೇರೆ ಯಾರಿಗೂ ಅದು ತಿಳಿದಿರಲಿಲ್ಲ. ಆದ್ದರಿಂದ ಬೇರೆ

ಯಾರೂ ಅವರ "ಹೊಸ ಹಾಡ"ನ್ನು ಕಲಿಯಲಾರದವರಾಗಿದ್ದರು.

**ವಚನ 4.** ಒಂದು ವೃತ್ತಿಪರ ಗಾನವೃಂದಲ್ಲಿ, ಸಂಗೀತ ಜ್ಞಾನವುಳ್ಳ ಮತ್ತು ಒಂದು ಮಟ್ಟದ ಸಂಗೀತದ ಪ್ರತಿಭೆಯಿರುವ ಹಾಡುಗಾರರನ್ನು ಮಾತ್ರವೇ ಆಯ್ಕೆ ಮಾಡಲಾಗುತ್ತದೆ. ಹೇಗೂ, ಈ ಅಧ್ಯಾಯದಲ್ಲಿರುವ ಅತ್ಯಂಥ ಅಮೋಘವಾದ ಗಾನವೃಂದದ ವಿಷಯದಲ್ಲಿ, ಅಲ್ಲಿ ಪ್ರಶ್ನೆಯು "ನೀನು ಹಾಡಬಲ್ಲೆವೋ?" ಎಂದಾಗಲಿ ಅಥವಾ "ನೀವು ಎಷ್ಟು ಅಧಿಕೃತ ಸಂಗೀತ ತರಬೇತಿ ಹೊಂದಿರುವಿ?" ಎಂದಾಗಿ ಆಗಿರಲಿಲ್ಲ, ಆದರೆ "ನೀನು ಯಾವ ರೀತಿಯ ವ್ಯಕ್ತಿಯಾಗಿರುವಿ?" ಎಂಬುದೇ ಆಗಿತ್ತು. ಯೋಹಾನನು ಹೀಗೆ ಬರೆದನು,

> **ಸ್ತ್ರೀ ಸಹವಾಸದಿಂದ ಮಲಿನರಾಗದವರು ಇವರೇ; ಇವರು ಕನ್ಯೆಯರಂತೆ ನಿಷ್ಕಳಂಕರು. ಯಜ್ಞದ ಕುರಿಯಾದಾತನು ಎಲ್ಲಿ ಹೋದರೂ ಇವರು ಆತನ ಹಿಂದೆ ಹೋಗುವರು. ಇವರು ಮನುಷ್ಯರೊಳಗಿಂದ ಸ್ವಕೀಯ ಜನರಾಗಿ ಕೊಂಡುಕೊಳ್ಳಲ್ಪಟ್ಟು ದೇವರಿಗೂ ಯಜ್ಞದ ಕುರಿಯಾದಾತನಿಗೂ ಪ್ರಥಮಫಲದಂತಾದರು.**

ವ್ಯಾಖ್ಯಾನಕಾರರು 144,000ನ್ನು ಒಂದು ಅಕ್ಷರಶಃ ಸಂಖ್ಯೆಯನ್ನಾಗಿ ಮಾಡುವದಕ್ಕೆ ಪ್ರಯತ್ನಿಸಿರುತ್ತಾರೆ (7:4ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಉದಾಹರಣೆಗೆ, ಕೆಲವರು 144,000 ಮಂದಿ ಆತ್ಮೀಕ ಗಣ್ಯರು, ಮತ್ತು ಅವರು ಮಾತ್ರವೇ ಪರಲೋಕಕ್ಕೆ ಹೋಗುವರು ಎಂದು ಹೇಳುತ್ತಾರೆ. ವಿಶ್ವಾಸಿಗಳೊಳಗೆ ಮಿಕ್ಕವರು, ಅವರು ಹೇಳುವ ಪ್ರಕಾರ, ನವೀಕರಿಸಲ್ಪಟ್ಟಿರುವ ಭೂಮಿಯಲ್ಲಿಯೇ ತೃಪ್ತಿ ಪಟ್ಟಿಕೊಳ್ಳಬೇಕು. ಅವರು ಈ "144,000"ನ್ನು ಅಕ್ಷರಶಃ ಎಂದೆನ್ನುವದಾದರೆ, ಸ್ಥಿರತೆಯನ್ನು ಕಾಪಾಡಿಕೊಳ್ಳುವದಕ್ಕೆ, ಅವರು ಮಿಕ್ಕ ಸಾಂಕೇತಿಕತೆಯನ್ನೆಲ್ಲಾ ಅಕ್ಷರಶಃ ಎಂದು ಅಂಗೀಕರಿಸಿಕೊಳ್ಳಬೇಕು. 7ನೇ ಅಧ್ಯಾಯದ ಪ್ರಕಾರ, 144,000 ಮಂದಿಯಲ್ಲಿ ಎಲ್ಲರೂ ಯೆಹೂದ್ಯರು, ಮತ್ತು 14ನೇ ಅಧ್ಯಾಯದ ಪ್ರಕಾರವಾಗಿ, 144,000 ಮಂದಿಯೆಲ್ಲಾ ಲೈಂಗಿಕ ಸಂಬಂಧವನ್ನಿಟ್ಟುಕೊಳ್ಳದ ಪುರುಷರಾಗಿದ್ದಾರೆ: 144,000 ಯೆಹೂದಿ ಪುರುಷ ಕನ್ಯೆಯರು! ಆ ಅರ್ಹಗೊಳಿಸುವ ಪದಗಳು ಹೆಚ್ಚು ಕಡಿಮೆ ಎಲ್ಲರನ್ನೂ - ಈ ಸಂಖ್ಯೆಯು ಅಕ್ಷರಶಃ ಎಂದು ಪ್ರತಿಪಾದಿಸುವ ಗುಂಪುಗಳ ನಾಯಕರೂ ಸೇರಿದಂತೆ - ಹೊರಹಾಕುತ್ತವೆ.

4 ಮತ್ತು 5 ವಚನಗಳ ಉದ್ದೇಶವು ಸೂಪರ-ದೇವಜನರನ್ನು ಬಣ್ಣಿಸುವದಾಗಿರುವದಿಲ್ಲ. ಬದಲಾಗಿ, ಮೃಗದ ಮೇಲೆ ಜಯವನ್ನು ಗಳಿಸಬೇಕಾದರೆ ಪ್ರತಿಯೊಬ್ಬ ಕ್ರೈಸ್ತನಿಗೆ ಅಗತ್ಯವಿರುವ ಗುಣಸ್ವಭಾವಗಳ ಕುರಿತು ಸಂಕ್ಷಿಪ್ತ ವಿವರಣೆ ನೀಡುವದೇ ಆಗಿರುತ್ತದೆ.

*ಮೊದಲು ಅಗತ್ಯವಿರುವ ಗುಣವೆಂದರೆ ನಂಬಿಗಸ್ತಿಕೆ.* ಮೊದಲ ಗುಣವು ಈ ಮಾತುಗಳಲ್ಲಿ ವ್ಯಕ್ತಪಡಿಸಲ್ಪಟ್ಟಿದೆ: **ಸ್ತ್ರೀ ಸಹವಾಸದಿಂದ ಮಲಿನರಾಗದವರು ಇವರೇ; ಇವರು ಕನ್ಯೆಯರಂತೆ ನಿಷ್ಕಳಂಕರು.** ಮೂಲ ಗ್ರೀಕ್ ವಾಕ್ಯದಲ್ಲಿ ಈ ವಾಕ್ಯದ ಒಂದು ಭಾಗವು παρθένοι γάρ εἰσιν (*parthenoi gar eisin*) ಎಂದಿರುತ್ತದೆ, ಅಕ್ಷರಶಃ "ಯಾಕೆಂದರೆ ಅವರು ಕನ್ಯೆಯರು" (KJV).

ಹಲವಾರು ವ್ಯಾಖ್ಯಾನಕಾರರು ವಾದಿಸುವದೇನೆಂದರೆ ಯೋಹಾನನು ಅವಿವಾಹಿತರನ್ನು ವಿವಾಹಿತರಿಗಿಂತ ಹೆಚ್ಚು ಭಕ್ತಿವಂತರೆಂದು ಪರಿಗಣಿಸಿಕೊಂಡಿದ್ದನು ಎಂಬುದೆ. ಇವರಲ್ಲಿ ಎಲ್ಲರೂ ಕ್ಯಾಥೋಲಿಕ್ ವ್ಯಾಖ್ಯಾನಕಾರರಾಗಿರುವದಿಲ್ಲ; ಅವರಲ್ಲಿ ಕೆಲವರು ಪ್ರೊಟೆಸ್ಟೆಂಟ್ ವ್ಯಾಖ್ಯಾನಕಾರರಿದ್ದಾರೆ. ಕೆಲವೊಬ್ಬ "ಲಿಬರಲ್" ಪ್ರೊಟೆಸ್ಟೆಂಟ್ ವ್ಯಾಖ್ಯಾನಕಾರರು ಅಂಥ ನಿಲುವು ಹೊಂದಿರುವದಕ್ಕೆ ಯೋಹಾನನು ತಾರ್ಕಿಕತೆಯಿಲ್ಲವನಾಗಿದ್ದನು ಎಂದು

ಯೋಚಿಸುತ್ತಾರೆ, ಆದರೆ ಆತನು ಈ ವಾಕ್ಯಭಾಗದಲ್ಲಿ ಮದುವೆಯಾಗದೆ ಇರುವದು ಅಗತ್ಯವೆಂಬುದನ್ನು ಕುರಿತು ಕಲಿಸುತ್ತಿದ್ದಾನೆಂದು ವಾದಿಸುತ್ತಾರೆ. ಅವಿವಾಹಿತ ಸ್ಥಿತಿಯು ವಿವಾಹಿತಕ್ಕಿಂತ ಉನ್ನತವಾದದ್ದೆಂಬ ನಂಬಿಕೆಯು ಸಭೆಯ ಇತಿಹಾಸದೊಳಗೆ ಅನಂತರದಲ್ಲಿ ಅಭಿವೃದ್ಧಿಗೊಳಿಸಲಾದ ನಿಲುವು ಆಗಿರುತ್ತದೆ; ಆದಿ ಸಭೆಯಲ್ಲಿ ಇಂತಹ ನಂಬಿಕೆಯು ಇರಲಿಲ್ಲ. ಸುಳ್ಳು ಸಿದ್ಧಾಂತವು ಎದ್ದೇಳುವದೆಂಬುದಾಗಿ ಪೌಲನು ಮುಂತಿಳಿಸಿದ್ದನು (1 ತಿಮೊಥೆ 4:3). ಈ ದೋಷಪೂರಿತ ನಿಲುವು ಮಠಗಳು ಹಾಗೂ ಕಾನ್ವೆಂಟ್‌ಗಳು ಸ್ಥಾಪಿಸಲ್ಪಡುವದರಲ್ಲಿ ಫಲಿತಗೊಂಡಿತ್ತು.

ಬೈಬಲಿನ ಆರಂಭದಿಂದ ಅಂತ್ಯದ ವರೆಗೂ, ದಾಂಪತ್ಯವು ಪರಿಶುದ್ಧ ಹಾಗೂ ಆಶೀರ್ವಾದ ಎಂಬುದಾಗಿ ಪರಿಗಣಿಸಲ್ಪಟ್ಟಿರುತ್ತದೆ. ಆದಾಮನು ಅವಿವಾಹಿತ ಸ್ಥಿತಿಯಲ್ಲಿರುವ ವೇಳೆ, ದೇವರು ಹೀಗಂದುಕೊಂಡನು, "ಮನುಷ್ಯನು ಒಂಟಿಗನಾಗಿರುವದು ಒಳ್ಳೇದಲ್ಲ; ಅವನಿಗೆ ಸರಿಬೀಳುವ ಸಹಕಾರಿಯನ್ನು ಉಂಟುಮಾಡುವೆನು" (ಆದಿಕಾಂಡ 2:18). ಪೌಲನು ಯೇಸುವಿನೊಂದಿಗೆ ಸಭೆಗಿರುವ ಸಂಬಂಧವನ್ನು ಗಂಡನಿರುವ ಮದಲಗಿತ್ತಿಗೆ ಹೋಲಿಕೆ ಮಾಡಿದನು (ಎಫೆಸ 5:22-33). ಸಭೆಯ ಪ್ರಥಮ ನಾಯಕರಾದ ಅಪೊಸ್ತಲರು ಮದುವೆಯಾಗಿದ್ದರು (ಮಾರ್ಕ 1:30; 1 ಕೊರಿಂಥ 9:5). ಅಷ್ಟುಮಾತ್ರವಲ್ಲದೆ, ಕರ್ತನ ಸಭೆಯ ಹಿರಿಯರು (ಮೇಲ್ವಿಚಾರಕರು) ವಿವಾಹಿತ ಪುರುಷರಾಗಿಬೇಕು (1 ತಿಮೊಥೆ 3:2; ತೀತನಿಗೆ 1:6). ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೀಗೆ ಹೇಳಿದನು, "ಗಂಡಹೆಂಡರ ಸಂಬಂಧವು ನಿಷ್ಕಳಂಕವಾಗಿರಬೇಕು" (ಇಬ್ರಿಯ 13:4).

ಪೌಲನು ಒಮ್ಮೆ ಹೀಗೆ ಬರೆದದ್ದು ನಿಜವೇ, "ಈಗಿನ ಕಷ್ಟಕಾಲದ ನಿಮಿತ್ತ ಜನರು ಇದ್ದ ಹಾಗೇ ಇರುವದು ಒಳ್ಳೇದೆಂದು ಭಾವಿಸುತ್ತೇನೆ" (1 ಕೊರಿಂಥ 7:26) - ಅಂದರೆ, ಅವಿವಾಹಿತವಾಗಿರುವದು (ನೋಡಿರಿ 1 ಕೊರಿಂಥ 7:1). ಹೇಗೂ, ಈ ಬುದ್ಧಿವಾದವು ಒಂದು ವಿಶಿಷ್ಟವಾದ ಪರಿಸ್ಥಿತಿಗೋಸ್ಕರ ಕೊಟ್ಟ ಸಲಹೆಯಾಗಿತ್ತು ಮತ್ತು ವಿವಾಹವನ್ನು ಒಟ್ಟಾರೆಯಾಗಿ ಖಂಡಿಸುವಿಕೆ ಆಗಿರುವದಿಲ್ಲ. ಅಂತಿಮ ವಿಶ್ಲೇಷಣೆಯಲ್ಲಿ, ಅವಿವಾಹಿತ ಸ್ಥಿತಿಯು ವಿವಾಹಿತ ಸ್ಥಿತಿಗಿಂತ ಹೆಚ್ಚು ಪರಿಶುದ್ಧವೇನೂ ಅಲ್ಲ, ಆದರೆ ವಿವಾಹಿತ ಸ್ಥಿತಿ ಸಹ ಅವಿವಾಹಿತ ಸ್ಥಿತಿಗಿಂತ ಹೆಚ್ಚು ಪರಿಶುದ್ಧವೂ ಅಲ್ಲ. ವಿವಾಹವಾಗದೆ ಇರುವವರು ಕರ್ತನಿಗಾಗಿ ವಿಶಿಷ್ಟವಾದ ಸೇವೆಯನ್ನು ಒದಗಿಸಬಲ್ಲರು (ನೋಡಿರಿ ಮತ್ತಾಯ 19:10-12).

ಸನ್ನಿವೇಶಕ್ಕನುಗುಣವಾಗಿ ಅರ್ಥಮಾಡಿಕೊಳ್ಳುವದಾದರೆ, 14:4ರ ಆರಂಭಿಕ ಮಾತುಗಳು ಪ್ರಾಥಮಿಕವಾಗಿ *ಆತ್ಮೀಕ* ಪವಿತ್ರತೆಯನ್ನು ಸೂಚಿಸುತ್ತವೆ. ಹಳೆಯ ಒಡಂಬಡಿಕೆಯ ಕಾಲದಲ್ಲಿ, ಇಸ್ರಾಯೇಲವು ದೇವರ ಮದಲಗಿತ್ತಿ ಎಂದು ಕರೆಯಲ್ಪಟ್ಟಿರುತ್ತದೆ (12:2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಆಕೆಯ ಕಡೆಯಿಂದಾದ ಅಪನಂಬಿಗಸ್ತಿಕೆಯನ್ನು ವ್ಯಭಿಚಾರ ಎಂದು ಕರೆಯಲಾಗಿರುತ್ತದೆ (ನೋಡಿರಿ ಯೆರೆಮೀಯ 3:6; ಹೋಶೇಯ 4:12). ಹೊಸ ಒಡಂಬಡಿಕೆಯೊಳಗೆ ಸಭೆಯ ವಿಷಯದಲ್ಲಿ ಅದೇ ಸಾದೃಶ್ಯವನ್ನು ಬಳಸಲಾಗಿರುತ್ತದೆ. ಪೌಲನು ಸಭೆಯ ಸದಸ್ಯರಿಗೆ ಹೀಗೆ ಹೇಳಿದನು, "ಯಾಕಂದರೆ ದೇವರಲ್ಲಿರುವಂಥ ಚಿಂತೆಯಿಂದಲೇ ನಾನು ನಿಮ್ಮ ವಿಷಯದಲ್ಲಿ ಚಿಂತಿಸುತ್ತೇನೆ. ನಿಮ್ಮನ್ನು ಕ್ರಿಸ್ತನೆಂಬ ಒಬ್ಬನೇ ಪುರುಷನಿಗೆ ಶುದ್ಧ ಕನ್ಯೆಯಂತೆ ಒಪ್ಪಿಸಬೇಕೆಂದು ನಿಮ್ಮನ್ನು ಆತನಿಗೆ ನಿಶ್ಚಯಮಾಡಿದೆನಲ್ಲಾ" (2 ಕೊರಿಂಥ 11:2; ನೋಡಿರಿ ರೋಮಾ 7:2). ಯಾಕೋಬನು ಅಪನಂಬಿಗಸ್ತರಾದ ಕ್ರೈಸ್ತರನ್ನು "ವ್ಯಭಿಚಾರಿಗಳು" ಎಂದು ಕರೆದನು (ಯಾಕೋಬ 4:4). 14ನೇ ಅಧ್ಯಾಯದೊಳಗೆ ಅನಂತರದಲ್ಲಿ, ಸೈತಾನನ

ಕುಂತ್ರಗಳಿಗೆ ಮರುಳುಗೊಳ್ಳುವದನ್ನು "ಜಾರತ್ವ" ಎಂದು ಕರೆಯಲಾಗಿದೆ (ವ. 8). ಗ್ರೀಕ್ ವಾಕ್ಯದಲ್ಲಿ ಈ ಪದವು πορνεία (*porneia*) ಎಂದಾಗಿದ್ದು, "ಲೈಂಗಿಕ ಅನೈತಿಕತೆ"ಗೆ ಬಳಸುವ ಪದವಾಗಿದೆ. ಪ್ರಕಟನೆ ಪುಸ್ತಕದಲ್ಲಿರುವ ಇತರ ವಾಕ್ಯಭಾಗಗಳು ವಿಗ್ರಹಾರಾಧನೆಯನ್ನು ಜಾರತ್ವವೆಂಬುದಾಗಿ ಸೂಚಿಸಲ್ಪಟ್ಟಿದೆ (ನೋಡಿರಿ 17:2, 4; 18:3, 9; 19:2).

ಕೆಲವು ಲೇಖಕರು 4ನೇ ವಚನದಲ್ಲಿ ಏಕೆ ಚಿತ್ರಣವು ತಮ್ಮನ್ನು ನಿಷ್ಕಳಂಕರನ್ನಾಗಿ ಕಾಪಾಡಿಕೊಂಡು ಪುರುಷರದ್ದಾಗಿದೆ, ಸಾಮಾನ್ಯವಾಗಿ ಸಭೆಯು, ಕ್ರಿಸ್ತನ ಮದಲಗಿತ್ತಿ (ಎಫೆಸ 5:22-33) ಮತ್ತು ಗರ್ಭಿಣಿಯಾಗಿರುವ ಸ್ತ್ರೀ (ಪ್ರಕಟನೆ 12:1-17) ಎಂಬಂತಹ ಸ್ತ್ರೀಲಿಂಗ ಪದಗಳಿಂದ ಬಣ್ಣಿಸಲ್ಪಟ್ಟಿದೆಯಲ್ಲವೇ ಎಂದು ಚಕಿತಗೊಳ್ಳುತ್ತಾರೆ. 14:1-5 ವಚನಗಳು ಕರ್ತನ ಸೈನ್ಯದ ಕುರಿತ ಚಿತ್ರಣವನ್ನು ನೀಡುತ್ತದೆಂಬ ಮನವರಿಕೆಯುಳ್ಳವರು ಗಮನಕ್ಕೆ ತರುವೇನೆಂದರೆ, ಹಳೆಯ ಒಡಂಬಡಿಕೆಯಲ್ಲಿ, ಸೈನಿಕರು ಯುದ್ಧಕ್ಕೆ ಮುಂಚೆ ಲೈಂಗಿಕ ಚಟುವಟಿಕೆಗಳಿಂದ ದೂರವಿಟ್ಟುಕೊಳ್ಳಬೇಕಾಗಿತ್ತು (ನೋಡಿರಿ ಧರ್ಮೋಪದೇಶಕಾಂಡ 23:9, 10). ಇಲ್ಲಿ ಬಳಸಲಾಗಿರುವ ಚಿತ್ರಣದ ಹಿನ್ನಲೆಯು ಅದೇ ಆಗಿರುತ್ತದೆಂದು ಇವರು ನಂಬುತ್ತಾರೆ. ಹೇಗೂ, ಪುರುಷ ಚಿತ್ರಣಕ್ಕಿರುವ ಸನ್ನಿವೇಶಾತ್ಮಕ ಉದ್ದೇಶವು 8ನೇ ವಚನದಲ್ಲಿ ಸಿಕ್ಕುತ್ತದೆ, ಅದು ಮಹಾ ಬಾಬೆಲಿನ ಕುರಿತು ಸೂಚಿಸುತ್ತದೆ. 17ನೇ ಅಧ್ಯಾಯದಲ್ಲಿ ಬಾಬೆಲನ್ನು ಒಬ್ಬ ಜಾರಸ್ತ್ರೀಯಾಗಿ, ಒಬ್ಬ ಸ್ತ್ರೀ ವ್ಯಭಿಚಾರಿಯಾಗಿ ಚಿತ್ರಿಸಲಾಗಿದೆ - ಮತ್ತು ಜೀವನದಲ್ಲಿ ಜಾರಸ್ತ್ರೀಯ ಉದ್ದೇಶವು *ಪುರುಷರನ್ನು* ಮೋಹದಿಂದ ಆಕರ್ಷಿಸುವದೇ ಆಗಿರುತ್ತದೆ. ಪ್ರಕಟನೆ 14:4ನೇ ವಚನವು 144,000 ಮಂದಿಯು ಜಾರಸ್ತ್ರೀಯ ಕರೆಯನ್ನು ನಿರ್ಲಕ್ಷ್ಯ ಮಾಡಿದ್ದರು ಎಂಬುದನ್ನು ಒತ್ತಿ ಹೇಳುತ್ತದೆ. ಸರಳವಾದ ಮಾತುಗಳಲ್ಲಿ, ಅವರು ಕೈಸರನ ವಿಗ್ರಹದ ಮುಂದೆ ತಮ್ಮ ಮೊಣಕಾಲೂರಿರಲಿಲ್ಲ. ಅವರು ತಮ್ಮ ಕರ್ತನಿಗೆ ನಿಷ್ಠಾವಂತರಾಗಿ ಉಳಿದಿದ್ದರು.

4ನೇ ವಚನದ ಆರಂಭಿಕ ಮಾತುಗಳು ಪ್ರಾಥಮಿಕವಾಗಿ ಆತ್ಮೀಕ ಪವಿತ್ರತೆಯನ್ನು ಸೂಚಿಸುತ್ತವೆಂದು ಈ ಮುಂಚೆ ಹೇಳಲಾಗಿರುತ್ತದೆ. ಅನ್ಯಧರ್ಮಿಯ ಆರಾಧನೆಗೆ ಸಂಬಂಧಿಸಿದಂತೆ ಇರುವ ಜಾರತ್ವವನ್ನು ಪರಿಗಣನೆಗೆ ತೆಗೆದುಕೊಳ್ಳುವದಾದರೆ, ಒಬ್ಬ ಕ್ರೈಸ್ತನು ಚಕ್ರವರ್ತಿಯ ಆರಾಧನೆಯನ್ನು ಆಚರಣೆ ಮಾಡುವ ಮೂಲಕ ಆತ್ಮೀಕ ವ್ಯಭಿಚಾರ ಮಾಡಿದವನಾಗಿದ್ದನು, ಅಲ್ಲದೆ ಆತನು ಬಹುಶಃ ಶಾರೀರಿಕ ಹಾದರವನ್ನು ಸಹ ಮಾಡಿರಬಹುದಿತ್ತು (ನೋಡಿರಿ 2:14). 4ನೇ ವಚನವು ಸೂಚಿಸುವದೇನೆಂದರೆ ಜಯವನ್ನು ಗಳಿಸಿದವರು ಕರ್ತನಿಗೆ *ಪ್ರತಿಯೊಂದು* ವಿಧದಲ್ಲಿ ನಂಬಿಗಸ್ತರಾಗಿದ್ದರು. ಇವರು ಮಾತ್ರವೇ ಅಂದರೆ "ನಿರ್ಮಲ ಚಿತ್ತರು ... ದೇವರನ್ನು ನೋಡುವರು" (ಮತ್ತಾಯ 5:8).

*ಅಗತ್ಯವಿರುವ ಎರಡನೆಯ ಗುಣವು ಒಬ್ಬ ಹಿಂಬಾಲಕನಾಗಿರುವದು.* 4ನೇ ವಚನದ ಮೊದಲ ಭಾಗವು ಜಯವನ್ನು ಗಳಿಸುವದಕ್ಕೆ ಒಂದು ನಕಾರಾತ್ಮಕ ಅರ್ಹತೆಯನ್ನು ಕೊಟ್ಟಿತು: 144,000 ಮಂದಿ ಕೆಲವೊಂದು ಅಭ್ಯಾಸಗಳಿಂದ ದೂರವಿಟ್ಟುಕೊಂಡಿದ್ದರು. ವಚನದ ಮುಂದಿನ ಪರಿಚ್ಛೇದವು ಸಕಾರಾತ್ಮಕ ಅರ್ಹತೆಯನ್ನು ಒದಗಿಸುತ್ತದೆ: **ಯಜ್ಞದ ಕುರಿಯಾದಾತನು ಎಲ್ಲಿ ಹೋದರೂ ಇವರು ಆತನ ಹಿಂದೆ ಹೋಗುವರು.**

ಪುರಾತನ ಎಫೆಸದಲ್ಲಿ, ವ್ಯಭಿಚಾರ ಗೃಹವೊಂದರ ಅವಶೇಷಗಳು ಪಟ್ಟಣದ ಹೃದಯ ಭಾಗದಲ್ಲಿರುತ್ತವೆ. ಸುಮಾರು ನೂರು ಗಜಗಳಷ್ಟು ದೂರದಲ್ಲಿ, ಒಬ್ಬ ಉದ್ಯಮಶೀಲ

ಜಾರಸ್ತ್ರೀಯು ಅಮೃತಶೀಲೆಯ ರಸ್ತೆಯಲ್ಲಿ ಆಕೆಯ ವ್ಯಾಪಾರದ ಸ್ಥಳಕ್ಕೆ ನಡಿಸುವಂತೆ ದಾರಿ ತೋರುವದಕ್ಕಾಗಿ ಒಂದು ಹೆಜ್ಜೆಯ ಗುರುತನ್ನು ಕೆತ್ತಿದ್ದಳು. ಆ ಹೆಜ್ಜೆಯ ಜಾಡಿನ ಪಕ್ಕದಲ್ಲಿ, "ನನ್ನನ್ನು ಹಿಂಬಾಲಿಸು" ಎಂಬ ಮಾತುಗಳು ಕಲ್ಲಿನೊಳಗೆ ಉಳಿಯಿಂದ ಕೆತ್ತಲ್ಪಟ್ಟಿದ್ದವು. 4ನೇ ವಚನದ ಈ ಮೊದಲನೆಯ ಭಾಗವು ಜಯಶಾಲಿಗಳು "ಮಹಾ ಜಾರಸ್ತ್ರೀಯ" ಹಿಂದೆ ಹೋಗಿರ*ಲಿಲ್ಲ* ಎಂಬುದನ್ನು ಒತ್ತಿ ಹೇಳುವದಾಗಿತ್ತು (17:1); ಈಗ ವಾಚಕನಿಗೆ ಅವರು ಯೇಸುವನ್ನು ಹಿಂಬಾಲಿಸಿ*ದರು* ಎಂದು ತಿಳಿಸಲಾಗುತ್ತದೆ.

ಯೇಸು ಇದಕ್ಕಿಂತಲೂ ಹೆಚ್ಚು ಬೇಡಿಕೆಯುಳ್ಳ ಬೇರೊಂದು ಸವಾಲನ್ನು ಎಂದಿಗೂ ಕೊಡಲಿಲ್ಲ: "ನನ್ನನ್ನು ಹಿಂಬಾಲಿಸು" (ನೋಡಿರಿ ಮಾರ್ಕ 2:14; 10:21; ಲೂಕ 9:59; ಯೋಹಾನ 1:43; 21:19-22). ಯೇಸುವನ್ನು ಹಿಂಬಾಲಿಸುವದರಲ್ಲಿ ಗತಕಾಲದೊಂದಿಗಿನ ಸಂಬಂಧವನ್ನು ಕಡಿದುಕೊಂಡು ಎಲ್ಲದರಲ್ಲಿಯೂ ಆತನಿಗೆ ಆದ್ಯತೆಯನ್ನು ಕೊಡುವದು ಸೇರಿತ್ತು. ಯೇಸು ಈಗಲೂ ಹೇಳುವದೇನೆಂದರೆ, "ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ" (ಮಾರ್ಕ 8:34; ನೋಡಿರಿ ಮಾರ್ಕ 8:35-37). 144,000 ಮಂದಿ ಯೇಸುವಿನ ಸವಾಲನ್ನು ಅಂಗೀಕರಿಸಿಕೊಂಡಿದ್ದರು ಮತ್ತು ಆತನು ಹೋದ ಕಡೆಯಲ್ಲೆಲ್ಲಾ - ಶ್ರಮೆ ಹಾಗೂ ಮರಣದ ವರೆಗೆ ಸಹ - ಆತನನ್ನು ಹಿಂಬಾಲಿಸಿದ್ದರು.

ಕೆಲವರು ಆಕ್ಷೇಪಣೆಯೆತ್ತಬಹುದು: "ನಿಶ್ಚಯವಾಗಿಯೂ ಕರ್ತನು ನಮ್ಮಿಂದ ಆ ವಿಧವಾದ ಸಮರ್ಪಣೆಯನ್ನು ಎದುರುನೋಡುವದಿಲ್ಲ." ಅದು ನಿಜವೊ? ಪೇತ್ರನು ಅದಕ್ಕೆ ತದ್ವಿರುದ್ಧವಾಗಿ ಬರೆದನು: ಇದಕ್ಕಾಗಿಯೇ ನೀವು ಕರೆಯಲ್ಪಟ್ಟಿರಿ; ಕ್ರಿಸ್ತನು ಸಹ ನಿಮಗೋಸ್ಕರ *ಬಾಧೆಯನ್ನನುಭವಿಸಿ* ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿಹೋದನು" (1 ಪೇತ್ರ 2:21; ಒತ್ತಿ ಹೇಳಿದ್ದು ನನ್ನದು).

*ಅಗತ್ಯವಿರುವ ಮೂರನೆಯ ಗುಣವು ಆತನು ಕರೆಯುವ ಪ್ರಕಾರ "ಪ್ರಥಮ ಫಲ*ಗಳು." 144,000 ಮಂದಿಯು ಕುರಿಯಾದಾತನನ್ನು "ಮರಣಾಂಧಕಾರದ ಕಣಿವೆಯಲ್ಲಿ" ಹಿಂಬಾಲಿಸಿದ್ದರು (ಕೀರ್ತನೆ 23:4), ಆದರೆ ಜಯಕ್ಕಾಗಿ ಅವರು ಶ್ರೇಯಸ್ಸನ್ನು ತೆಗೆದುಕೊಳ್ಳಲಿಲ್ಲ. ತಾವು **ಮನುಷ್ಯರೊಳಗಿಂದ ಸ್ವಕೀಯ ಜನರಾಗಿ ಕೊಂಡುಕೊಳ್ಳಲ್ಪಟ್ಟು ದೇವರಿಗೂ ಯಜ್ಞದ ಕುರಿಯಾದಾತನಿಗೂ ಪ್ರಥಮಫಲದಂತಾದರು** ಎಂಬುದನ್ನು ಒಪ್ಪಿಕೊಂಡವರಾಗಿದ್ದರು - ಯೇಸುವಿನ ರಕ್ತದಿಂದ ಕೊಂಡುಕೊಳ್ಳಲ್ಪಟ್ಟವರು ಮತ್ತು ವಿಮೋಚಿಸಲ್ಪಟ್ಟವರು (ಅಪೊಸ್ತಲರ ಕೃತ್ಯಗಳು 20:28; 1 ಕೊರಿಂಥ 6:19, 20; ಎಫೆಸ 1:7; 1 ಪೇತ್ರ 1:18, 19).

"ಪ್ರಥಮ ಫಲಗಳು" ಎಂಬುದು ಒಂದು ಅಸಕ್ತಿಕರವಾದ ಮಾತಾಗಿರುತ್ತದೆ, ಹಳೆಯ ಒಡಂಬಡಿಕೆಯನ್ನು ಅಧ್ಯಯನ ಮಾಡಿರುವವರಿಗೆ ಒಂದು ವಿಶೇಷ ಅರ್ಥವನ್ನು ಹೊಂದಿರುವ ಪದವಾಗಿದೆ. ಮೂಲತಃ, ಈ ಪದಗುಚ್ಛವು ದೇವರಿಗೆ ಯಜ್ಞಮಾಡುವದಕ್ಕಾಗಿ ತರಲ್ಪಡುತ್ತಿದ್ದ ಸುಗ್ಗಿಯ ಪ್ರಥಮ ಫಲವನ್ನು ಸೂಚಿಸುತ್ತಿತ್ತು. ಈ ಕಾಣಿಕೆಯ ಕುರಿತ ಮೊದಲ ಸ್ಪಷ್ಟವಾದ ಉಲ್ಲೇಖವು ವಿಮೋಚನಕಾಂಡ 23:19: "ನಿಮ್ಮ ಬೆಳೆಯ ಪ್ರಥಮಫಲದಲ್ಲಿ ಉತ್ಕೃಷ್ಟವಾದದ್ದನ್ನು ನಿಮ್ಮ ದೇವರಾದ ಯೆಹೋವನ ಮಂದಿರಕ್ಕೆ ತರಬೇಕು." ಹೇಗೂ, ಕಾಲವು ಗತಿಸಿದ ಹಾಗೆ, ಈ ಪದವು ಸುಗ್ಗಿಯಲ್ಲಿ ಅತ್ಯುತ್ತಮವಾದ ಭಾಗವನ್ನು ಸೂಚಿಸುವದಾಗಿ ಮಾರ್ಪಟ್ಟಿತು. ಕೆಲವರು ಈ ಪದಗುಚ್ಛದಲ್ಲಿ 144,000 ಮಂದಿ ಎಲ್ಲಾ ಕ್ರೈಸ್ತರನ್ನು ಪ್ರತಿನಿಧಿಸುವದಿಲ್ಲ, ಆದರೆ

ಪ್ರಥಮ ಶತಮಾನದಲ್ಲಿ ಜೀವಿಸಿ ಮರಣ ಹೊಂದಿರುವ ಮತ್ತು ಮರಣಿಸಿದ ಅನೇಕ ನಂಬಿಗಸ್ತರೊಳಗೆ ಪ್ರಥಮರು ಎಂಬುದಕ್ಕೆ ಪುರಾವೆ ಆಗಿರುತ್ತದೆಂದು ಕಾಣುತ್ತಾರೆ. ಈ ಅರ್ಥನಿರೂಪಣೆಯು ಸರಿಯಾಗಿ ಇರಬಹುದು, ಯಾಕೆಂದರೆ ಆ ಪದಕ್ಕೆ ಈ ಸೂಚ್ಯಾರ್ಥವು ಇರಬಲ್ಲದು (ನೋಡಿರಿ ರೋಮಾ 16:5; KJV; 1 ಕೊರಿಂಥ 15:23; 16:15). ಹೇಗೂ, ಒಬ್ಬ ಲೇಖಕನು ಗಮನಕ್ಕೆ ತಂದ ಪ್ರಕಾರ,

> "ಪ್ರಥಮ ಫಲಗಳು" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದದ ಮೂಲ ಅರ್ಥವು ಉಳಿದ ಬೆಳೆಯನ್ನು ಲೌಕಿಕ ಬಳಕೆಗಾಗಿ ಬಿಡುಗಡೆಗೊಳಿಸುತ್ತಿದ್ದಂಥ ದೇವರಿಗೆ ಸಲ್ಲಿಸುವ ಸ್ಮರಣಾರ್ಥಕ ಕಾಣಿಕೆಯಾಗಿತ್ತಾದರೂ, ಅದು ಬಹಳಷ್ಟು ಸಾರಿ LXX [ಸೆಪ್ಟುಜೆಂಟ್, ಹಳೆಯ ಒಡಂಬಡಿಕೆಯ ಗ್ರೀಕ್ ತರ್ಜುಮೆ] ಒಂದು ಕಾಣಿಕೆ ಅಥವಾ ಯಜ್ಞ ಎಂಬುದಕ್ಕಿಂತ ಹೆಚ್ಚಿನ ಅರ್ಥವನ್ನು ಕೊಡದಂಥ ಪದವಾಗಿ ಮಾರ್ಪಟ್ಟಿರುತ್ತದೆ.[7]

ಈ ಅರ್ಥದಲ್ಲಿ, ಪದವು ನಂಬಿಗಸ್ತರಾದ ಇಸ್ರಾಯೇಲ್ಯರಿಗೆ (ಯೆರೆಮೀಯ 2:3) ಮತ್ತು ನಂಬಿಗಸ್ತ ಕ್ರೈಸ್ತರಿಗೆ (ಯಾಕೋಬ 1:18) ಅನ್ವಯಿಸಲ್ಪಟ್ಟಿತು. ರೋಮನ್ ಸಾಮ್ರಾಜ್ಯವು ಕ್ರೈಸ್ತರನ್ನು ನಿಷ್ಪ್ರಯೋಜಕರಿಗಿಂಥ ಘೋರವಾದವರೆಂದು ಭಾವಿಸಿಕೊಂಡಿರಬಹುದು, ಆದರೆ ಅವರನ್ನು ಅತ್ಯಂಥ ಉತ್ತಮವಾದವರು, ಉತ್ಕೃಷ್ಟವಾದವರು - "ಪ್ರಥಮ ಫಲಗಳು" ಎಂದು ಪರಿಗಣಿಸಿಕೊಂಡಿದ್ದನು.

**ವಚನ 5.** ತನ್ನ ಸ್ವಂತ ಜೀವಿತವನ್ನು ಸದ್ಗುಣವುಳ್ಳವರಾದ 144,000 ಮಂದಿಯೊಂದಿಗೆ ಹೋಲಿಕೆ ಮಾಡಿಕೊಳ್ಳುವ ವಾಚಕನು 5ನೇ ವಚನವನ್ನು ತಲುಪುವ ಹೊತ್ತಿಗೆ ತನ್ನಲ್ಲಿ ಕೊರತೆಯಿರುತ್ತದೆಂಬ ಭಾವಗಳೊಂದಿಗೆ ತತ್ತರಿಸುತ್ತಿರಬಹುದಾಗಿದೆ. ಹಾಗಿರುವದಾದಲ್ಲಿ, ಈ ವಚನದಲ್ಲಿ ಕಂಡು ಬರುವ ದೇವಜನರ ಕೊನೆಯ ಅರ್ಹತೆಯು ಒಂದು ಕುಸಿದು ಬೀಳುವಂತೆ ಮಾಡುವ ಹೊಡೆತವನ್ನು ಕೊಡಬಹುದಾಗಿದೆ.

*ಅಂತಿಮ ಗುಣವು ನಿರ್ದೋಷಿಗಳಾಗಿರುವದು.* **ಇವರ ಬಾಯಲ್ಲಿ ಸುಳ್ಳು ಸಿಕ್ಕಲಿಲ್ಲ; ಇವರು ನಿರ್ದೋಷಿಗಳಾಗಿದ್ದಾರೆ.** NASBಯೊಳಗೆ "ನಿರ್ದೋಷಿಗಳು" ಎಂದಿರುತ್ತದೆ ಅಲ್ಲಿ, KJVಯು "ತಪ್ಪಿಲ್ಲದವರು" ಎಂದು ಬಳಸುತ್ತದೆ; RSVಯಲ್ಲಿ "ಕಳಂಕವಿಲ್ಲದವರು"; CEVಯಲ್ಲಿ "ನಿರಪರಾಧಿಗಳು" ಎಂದಿರುತ್ತದೆ. "ಇವರ ಬಾಯಲ್ಲಿ ಸುಳ್ಳು ಸಿಲ್ಲಿಲ್ಲ"? "ನಿರ್ದೋಷಿಗಳು," "ತಪ್ಪಿಲ್ಲದವರು," "ಕಳಂಕವಿಲ್ಲದವರು," "ನಿರಪರಾಧಿಗಳು"? ಕ್ರೈಸ್ತರು "ನಾವು ಪ್ರಯತ್ನಿಸುವದಕ್ಕೆ ಕಾರಣವೇ ಇರುವದಿಲ್ಲ, ಯಾಕೆಂದರೆ ನಾವು ಎಂದಿಗೂ ಪರಿಪೂರ್ಣರಾಗಿರುವದಕ್ಕೆ ಸಾಧ್ಯವೇ ಇಲ್ಲ" ಎಂದು ಕೂಗುವ ಪ್ರಲೋಭನೆಗೊಳಗಾಗುತ್ತಾರೆ!

"ನಿರ್ದೋಷಿಗಳು" ಎಂದರೆ "ಪರಿಪೂರ್ಣ" ಅಥವಾ "ಪಾಪವಿಲ್ಲದವರು" ಆಗಿರುವದೆಂದು ಅರ್ಥವಲ್ಲ. ಸ್ವತಃ ಯೋಹಾನನು ಹೀಗೆ ಹೇಳಿದನು, "ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ, ಮತ್ತು ಸತ್ಯವೆಂಬದು ನಮ್ಮಲ್ಲಿಲ್ಲ" (1 ಯೋಹಾನ 1:8). ಕ್ರೈಸ್ತರನ್ನು ದೇವರ ದೃಷ್ಟಿಯಲ್ಲಿ "ನಿರ್ದೋಷಿಗಳನ್ನಾಗಿ" ಮಾಡುವಂಥದ್ದು ಯೇಸುವಿನ ರಕ್ತವೇ ಆಗಿದೆ, ಅದು ಸಕಲ ಪಾಪಗಳನ್ನು ತೊಳೆದು ಶುದ್ಧಮಾಡುತ್ತದೆ (1 ಯೋಹಾನ 1:7). ಪೌಲನು ಕೊಲೊಸ್ಸೆಯಲ್ಲಿರುವ ಕ್ರೈಸ್ತರಿಗೆ ಹೇಳಿದ್ದೇನೆಂದರೆ "ಆತನು ನಿಮ್ಮನ್ನು ಸಹ ತನ್ನ ಕುಮಾರನ ಸ್ಥೂಲ ದೇಹದಲ್ಲಿ ಉಂಟಾದ ಮರಣದ ಮೂಲಕ ಈಗ ಸಂಧಾನಪಡಿಸಿಕೊಂಡಿದ್ದಾನೆ; ಮತ್ತು ನಿಮ್ಮನ್ನು

ಪರಿಶುದ್ಧರನ್ನಾಗಿಯೂ ನಿರ್ದೋಷಿಗಳನ್ನಾಗಿಯೂ ನಿರಪರಾಧಿಗಳನ್ನಾಗಿಯೂ ತನ್ನ ಸನ್ನಿಧಿಯಲ್ಲಿ ನಿಲ್ಲಿಸಬೇಕೆಂದಿದ್ದಾನೆ" (ಕೊಲೊಸ್ಸೆ 1:22).

ಹೇಗೂ, ಕ್ರೈಸ್ತರು ತಮಗೆ ಸಾಧ್ಯವಾದಷ್ಟು ಅತ್ಯುತ್ತಮ ಪ್ರಯತ್ನವನ್ನು ಮಾಡುವರೆಂಬುದನ್ನು ಈ ಪದವು ಸೂಚ್ಯಾರ್ಥವನ್ನು ನೀಡುತ್ತದೆ. "ನಿರ್ದೋಷಿಗಳು" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವಾದ ἄμωμος (*amōmos*) ಎಂಬುದು ಒಂದು ಯಜ್ಞಕ್ಕೋಸ್ಕರ ಬಳಸುವದಕ್ಕೆ ಯೋಗ್ಯವಾದದ್ದನ್ನು ಸೂಚಿಸುವದಾಗಿದೆ (ನೋಡಿರಿ ಯಾಜಕಕಾಂಡ 22:19, 21). *Amōmos* ಎಂಬ ಪದವು 1 ಪೇತ್ರ 1:19ರಲ್ಲಿ "ನಿಷ್ಕಳಂಕ" ಎಂದು ಅನುವಾದಿಸಲ್ಪಟ್ಟಿದೆ, ಅಲ್ಲಿ ಅದು ನಮ್ಮ ಯಜ್ಞದ ಕುರಿಯಾಗಿ ಕ್ರಿಸ್ತನನ್ನು ಸೂಚಿಸುತ್ತದೆ. ಪೌಲನು ಪ್ರತಿಯೊಬ್ಬ ಕ್ರೈಸ್ತನಿಗೆ ಈ ಕರೆಯನ್ನು ಕೊಟ್ಟನು,

> ಆದದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವದೇನಂದರೆ - ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವಯಜ್ಞವಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು. ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ … (ರೋಮಾ 12:1, 2).

144,000 ಮಂದಿಯ ನಿರ್ದೋಷತೆಯ ಕುರಿತು ನಿರ್ದಿಷ್ಟವಾದ ದೃಷ್ಟಾಂತವು ಏನೆಂದರೆ **ಇವರ ಬಾಯಲ್ಲಿ ಸುಳ್ಳು ಸಿಕ್ಕಲಿಲ್ಲ**. ಸತ್ಯವಂತರಾಗಿರುವದನ್ನು ಕರ್ತನು ಯಾವಾಗಲೂ ಅಮೂಲ್ಯವೆಂದೆಣಿಸುತ್ತಾನೆ (ಕೀರ್ತನೆ 32:2; ಯೆಶಾಯ 53:9; ಚೆಫನ್ಯ 3:13; 1 ಪೇತ್ರ 2:22; ಪ್ರಕಟನೆ 22:15), ಆದರೆ ಸುಳ್ಳು ಹೇಳಬೇಕೆಂಬ ಶೋಧನೆಯು ಯೋಹಾನನ ದಿನದಲ್ಲಂತೂ ಅಸಾಧಾರಣತೆಯಿಂದ ಕೂಡಿದ್ದಿರಬೇಕು. ಒಬ್ಬ ಕ್ರೈಸ್ತನಿಗೆ ಕೈಸರನನ್ನು "ಕರ್ತನು" ಎಂದು ಕರೆ ಎಂದು ಹೇಳಿದಾಗ, "ನಿಶ್ಚಯವಾಗಿಯೂ ನಾನು ಸಾಯಬೇಕೆಂಬುದು ದೇವರ ಬಯಕೆಯಾಗಿರಲಿಕ್ಕಿಲ್ಲ. ನನ್ನ ಮೇಲೆ ಅವಲಂಭಿತರಾಗಿರುವ ಹೆಂಡತಿ ಮತ್ತು ಮಕ್ಕಳು ನನಗಿದ್ದಾರೆ. ನಾನು ಈ ರೋಮನ್ ಅಧಿಕಾರಿಗಳನ್ನು ವಂಚಿಸಿದರೆ, ನಾನು ಆಗಲೂ ಕ್ರೈಸ್ತನಾಗಿ ಜೀವಿಸಬಲ್ಲೆನು, ಕ್ರೈಸ್ತನಾಗಿ ಆರಾಧಿಸಬಲ್ಲೆನು, ಕ್ರೈಸ್ತನಾಗಿ ಸೇವೆ ಮಾಡಬಲ್ಲೆನು. ನಾನು ಸಾಯುವದು ನಿಶ್ಚಯವಾಗಿಯೂ ದೇವರಿಗೆ ಇಷ್ಟವಿಲ್ಲ" ಎಂಬುದಾಗಿ ತರ್ಕ ಮಾಡುವದು ಸುಲಭವಾಗಿದ್ದಿರಬಹುದಾಗಿದೆ. ಬಹುಶಃ ಈ ಶೋಧನೆಯ ಕಾರಣದಿಂದಲೇ ಪವಿತ್ರಾತ್ಮನು ಈ ವಿಧವಾಗಿ ಘೋಷಿಸುವಂತೆ ಮಾಡಿರಬಹುದು, "ಆದರೆ … ಎಲ್ಲಾ *ಸುಳ್ಳುಗಾರರು* ಇವರಿಗೆ ಸಿಕ್ಕುವ ಪಾಲು ಬೆಂಕಿ ಗಂಧಕಗಳುರಿಯುವ ಕೆರೆಯೇ; ಅದು ಎರಡನೆಯ ಮರಣವು" (21:8; ಒತ್ತಿ ಹೇಳಿದ್ದು ನನ್ನದು; ನೋಡಿರಿ 21:27). ಒಂದು ಸುಳ್ಳಾಡುವ ನಾಲಿಗೆಯು ಜಯದ ಗೀತೆಯನ್ನು ಹಾಡುವದಕ್ಕೆ ಎಂದಿಗೂ ಸಾಧ್ಯವಿಲ್ಲ.

## ಸಂದೇಶಗಳೊಂದಿಗೆ ದೇವದೂತರು (14:6-13)

14:6-13ರಲ್ಲಿ, ಯೋಹಾನನು ಆಕಾಶದಲ್ಲಿ ಹಾರಾಡುತ್ತಿರುವ ಮೂವರು ದೇವದೂತರನ್ನು ಕಂಡನು, ಅವರೊಬ್ಬೊಬ್ಬರು ಮಧ್ಯಾಕಾಶದ ಪ್ರಸಂಗಪೀಠದಿಂದ[8] ಸಾರಬೇಕಾದ ವಿಶೇಷ ಸಂದೇಶವೊಂದನ್ನು ದೇವರಿಂದ ಹೊಂದಿಕೊಂಡಿದ್ದರು. ದೇವದೂತರು ಯಜ್ಞದ ಕುರಿಯಾದಾತನ ವೈರಿಗಳ ಪರಿಚಯ ಹಾಗೂ ಕೋಪದ ಏಳು ಪಾತ್ರೆಗಳು ಸುರಿಸಲ್ಪಡುವ

ವಿಶೇಷ ದರ್ಶನಗಳ ಭಾಗವಾಗಿರುತ್ತಾರೆ. 14ನೇ ಅಧ್ಯಾಯದ ಇತರ ದರ್ಶನಗಳ ವಿಷಯದಲ್ಲಿರುವ ಪ್ರಕಾರವೇ, ಮೂವರು ದೇವದೂತರ ಉದ್ದೇಶವು ಭಯಂಕರ ಸಂಕಷ್ಟವನ್ನು ಎದುರಿಸುತ್ತಿದ್ದ ಕ್ರೈಸ್ತರಿಗೆ ಆದರಣೆಯನ್ನು ತರುವದೇ ಆಗಿತ್ತು. 14ನೇ ಅಧ್ಯಾಯದ ಈ ಮೂರು ವಿಭಾಗಗಳನ್ನು ಕಾಲಾನುಕ್ರಮದ ಘಟನೆಗಳಂತೆ ಭಾವಿಸಿಕೊಳ್ಳುವ ಅವಶ್ಯಕತೆಯಿರುವದಿಲ್ಲ. ಮೂರು ವಿಭಾಗಗಳು ಕಾಲದಲ್ಲಿ ಒಂದರ ಹಿಂದೆ ಒಂದು ನಡೆಯುವಂತೆ ಮಾಡಬೇಕಾದರೆ, ನಾವು 144,000 ಮಂದಿಯನ್ನು ಯೋಹಾನನ ದಿನದಲ್ಲಿನ ನಂಬಿಗಸ್ತರನ್ನು ಪ್ರತಿನಿಧಿಸುವವರೆಂದು ಯೋಚಿಸಬೇಕಾಗುತ್ತದೆಯೇ ಹೊರತು, ಎಲ್ಲಾ ಕಾಲದ ನಂಬಿಗಸ್ತರೆಂದು ಅಲ್ಲ. ಬಹುಶಃ ಮೂರು ವಿಭಾಗಗಳನ್ನು ಒಂದೇ ಚರ್ಚೆಯಾಂಶವನ್ನು ಅರ್ಥೈಸುವ ಮೂರು ದಾರಿಗಳೆಂದು ಯೋಚಿಸಿದರೆ ಉತ್ತಮವಾಗಿರುತ್ತದೆ: "ಅಂತ್ಯದಲ್ಲಿ ದೇವರ ಜನರು ಜಯಶಾಲಿಯಾಗುವರು!"

### "ದೇವರಿಗೆ ಭಯಪಡಿರಿ" (14:6, 7)

**[6]ಮತ್ತೊಬ್ಬ ದೇವದೂತನು ಆಕಾಶಮಧ್ಯದಲ್ಲಿ ಹಾರಿಹೋಗುವದನ್ನು ಕಂಡೆನು. ಭೂನಿವಾಸಿಗಳಾಗಿರುವ ಸಕಲ ಜನಾಂಗ ಕುಲ ಪ್ರಜೆಗಳವರಿಗೂ ಸಕಲ ಭಾಷೆಗಳನ್ನಾಡುವವರಿಗೂ ಸಾರಿಹೇಳುವದಕ್ಕೆ ನಿತ್ಯವಾದ ಶುಭವರ್ತಮಾನವು ಅವನಲ್ಲಿತ್ತು.**
**[7]ಅವನು - ನೀವೆಲ್ಲರು ದೇವರಿಗೆ ಭಯಪಟ್ಟು ಆತನನ್ನು ಘನಪಡಿಸಿರಿ, ಆತನು ನ್ಯಾಯತೀರ್ಪುಮಾಡುವ ಗಳಿಗೆಯು ಬಂದಿದೆ. ಭೂಲೋಕ ಪರಲೋಕಗಳನ್ನೂ ಸಮುದ್ರವನ್ನೂ ನೀರಿನ ಬುಗ್ಗೆಗಳನ್ನೂ ಉಂಟುಮಾಡಿದಾತನಿಗೆ ನಮಸ್ಕಾರಮಾಡಿರಿ ಎಂದು ಮಹಾಶಬ್ದದಿಂದ ಹೇಳಿದನು.**

**ವಚನ 6.** ದರ್ಶನವು ಹೀಗೆ ಆರಂಭಗೊಳ್ಳುತ್ತದೆ, **ಮತ್ತೊಬ್ಬ ದೇವದೂತನು ಆಕಾಶಮಧ್ಯದಲ್ಲಿ ಹಾರಿಹೋಗುವದನ್ನು ಕಂಡೆನು.** 8:13ರಲ್ಲಿನ ಹದ್ದಿನ ಹಾಗೆಯೇ, ದೇವದೂತನು ಎಲ್ಲರೂ ತನ್ನನ್ನು ನೋಡುವ ರೀತಿಯಲ್ಲಿ **ಆಕಾಶಮಧ್ಯದಲ್ಲಿ ಹಾರಿಹೋಗು**ತ್ತಿದ್ದನು. **ಮತ್ತೊಬ್ಬ** ಎಂಬ ಪದಕ್ಕೆ ಯಾವದೇ ವಿಶೇಷ ಮಹತ್ವವಿರುವದಿಲ್ಲ; ಇಲ್ಲಿ ದೇವರ ಸಂದೇಶಕರಲ್ಲಿ ಒಬ್ಬನನ್ನು ಸೇವೆಗೆ ಕರೆದಿರುವಿಕೆಯಷ್ಟೇ ಆಗಿರುತ್ತದೆ. ಮೀಕಾಯೇಲನ ದೇವದೂತರನ್ನು ಹೊರತು ಪಡಿಸಿ (12:7), ಈ ಮುಂಚೆ ವಾಕ್ಯಭಾಗದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ದೇವದೂತನೆಂದರೆ ಏಳನೆಯ ತುತೂರಿಯನ್ನು ಓದಿದ ದೇವದೂತನೇ (11:15), ಆತನು 14:6ರಲ್ಲಿ ದೇವದೂತನಂತೂ ಆಗಿರುವದಕ್ಕೆ ಬಹಳ ಅಸಾಧ್ಯವಾದ ಮಾತು.

ದೇವದೂತನು **ಸಾರಿ ಹೇಳುವದಕ್ಕೆ ನಿತ್ಯವಾದ ಶುಭವರ್ತಮಾನ**ವನ್ನು ಹೊಂದಿದ್ದನು. ಪ್ರಕಟನೆ ಪುಸ್ತಕದೊಳಗೆ **ಶುಭವರ್ತಮಾನ** (εὐαγγέλιον, *euangelion*) ಎಂಬ ಪದವು ಕಂಡು ಬರುವದು 6ನೇ ವಚನದಲ್ಲಿ ಮಾತ್ರವೇ ಆಗಿರುತ್ತದೆ. Εὐαγγελίζω (*euangelizō*) ಎಂಬ ಪದ ಕ್ರಿಯಾಪದರೂಪವು **ಸಾರು** ಎಂದು ಅನುವಾದಿಸಲ್ಪಟ್ಟಿದ್ದು ಅದು 6ನೇ ಮತ್ತು 10:7ರಲ್ಲಿ ಕಂಡು ಬರುತ್ತದೆ. KJVಯಲ್ಲಿ "ನಿತ್ಯವಾದ ಸುವಾರ್ತೆ" ಎಂದಿರುತ್ತದೆ. ಹಸ್ತಪ್ರತಿಗಳಲ್ಲಿನ ಪುರಾವೆಯು "the" ಎಂಬುದಕ್ಕೆ ಬದಲಾಗಿ **ಒಂದು** ಎಂದಿರುತ್ತದೆ, ಆದರೆ ಅನಿರ್ದಿಷ್ಟ ಗುಣವಾಚಿ "ಒಂದು" ಎಂಬದರಲ್ಲಿ ಯಾವ ಮಹತ್ವವಾದ ಅರ್ಥವೂ ಇರುವದಿಲ್ಲ. ಉದಾಹರಣೆಗೆ, ಪೌಲನು ರೋಮಾ 1:1ರಲ್ಲಿ "ಸುವಾರ್ತೆ" ಎಂಬುದಕ್ಕೆ ಮುಂಚೆ "the" ಎಂಬ

ಒಂದು ನಿರ್ದಿಷ್ಟ ಗುಣವಾಚಿಯನ್ನು ಬಳಸಲಿಲ್ಲ.

ಎರಡನೆಯ ಬರೋಣಕ್ಕೆ ಸಮಯವು ಹತ್ತಿರವಾಗುತ್ತಿರುವ ವೇಳೆ, ದೇವದೂತರು ಅಕ್ಷರಶಃವಾಗಿಯೂ ವೈಯಕ್ತಿಕವಾಗಿಯೂ ಸುವಾರ್ತೆಯನ್ನು ಸಾರುವರೆಂದು ಕೆಲವರು ಉಪದೇಶಿಸುತ್ತಾರೆ. ಈ ವಾಕ್ಯಭಾಗವು ಅಂತಹ ಯಾವ ಭಾವನೆಯನ್ನೂ ಕಲಿಸುವದಿಲ್ಲ; ಇದೊಂದು *ದರ್ಶನ* ಆಗಿತ್ತು. ದೇವರು ಸುವಾರ್ತೆಯನ್ನು ಸಾರುವ ಜವಾಬ್ದಾರಿಯನ್ನು *ಮನುಷ್ಯರಿಗೆ* ಕೊಟ್ಟನೇ ಹೊರತು ದೇವದೂತರಿಗಲ್ಲ (ಮತ್ತಾಯ 28:18-20; ಮಾರ್ಕ 16:15, 16; ನೋಡಿರಿ 2 ಕೊರಿಂಥ 4:7).

ಕೆಲವರು ಪ್ರಕಟನೆ 14:6ರಲ್ಲಿ "ಸುವಾರ್ತೆ"ಯನ್ನು ಹೊಸ ಒಡಂಬಡಿಕೆಯೊಳಗೆ ಬೇರೆ ಕಡೆಯಲ್ಲಿ ಓದುವ ಸುವಾರ್ತೆಗಿಂತ ವ್ಯತ್ಯಾಸವಾದದ್ದೆಂದು ಮಾಡುವದಕ್ಕೆ ಪ್ರಯತ್ನಿಸುತ್ತಾರೆ, ಆದರೆ ಅದು ಇರುವಂಥ *ಒಂದೇ* ಸುವಾರ್ತೆಗಿಂತಲೂ ಬೇರೆಯಾದ ಸುವಾರ್ತೆಯೆಂದು ನಂಬುವದಕ್ಕೆ ಯಾವ ಕಾರಣವೂ ಇರುವದಿಲ್ಲ. Myer Pearlmanನು ಒತ್ತಿ ಹೇಳಿದ ಪ್ರಕಾರವಾಗಿ, "ಒಂದೇ ಒಂದು [ಸುವಾರ್ತೆ] ಮಾತ್ರವೇ ಇರುತ್ತದೆ."[9] "ಶುಭವರ್ತಮಾನ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು ಒಂದು ಜಾತಿವೈಶಿಷ್ಟದ ಅರ್ಥದಲ್ಲಿ ಯಾವದೇ ವಿಧವಾದ "ಶುಭಸಮಾಚಾರ" ಎಂಬದಾಗಿ ಹೇಳುವದಕ್ಕೋಸ್ಕರ ಬಳಸಬಹುದಾಗಿದೆ, ಆದರೆ ಮೊದಲನೆಯ ದೇವದೂತನ ಸಂದೇಶವು "ಜಾತಿವೈಶಿಷ್ಟ ಶುಭಸಮಾಚಾರ" ಆಗಿ ಅರ್ಹತೆಯನ್ನು ಹೊಂದುವದೇ ಇಲ್ಲ. ಹೇಗೂ, ಅದು ಪ್ರೇರಿತ ಮನುಷ್ಯರಿಂದ ಸಾರಲ್ಪಡುವ ಏಕೈಕ ಸುವಾರ್ತೆಯ ಒಂದು ಅಂಶವನ್ನು ಮುಂದಿಡುತ್ತದೆ. ಆದ್ದರಿಂದ ಇದು ನಮಗೆ ಆ ಸುವಾರ್ತೆಯು "ಬೇರೊಂದು ಸುವಾರ್ತೆಯಲ್ಲ" ಎಂದು ನಂಬುವದಕ್ಕೆ ಕಾರಣವನ್ನು ಕೊಡುತ್ತದೆ (ನೋಡಿರಿ 2 ಕೊರಿಂಥ 11:4; ಗಲಾತ್ಯ 1:6, 7).

ಲೇಟರ್-ಡೇ ಸೆಂಟ್ಸ್ ಪಂಥದವರು ಕಲಿಸುವದೇನೆಂದರೆ ಪ್ರಕಟನೆ 14:6, 7 ವಚನಗಳು ಅಮೆರಿಕದಲ್ಲಿರುವ ನ್ಯೂಯಾರ್ಕ್ ರಾಜ್ಯದ ಮೇಲೆ ದೇವದೂತನು ಹಾರಾಡುತ್ತಾ ಮಾರ್ಮೋನ್ ಪಾಷಂಡ ಮತದ ಸ್ಥಾಪಕನಾಗಿರುವ Joseph Smithನು ಬರೆದ ಕೆಲವೊಂದು ಹಲಿಗೆಗಳನ್ನು ಇಡುವವನಾಗಿದ್ದಾನೆಂದು ಬಣ್ಣಿಸುತ್ತಾರೆ, ಅದೆಲ್ಲವೂ ಅವರ ಪುಸ್ತಕದಲ್ಲಿ ಕಂಡು ಹಿಡಿದು ಅರ್ಥ ವಿವರಿಸಲ್ಪಟ್ಟಿರುತ್ತದೆಂದು ಹೇಳುತ್ತಾರೆ. ಹೇಗೂ, ಅಪೊಸ್ತಲರಿಗೆ ಕೊಡಲ್ಪಟ್ಟ ಪ್ರಕಟನೆಯು ಸಂಪೂರ್ಣವಾದದ್ದೆಂದು ಹೊಸ ಒಡಂಬಡಿಕೆಯು ನಮಗೆ ಕಲಿಸುತ್ತದೆ (ಯೋಹಾನ 16:13; 2 ಪೇತ್ರ 1:3; ಯೂದನು 3). ಈ "ಲೇಟರ್-ಡೇ ಪ್ರಕಟಣೆಗಳು" ಎಂದು ಕರೆಯಲ್ಪಡುವವುಗಳೆಲ್ಲಾ ದೇವರ ವಾಕ್ಯಕ್ಕೆ ಹೆಚ್ಚಿನದನ್ನು ಕೂಡಿಸಿದ ಅಪರಾಧಕ್ಕೊಳಗಾಗಿರುತ್ತವೆ (ಪ್ರಕಟನೆ 22:18, 19). J. W. Robertsನು ಹೀಗೆ ಬರೆದನು,

> [ಪ್ರಕಟನೆ 14 ರಲ್ಲಿನ] ನಿತ್ಯವಾದ ಸುವಾರ್ತೆಯು ಯಾವದೋ ಒಂದು ಹೊಸ ಸುವಾರ್ತೆಯಾಗಲಿ ಅಥವಾ ಲೇಟರ್-ಡೇ ಸೆಂಟ್ಸ್ ಪ್ರಕಟನೆಯಾಗಲಿ ಆಗಿರುವದಿಲ್ಲ. ಅದು 144,000 ಮಂದಿ ಪಡೆದುಕೊಂಡಿದ್ದಂಥ ಹಾಗೂ ಎಲ್ಲಾ ಮನುಷ್ಯರಿಗೂ ಸಾರಲ್ಪಡಬೇಕಾಗಿದ್ದಂಥ (ಲೂಕ 24:47) ಕ್ರಿಸ್ತನ ಮರಣ ಮತ್ತು ಪುನರುತ್ಥಾನಗಳ ಕುರಿತಾದ (1 ಕೊರಿಂಥ 15:1-4) ಅದೇ ಸುವಾರ್ತೆಯೇ ಆಗಿರುತ್ತದೆ.[10]

ಈ ಸುವಾರ್ತೆಯು ದೇವರ ನಿತ್ಯವಾದ ಯೋಜನೆಯ ಭಾಗವಾಗಿದ್ದರ ಕಾರಣದಿಂದ **ನಿತ್ಯವಾದ** ಎಂಬದಾಗಿ ಕರೆಯಲ್ಪಟ್ಟಿದೆ (ಎಫೆಸ 3:8-11). "ದೇವರ ಸುವಾರ್ತೆಯು

ಅನಂತರದಲ್ಲಿ ಮಾಡಿದ ಯೋಚನೆಯಾಗಿರಲಿಲ್ಲ, ಇತಿಹಾಸದ ಸುದೀರ್ಘವಾದ ಪತ್ರಿಕೆಯ ಕುರಿತಾದ ಒಂದು ತರುವಾಯ ಬರೆದು ಸೇರಿಸುವ ಲೇಖನವಲ್ಲ."[11]

ದೇವದೂತನ ಬಳಿಯಲ್ಲಿ ಶುಭವರ್ತಮಾನ ಲೌಕಿಕ ಸಂಗತಿಗಳಲ್ಲಿಯೇ ತಮ್ಮ ಹೃದಯಗಳನ್ನು ಕೇಂದ್ರಿಕರಿಸಿಕೊಂಡಿದ್ದ **ಭೂನಿವಾಸಿಗಳಿಗಾಗಿರುವ** ಸಂದೇಶವಾಗಿತ್ತು. ಅವರು ದೇವರ ಪ್ರೀತಿಯ ಸಂಜ್ಞೆಗಳನ್ನು ಗತಕಾಲದಲ್ಲಿ ತಿರಸ್ಕರಿಸಿದ್ದರು, ಆದರೆ ಕರ್ತನು ಅವರಿಗೆ ಮತ್ತೊಂದು ಸದವಕಾಶವನ್ನು ಒದಗಿಸಿ ಕೊಡುತ್ತಿದ್ದಾನೆ. ಹಾಗೆ ಮಾಡುವ ಮೂಲಕ, ದೇವರು ಯಾವದೇ ಪಕ್ಷಪಾತವನ್ನು ಮಾಡಲಿಲ್ಲ: ದೇವದೂತನ ಮಾತುಗಳು **ಸಕಲ ಜನಾಂದ ಕುಲ ಪ್ರಜೆಗಳವರಿಗೂ ಸಕಲ ಭಾಷೆಗಳನ್ನಾಡುವವರಿಗೂ** ಸಾರಿ ಹೇಳುವದಕ್ಕಾಗಿ ಆಗಿದ್ದವು. ಈ ಮುಂಚೆ ಹೇಳಿದ ಹಾಗೆ, "ಭೂನಿವಾಸಿಗಳು" (ಅಥವಾ ಅದಕ್ಕೆ ಸಮಾನವಾದ ಪದ) ಅವಿಶ್ವಾಸಿಗಳನ್ನು ಸೂಚಿಸಿದರೆ, "ಸಕಲ ಜನಾಂಗ ಕುಲ ಪ್ರಜೆಗಳವರಿಗೂ ಸಕಲ ಭಾಷೆಯವರಿಗೂ" ಎಂಬದು "ಪ್ರತಿಯೊಬ್ಬರಿಗೂ" ಎಂದು ಹೇಳುವಂಥ ಒಂದು ಚಿತ್ರಾತ್ಮಕ ರೀತಿಯಾಗಿರುತ್ತದೆ.

**ವಚನ 7.** ದೇವದೂತನು ಭೂನಿವಾಸಿಗಳಿಗೆ **ಮಹಾ ಶಬ್ದದಿಂದ ಹೇಳಿದನು**. ಆತನು ಎಲ್ಲರಿಗೂ ಕಾಣಿಸುವ ರೀತಿಯಲ್ಲಿ ಆಕಾಶಮಧ್ಯದಲ್ಲಿ ಹಾರಿ ಹೋಗುತ್ತಿದ್ದನು (ವ. 6). ದೇವದೂತನು ಮೊದಲನೆಯದಾಗಿ **ನೀವೆಲ್ಲರು ದೇವರಿಗೆ ಭಯಪಟ್ಟು ಆತನನ್ನು ಘನಪಡಿಸಿರಿ** ಎಂದು ಆಜ್ಞಾಪಿಸಿದನು. ಪ್ರಸಂಗಿ ಪುಸ್ತಕದಲ್ಲಿ, ಬೋಧಕನು ಹೇಳಿದ್ದೇನೆಂದರೆ "ವಿಷಯವು ತೀರಿತು; ಎಲ್ಲವೂ ಕೇಳಿ ಮುಗಿಯಿತು; ದೇವರಿಗೆ ಭಯಪಟ್ಟು ಆತನ ಆಜ್ಞೆಗಳನ್ನು ಕೈಕೊಳ್ಳು ..." (ಪ್ರಸಂಗಿ 12:13). ಕೈಸರನಿಗೆ ಭಯಪಡುವದರ ಬದಲಾಗಿ ಮತ್ತು ಆತನನ್ನು ಘನಪಡಿಸುವದಕ್ಕೆ ಬದಲಾಗಿ, ಜನರು ದೇವರಿಗೆ ಭಯಪಟ್ಟು ಆತನನ್ನು ಘನಪಡಿಸುವ ಅಗತ್ಯವಿತ್ತು.

ಅಲ್ಲದೆ ಪ್ರತಿಯೊಬ್ಬರೂ **ಭೂಲೋಕ ಪರಲೋಕಗಳನ್ನೂ ಸಮುದ್ರವನ್ನೂ ನೀರಿನ ಬುಗ್ಗೆಗಳನ್ನೂ ಉಂಟುಮಾಡಿದಾತನಿಗೆ ನಮಸ್ಕಾರ ಮಾಡಿರಿ** ಎಂದು ಸಹ ಹೇಳಿದನು. 10:6ರಲ್ಲಿ ದೇವರನ್ನು ಬಣ್ಣಿಸುವದಕ್ಕೆ ಹೆಚ್ಚುಕಡಿಮೆ ಇದೇ ರೀತಿಯ ಮಾತುಗಳನ್ನೇ ಬಳಸಲಾಗಿತ್ತು. 14:7ರಲ್ಲಿ ಮಾಡಲಾದ ಮನವಿಯು ಲುಸ್ತ್ರ ಪಟ್ಟಣದಲ್ಲಿ ಪೌಲನು ಅನ್ಯದೇವಾರಾಧಕರಿಗೆ ನೀಡಿದ ಮನವಿಯಂತೆಯೇ ಇರುತ್ತದೆ (ಅಪೊಸ್ತಲರ ಕೃತ್ಯಗಳು 14:15). ಜನರು ದೇವರನ್ನು ಆತನು ಸೃಷ್ಟಿ ಮಾಡಿರುವ ಜಗತ್ತನ್ನು ನೋಡುವ ಮೂಲಕವಾಗಿ ಅರಿತುಕೊಂಡಿರಬೇಕಿತ್ತು ಎಂಬ ಸೂಚ್ಯಾರ್ಥವೊಂದು ಇರಬಹುದಾಗಿದೆ (ನೋಡಿರಿ ರೋಮಾ 1:18-21). ಶ್ರೇಷ್ಠ ಕಾರ್ಯಗಳನ್ನು ಮಾಡಿದ್ದೇನೆಂದು *ಕೊಚ್ಚಿಕೊಂಡ* ವ್ಯಕ್ತಿಯನ್ನು ಆರಾಧಿಸುವದರ ಬದಲಾಗಿ, ಅವರು ನಿಜವಾಗಿಯೂ ಶ್ರೇಷ್ಠ ಕಾರ್ಯಗಳನ್ನು *ಮಾಡಿದ* ದೇವರನ್ನು ಆರಾಧಿಸಬೇಕಾದ ಅಗತ್ಯವಿತ್ತು.

7ನೇ ವಚನದ ಮಧ್ಯದಲ್ಲಿ, ಭೂನಿವಾಸಿಗಳು ಸತ್ಯ ದೇವರಿಗೆ ಭಯಪಟ್ಟು ಆತನನ್ನು ಘನಡಿಸಬೇಕು ಯಾಕೆಂದರೆ **ಆತನು ನ್ಯಾಯತೀರ್ಪುಮಾಡುವ ಗಳಿಗೆಯು ಬಂದಿದೆ** ಎಂದು ಹೇಳಿದನು. **ಗಳಿಗೆಯು** (ἡ ὥρα, *hē hōra*) ಎಂಬುದು ಸರಿಯಾದ ಸಮಯವನ್ನು, ಸೂಕ್ತವಾದ ಸಮಯವನ್ನು ಸೂಚಿಸುವದಕ್ಕಾಗಿ ಅಪೊಸ್ತಲನಾದ ಯೋಹಾನನು ಬಳಸುತ್ತಿದ್ದ ವೈಶಿಷ್ಟ್ಯವಾದ ಪದವಾಗಿತ್ತು. **ನ್ಯಾಯಪೀರ್ಪು** ಮಾಡಲ್ಪಡುವದಕ್ಕೋಸ್ಕರ ಸರಿಯಾದ ಗಳಿಗೆಯು ಬಂದಿತ್ತು. ಒಬ್ಬರು ಆಕ್ಷೇಪಣೆಯನ್ನೆತ್ತಿ ದೇವದೂತನು ಇಲ್ಲಿ ಸುವಾರ್ತೆಯನ್ನು

ಸಾರುತ್ತಿದ್ದಾನೆ, ಆದರೆ "ನ್ಯಾಯತೀರ್ಪು" ಎಂಬ ಪದವು ಶುಭವರ್ತಮಾನ ಎಂಬಂತೆ ಅನ್ನಿಸುವದಿಲ್ಲ ಎಂದು ಹೇಳಬಹುದು. ಹೇಗೂ, ಅಂತಹ ವ್ಯಕ್ತಿಯು ಸುವಾರ್ತೆಯನ್ನು ಅಪಾರ್ಥಮಾಡಿಕೊಂಡವನಾಗಿರುತ್ತಾನೆ. ಕೆಲವರಿಗಾದರೋ, ಸುವಾರ್ತೆಯು ಶಿಲುಬೆಯಿಂದ ಆರಂಭಗೊಂಡು ಶಿಲುಬೆಯೊಂದಿಗೆ ಮುಕ್ತಾಯಗೊಳ್ಳುತ್ತದೆ, ಕೇವಲ ದೇವರ ಪ್ರೀತಿಯ ಬಗ್ಗೆ ಮಾತ್ರವೇ ಮಾತಾಡುವದಾಗಿದೆ. ಕ್ರಿಸ್ತನ ಮರಣ, ಹೂಣಲ್ಪಡುವಿಕೆ, ಮತ್ತು ಪುನರುತ್ಥಾನಗಳೇ ಸುವಾರ್ತೆಯ ಹೃದಯಭಾಗವಾಗಿದೆ ಎಂಬುದು ಸತ್ಯವೇ ಆಗಿರುತ್ತದೆ (1 ಕೊರಿಂಥ 15:1-4), ಆದರೆ ಸುವಾರ್ತೆಯು ಕೇವಲ ಸುಂದರವಾದ "ಹಳೇ ಕಥೆ" ಎಂಬುದಕ್ಕಿಂತಲೂ ಅಧಿಕವಾಗಿರುತ್ತದೆ.

ವಾಕ್ಯದ ಪ್ರಕಾರವಾಗಿಯೇ, ಸುವಾರ್ತೆಯು ಇಬ್ಬಾಯಿ ಕತ್ತಿಗಿಂತಲೂ ಹದವಾದದ್ದು (ಇಬ್ರಿಯ 4:12); ಅದು ದೇವರ ಪ್ರೀತಿಯನ್ನು ಕುರಿತು ಮಾತಾಡುವದು ಮಾತ್ರವೇ ಆಗಿರುವದಿಲ್ಲ, ಆದರೆ ದೇವರ ನ್ಯಾಯದ ಕುರಿತಾಗಿ ಸಹ ಮಾತಾಡುತ್ತದೆ. ಶುಭವರ್ತಮಾನದೊಳಗೆ ಅಂತರ್ಗತವಾಗಿರುವ ಸಂಗತಿಯೇನೆಂದರೆ ಒಬ್ಬ ವ್ಯಕ್ತಿಯು ಸುವಾರ್ತೆಯನ್ನು ತಿರಸ್ಕರಿಸುವದಾದರೆ, ಅದರ ಪರಿಣಾಮಗಳು ವಿನಾಶಕಾರಿಯಾಗಿರುತ್ತವೆ ಎಂಬ ಕೆಟ್ಟವಾರ್ತೆಯೇ (2 ಥೆಸಲೋನಿಕ 1:8, 9). ವ್ಯಕ್ತಿಗಳು ಕೇವಲ ಸುವಾರ್ತೆಯನ್ನು ತಿರಸ್ಕರಿಸಿದರೆಂಬ ಕಾರಣಕ್ಕಷ್ಟೆ ನಾಶನಕ್ಕೆ ಹೋಗುವದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಿರಿ. ಅದು ಆ ರೀತಿಯಲ್ಲಿ ಆಗಿದ್ದಲ್ಲಿ, ಜನರಿಗೆ ಎಂದಿಗೂ ಸುವಾರ್ತೆಯನ್ನು ಸಾರದಿರುವದೇ ಉತ್ತಮವಾದದ್ದು; ಹೀಗೆ ಅವರಿಗೆ ಅದನ್ನು ತಿರಸ್ಕರಿಸುವದಕ್ಕೆ ಎಂದಿಗೂ ಅವಕಾಶವೇ ಸಿಕ್ಕುವದಿಲ್ಲ. ಯೇಸುವು ಬರುವದಕ್ಕೆ *ಮುಂಚೆಯೇ* ಮಾನವರು ನಾಶನಕ್ಕೆ ಪಾತ್ರರಾಗಿದ್ದರೆಂದು ಬೈಬಲ್ ನಮಗೆ ಕಲಿಸುತ್ತದೆ; ಆ *ಕಾರಣದಿಂದಲೇ* ಆತನು ಬಂದನು (ಲೂಕ 19:10). ಹಾಗಿದ್ದರೂ, ಸುವಾರ್ತೆಯನ್ನು ಕೇಳಿಸಿಕೊಳ್ಳುವದಕ್ಕೆ ಅವಕಾಶವೊಂದು ಸಿಕ್ಕ ಮೇಲೂ ಅದನ್ನು ತಿರಸ್ಕರಿಸುವದರ ವಿಷಯದಲ್ಲಿ ಒಂದು ಏನೋ ನಿರ್ದಿಷ್ಟವಾದ ಅಶುಭಕರವಾದದ್ದು ಇರುತ್ತದೆ.

ಯೇಸು ಹೇಳಿದ್ದೇನೆಂದರೆ, "ನನ್ನನ್ನು ಆತನೆಂದು ನೀವು ನಂಬದೆ ಹೋದರೆ ನಿಮ್ಮ ಪಾಪಗಳಲ್ಲಿಯೇ ಸಾಯುವಿರಿ" (ಯೋಹಾನ 8:24), ಮತ್ತು "ನಾನು ಹೋಗುವಲ್ಲಿಗೆ ನೀವು ಬರಲಾರಿರಿ" (ಯೋಹಾನ 8:21). ಪುನಃ, ಆತನು ಹೇಳಿದ್ದೇನೆಂದರೆ, "ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ ನೀವೆಲ್ಲರೂ ಹಾಗೆಯೇ ಹಾಳಾಗಿ ಹೋಗುವಿರಿ" (ಲೂಕ 13:3). ಮಹಾ ಆದೇಶವನ್ನು ಕೊಡುವ ವೇಳೆ, ಆತನು ಹೀಗೆ ಹೇಳಿದನು, "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು" (ಮಾರ್ಕ 16:16). ಯೋಹಾನನು ಪ್ರೀತಿಯನ್ನು ಸಾರುವ ಅಪೊಸ್ತಲನೆಂದು ಕರೆಯಲ್ಪಟ್ಟಿದ್ದಾನೆ, ಆದರೆ ಆತನು ಸಹ ಕಲಿಸಿದ್ದೇನೆಂದರೆ "ಆತನ ಮಗನನ್ನು ನಂಬುವವನಿಗೆ ನಿತ್ಯಜೀವ ಉಂಟು; ಮಗನಿಗೆ ಒಳಗಾಗದವನು ಜೀವವನ್ನು ಕಾಣುವದೇ ಇಲ್ಲ; ದೇವರ ಕೋಪವು ಅವನ ಮೇಲೆ ನೆಲೆಗೊಂಡಿರುವದು" (ಯೋಹಾನ 3:36). Thomas Torranceನು ಹೇಳಿದ್ದೇನೆಂದರೆ, "ನಾವು ಮರೆಯುವದಕ್ಕೆ ಒಲವು ತೋರುವಂಥ ಸುವಾರ್ತೆಯ ಒಂದು ಅಂಶವು ಅದಾಗಿರುತ್ತದೆ ... ಶಿಲುಬೆಯ ನೆರಳಿನ-ಬದಿಯನ್ನು ..."[12] H. L. Ellisonನು ಹೀಗೆ ಬರೆದನು, "ದೇವರ ನಿತ್ಯವಾದ ಸಾರ್ವಭೌಮತೆಯನ್ನು ನಿರ್ಲಕ್ಷಿಸುವ ಶಿಲುಬೆಯ ಕುರಿತಾದ ಸಾರುವಿಕೆಯು ಯಾವಾಗಲೂ ಸುವಾರ್ತೆಗಿಂತ ಕಡಿಮೆಯಾದದ್ದಾಗಿರುತ್ತದೆ."[13]

ದೇವದೂತನ ಮಾತುಗಳು ಹಲವಾರು ಎಣಿಕೆಗಳಲ್ಲಿ "ಶುಭವರ್ತಮಾನ" ಎಂಬುದಕ್ಕೆ ಅರ್ಹವಾಗುತ್ತದೆ: ಆತನ ಮಾತುಗಳು ಭೂನಿವಾಸಿಗಳಿಗಾಗಿರುವ ಶುಭವರ್ತಮಾನ ಆಗಿದ್ದವು, ಯಾಕೆಂದರೆ ಅವುಗಳು ದೇವರ ಕಡೆಗೆ ತಿರುಗಿಕೊಳ್ಳಲು ಅವರಿಗೆ ಮತ್ತೊಂದು ಸದವಕಾಶವನ್ನು ಮುಂದಿಟ್ಟಿದ್ದವು - ಅವರಿಗೆ ಪಶ್ಚಾತ್ತಾಪ ಪಡುವದಕ್ಕೆ ಇನ್ನೂ ಕಾಲಾವಕಾಶವಿತ್ತು. ಅಲ್ಲದೆ ಆ ಮಾತುಗಳು ಕ್ರೈಸ್ತರಿಗೆ ಸಹ ಶುಭವರ್ತಮಾನವಾಗಿದ್ದವು, ಯಾಕೆಂದರೆ ದೇವರ ಉದ್ದೇಶಗಳು ನೇರವೇರಿಸದೆ ಬಿಡಲ್ಪಡುವದಿಲ್ಲ ಎಂಬ ಭರವಸವನ್ನು ಅವರಿಗೆ ಕೊಡುತ್ತವೆ. ದೇವರು ತನ್ನ ಜನರನ್ನು ಅನಿರ್ದಿಷ್ಟಕಾಲ ಬಾಧೆಯನ್ನನುಭವಿಸುವದಕ್ಕೆ ಅವಕಾಶವನ್ನು ಕೊಡುವದಿಲ್ಲ; ನೀತಿವಂತರ ನ್ಯಾಯವು ಸ್ಥಾಪಿಸಲ್ಪಡುವದು.

## "ಬಾಬೆಲೆಂಬ ನಗರಿಯು ಬಿದ್ದಳು" (14:8)

**8ಅವನ ಹಿಂದೆ ಎರಡನೆಯವನಾದ ಒಬ್ಬ ದೇವದೂತನು ಬಂದು - ಬಿದ್ದಳು, ಬಿದ್ದಳು, ಬಾಬೆಲೆಂಬ ಮಹಾ ನಗರಿಯು ಬಿದ್ದಳು. ಆಕೆಯು ಸಕಲ ಜನಾಂಗಗಳಿಗೆ ತನ್ನ ಅತಿ ಜಾರತ್ವವೆಂಬ ದ್ರಾಕ್ಷಾರಸವನ್ನು ಕುಡಿಸಿದಳು ಎಂದು ಹೇಳಿದನು.**

**ವಚನ 8.** ಮೊದಲ ಸಂದೇಶಕನು ಮಧ್ಯಾಕಾಶದ ಪ್ರಸಂಗಪೀಠವನ್ನು ಬಿಟ್ಟು ಹೋಗುತ್ತಿದ್ದ ಹಾಗೆ, ಎರಡನೆಯ ಪ್ರಸಂಗಿಯು ಆತನ ಸ್ಥಾನವನ್ನು ತೆಗೆದುಕೊಳ್ಳುತ್ತಾನೆ: **ಅವನ ಹಿಂದೆ ಎರಡನೆಯವನಾದ ಒಬ್ಬ ದೇವದೂತನು ಬಂದು - ಬಿದ್ದಳು, ಬಿದ್ದಳು, ಬಾಬೆಲೆಂಬ ಮಹಾ ನಗರಿಯು ಬಿದ್ದಳು. ಬಿದ್ದಳು** ಎಂದು ಪುನರಾವರ್ತನೆಯನ್ನು ಮಾಡಿದ್ದು ಆ ಹೇಳಿಕೆಗೆ ಒತ್ತನ್ನು ಕೂಡಿಸಿ ಕೊಟ್ಟಿರುತ್ತದೆ; ನಿರ್ದಿಷ್ಟವಾಗಿ, ಇದು ಮುಂತಿಳಿಸಲ್ಪಟ್ಟಿರುವ ಘಟನೆಯ *ಖಚಿತತೆ*ಯನ್ನು ಒತ್ತಿ ಹೇಳುತ್ತದೆ. ಯೆಶಾಯವು ಶಾರೀರಿಕ ಬಾಬೆಲಿನ ಪತನದ ಕುರಿತು ಮುಂತಿಳಿಸುವದಕ್ಕೆ ಈ ಮಾತುಗಳನ್ನು ಬರೆದಿದ್ದನು (ಯೆಶಾಯ 21:9); ಇಲ್ಲಿ ದೇವದೂತನು ಅದೇ ಮಾತುಗಳನ್ನು ಬಳಸಿಕೊಂಡು ಆತ್ಮೀಕ ಬಾಬೆಲಿನ ಬೀಳುವಿಕೆಯನ್ನು ಮುಂತಿಳಿಸಿದನು.

ಈ ಉಲ್ಲೇಖವು **ಬಾಬೆಲೆಂಬ ಮಹಾ ನಗರಿ** ಕುರಿತ ಮೊದಲ ಬಾರಿ ಪ್ರಸ್ತಾಪವಾಗಿದ್ದು ಅದು 17 ಹಾಗೂ 18 ಅಧ್ಯಾಯಗಳಲ್ಲಿ ಕಾಣಿಸಿಕೊಳ್ಳಲಿದೆ. 17ನೇ ಅಧ್ಯಾಯದಲ್ಲಿ ಬಾಬೆಲ ಸುಂದರವಾದ ಆದರೆ ಮೃಗದ ಮೇಲೆ ಕೂತಿರುವ ಲಜ್ಜೆಗೆಟ್ಟ ಸ್ತ್ರೀಯಾಗಿ ಚಿತ್ರಿಸಲ್ಪಟ್ಟಿರುತ್ತದೆ (17:3); ಆಕೆಯು ಒಂದು ರಾಕ್ಷಸನಂಥ ಜೀವಿಯೊಂದಿಗೆ ಮೈತ್ರಿಯಲ್ಲಿರುತ್ತಾಳೆಂಬುದು ಸ್ಪಷ್ಟವಾಗಿರುತ್ತದೆ. ಆಕೆಯ ಹಣೆಯ ಮೇಳೆ ಈ ಹೆಸರು ಬರೆದಿತ್ತು: "ಬಾಬೆಲೆಂಬ ಮಹಾನಗರಿ, ಭೂಮಿಯಲ್ಲಿರುವ ಜಾರಸ್ತ್ರೀಯರಿಗೂ ಅಸಹ್ಯವಾದ ಕಾರ್ಯಗಳಿಗೂ ತಾಯಿ" (17:5).

"ಬಾಬೆಲೆಂಬ ಮಹಾ ನಗರಿ" ಕುರಿತಾದ ಪ್ರಮುಖ ಚರ್ಚೆಯು 17ನೇ ಅಧ್ಯಾಯಕ್ಕಾಗಿ ಉಳಿಸಿಕೊಳ್ಳಲ್ಪಡುತ್ತದೆ, ಆದರೆ ಈ ಸಂದರ್ಭದಲ್ಲಿ ಕೆಲವೊಂದು ಮಾತುಗಳನ್ನು ಹೇಳುವದು ಸೂಕ್ತವಾಗಿರುತ್ತದೆ: "ಬಾಬೆಲೆಂಬ ಪ್ರಾಚೀನ ಮೆಸಪೊತಾಮ್ಯ ಪಟ್ಟಣವು ಒಂದು ವಿಶ್ವ ಸಾಮ್ರಾಜ್ಯದ ರಾಜಕೀಯ ಹಾಗೂ ಧಾರ್ಮಿಕ ರಾಜಧಾನಿಯಾಗಿ ಮಾರ್ಪಟ್ಟಿತ್ತು, ಅದರ ವೈಭೋಗದ ಹಾಗೂ ನೈತಿಕ ಭ್ರಷ್ಟತೆಗೆ ಹೆಸರುವಾಸಿಯಾಗಿತ್ತು."[14] ಬಾಬೆಲೆಂಬ "ಮಹಾ ನಗರಿ" ಎಂಬ ಬಿರುದು ನೆಬೂಕದ್ನೆಚ್ಚರನ ಕೊಚ್ಚಿಕೊಳ್ಳುವಿಕೆಯನ್ನು ಜ್ಞಾಪಿಸುವದಾಗಿತ್ತು: "ನನ್ನ ಮಹಿಮೆಯು ಪ್ರಸಿದ್ಧಿಗೆ ಬರುವಂತೆ ನನ್ನ ಸಾಮರ್ಥ್ಯಬಲದಿಂದ ರಾಜನಿವಾಸಕ್ಕಾಗಿ ನಾನು ಕಟ್ಟಿಸಿಕೊಂಡಿರುವದು ಇಗೋ, ಮಹಾಪಟ್ಟಣವಾದ ಈ ಬಾಬೆಲ್ ಎಂದು ಕೊಚ್ಚಿಕೊಂಡನು"

(ದಾನಿಯೇಲ 4:30). ಈ ಕೊಚ್ಚಿಕೊಳ್ಳುವಿಕೆಯ ನಂತರದಲ್ಲಿ ರಾಜ್ಯವು ನೆಬೂಕದ್ನೆಚ್ಚರನಿಂದ ತೊಲಗಿರುತ್ತದೆಂದು ದೇವರು ಘೋಷಣೆ ಮಾಡಿದನು (ದಾನಿಯೇಲ 4:31). ಅಂತಿಮವಾಗಿ, ಮೇದ್ಯೆಯ-ಪಾರಸಿಯನ್ನರು ನೆಬೂಕದ್ನೆಚ್ಚರನ ಉತ್ತರಾಧಿಕಾರಿಗಳ ವಿರುದ್ಧ ಕಾದಾಡಿ ತಮ್ಮ ವಶ ಮಾಡಿಕೊಂಡರು. Albert Baldingerನು ಹೀಗೆ ವ್ಯಾಖ್ಯಾನಿಸಿದನು,

> ಬಾಬೆಲ ಸಾಮ್ರಾಜ್ಯವು ದಾರ್ಯಾವೇಷನ ನಾಯಕತ್ವದಲ್ಲಿ ಪಾರಸಿಯರ ವಶವಾಗುವದು ... ಇಬ್ರಿಯ ಮನಸ್ಸಿನ ಮೇಲೆ ಒಂದು ಆಳವಾದ ಛಾಪು ಮೂಡಿಸಿತ್ತು, ಮತ್ತು ದೇವರ ರಾಜ್ಯವನ್ನು ವಿರೋಧಿಸುವ ಸಕಲ ರಾಜತ್ವಗಳ ಮೇಲೆ, ಜನಾಂಗಗಳ ಅಥವಾ ಸಂಸ್ಥೆಗಳ ಮೇಲೆ ಬರಲಿರುವ ಅಂತಿಮವಾದ ನಾಶನವನ್ನು ಸೂಚಿಸುವದಕ್ಕೆ ಒಂದು ತಕ್ಕುದಾದ ಸಂಕೇತವಾಗಿ ಮಾರ್ಪಟ್ಟಿತ್ತು.[15]

ದೇವದೂತನು ಬಾಬೆಲೆಂಬ ಮಹಾ ನಗರಿಯನ್ನು **ಆಕೆಯು ಸಕಲ ಜನಾಂಗಗಳಿಗೆ ತನ್ನ ಅತಿ ಜಾರತ್ವವೆಂಬ ದ್ರಾಕ್ಷಾರಸವನ್ನು ಕುಡಿಸಿದಳು** ಎಂದು ಬಣ್ಣಿಸಿದನು. **ಅತಿ** (ಅಭಿಲಾಷೆ) ಎಂದು ಅನುವಾದಿಸಿರುವ ಗ್ರೀಕ್ ಪದವಾದ θυμός (*thumos*) ಎಂಬುದು, ಹೆಚ್ಚು ಸಾಮಾನ್ಯವಾಗಿ "ಕೋಪ" ಎಂದು ಅನುವಾದಿಸಲ್ಪಟ್ಟಿರುತ್ತದೆ (ನೋಡಿರಿ KJV). **ಜಾರತ್ವ** ಎಂಬುದನ್ನು ಅನುವಾದಿಸಿರುವ πορνεία (*porneia*) ಎಂಬ ಗ್ರೀಕ್ ಪದವು "ಹಾದರ" (ನೋಡಿರಿ KJV) ಎಂಬುದಕ್ಕಿರುವ ಪದವಾಗಿರುತ್ತದೆ. ಈ "ಜಾರರ ತಾಯಿ" ಕುರಿತು ಕೆಲವೊಂದು ವಾಸ್ತವಾಂಶಗಳು ಇಲ್ಲಿರುತ್ತವೆ:

1. "ಬಾಬೆಲೆಂಬ ಮಹಾ ನಗರಿ" ಸ್ಪಷ್ಟವಾಗಿರುವ ಪ್ರಕಾರ ದೇವರ ಒಬ್ಬ ವೈರಿಯಾಗಿದ್ದಾಳೆ. ಮುಂದರೆ ನೋಡಲಿರುವ ಪ್ರಕಾರ, ಆಕೆಯು ಘಟಸರ್ಪದ ಮೂರನೆಯ ಮಧ್ಯವರ್ತಿಯಾಗಿರುತ್ತಾಳೆ: ಮೃಗವು ಕ್ರೈಸ್ತರನ್ನು ಹೆದರಿಸುವದಕ್ಕೆ ಪ್ರಯತ್ನಿಸುತ್ತದೆ; ಸುಳ್ಳು ಪ್ರವಾದಿಯು ಕ್ರೈಸ್ತರನ್ನು ವಂಚಿಸುವದಕ್ಕೆ ಪ್ರಯತ್ನಿಸುತ್ತಾನೆ; ಬಾಬೆಲ್ ಎಂಬಾಕೆಯು ಕ್ರೈಸ್ತರನ್ನು *ಪ್ರಲೋಭನೆಗೊಳಿಸಲು* ಪ್ರಯತ್ನಿಸುತ್ತಾಳೆ. ಒಂದು ಕ್ಷಣಕ್ಕೆ, ಆಕೆಯನ್ನು ಕ್ರೈಸ್ತರನ್ನು ಪ್ರಲೋಭನೆಗೊಳಪಡಿಸಿ ಕರ್ತನಿಂದ ದೂರಕ್ಕೆ ನಡಿಸುವದಕ್ಕೆ ಪ್ರಯತ್ನಿಸುವಂಥ ಲೌಕಿಕವಾದ ಯಾವದೇ ಪ್ರಭಾವದ ಜೊತೆಯಲ್ಲಿ ಆಕೆಯನ್ನು ಗುರುತಿಸುವದು ಸಾಕಾಗುತ್ತದೆ. ಪ್ರಕಟನೆ ಪುಸ್ತಕದಲ್ಲಿ ಹಲವಾರು ಬಾರಿ ಗಮನಕ್ಕೆ ತರಲ್ಪಟ್ಟಿರುವದೇನೆಂದರೆ, ಯೋಹಾನನ ದಿನದಲ್ಲಿ "ಬಾಬೆಲ್" ಎಂಬದನ್ನು ಪ್ರಮುಖವಾಗಿ ರೋಮ್ ನಗರದ ಸಂಕೇತವಾಗಿ ಬಳಸಲ್ಪಟ್ಟಿರುತ್ತದೆ (17:9, 18) – ಆದರೆ, ನಾವು ಮುಂದೆ ಕಲಿಯಲಿರುವ ಪ್ರಕಾರ, ಆಕೆಯು ಅದಕ್ಕಿಂತ *ಹೆಚ್ಚಿನದಕ್ಕೆ* ಸಂಕೇತವಾಗಿರುತ್ತಾಳೆ.

2. ಆಕೆಯು ಜನರ ಗುಂಪುಗಳನ್ನು ದೇವರಿಂದ ದೂರವಾಗಿ ಆಕರ್ಷಿಸುವದಕ್ಕೆ ಯಶಸ್ವಿಯಾಗಿದ್ದಳು: ಆಕೆಯು "ಸಕಲ ಜನಾಂಗಗಳಿಗೆ ತನ್ನ ಅತಿ ಜಾರತ್ವವೆಂಬ ದ್ರಾಕ್ಷಾರಸವನ್ನು ಕುಡಿಸಿದಳು." ಇಲ್ಲಿ ದೃಷ್ಟಾಂತವು ಬೇರೊಬ್ಬನನ್ನು ಮೋಹಕ್ಕೊಳಪಡಿಸುವದಕ್ಕೋಸ್ಕರ ಆತನಲ್ಲಿರುವ ಪ್ರತಿರೋಧಗಳನ್ನು ಕಡಿಮೆಗೊಳಿಸುವದಕ್ಕೆ ಮದ್ಯವನ್ನು ಬಳಸುವಂಥ ಯಾವದಕ್ಕೂ ಹೇಸದ ವ್ಯಕ್ತಿಯ ಕುರಿತಾಗಿರುತ್ತದೆ. 1ರಿಂದ 5 ವಚನಗಳಲ್ಲಿ ನೋಡಿದ ಹಾಗೆ, ಆತ್ಮೀಕ ವ್ಯಭಿಚಾರದ ಮೇಲೆ ಒತ್ತು ಕೊಡಲಾಗಿರುತ್ತದೆ (ಕರ್ತನಿಗೆ ಅಪನಂಬಿಗಸ್ತರಾಗಿರುವದು) ಆದರೆ ಅದು ಶಾರೀರಿಕ ಜಾರತ್ವವನ್ನು ಸಹ ಒಳಗೊಂಡಿರುತ್ತದೆ.

3. ಅಂತಿಮವಾಗಿ, ಬಾಬೆಲ್ ನಾಶಗೊಂಡಿತು. ಆಕೆಯು ಎಷ್ಟೇ ಪ್ರಾಮುಖ್ಯಳು ಹಾಗೂ ಪ್ರಭಾವಶಾಲಿ ಆಗಿದ್ದರೂ ಸರಿಯೇ, ಆಕೆಯು ಬಿದ್ದು ಹೋಗುವಳು. ಬಾಬೆಲಿನ ಬೀಳುವಿಕೆಯ ವಿವರವನ್ನು 18ನೇ ಅಧ್ಯಾಯದಲ್ಲಿ ಕೊಡಲಾಗಿರುತ್ತದೆ. ಆಕೆಯ ಅವಸಾನವು ಎಷ್ಟೊಂದು ಖಚಿತವಾಗಿತ್ತೆಂದರೆ ದೇವದೂತನು ಅದು ಈಗಾಗಲೇ ನಡೆದು ಬಿಟ್ಟಿದೆ ಎಂಬಂತೆ ನುಡಿದನು: "ಬಿದ್ದಳು, ಬಿದ್ದಳು, ಬಾಬೆಲೆಂಬ ಮಹಾ ನಗರಿಯು ಬಿದ್ದಳು." ಯೆಶಾಯನು ಪ್ರಾಚೀನ ಬಾಬೆಲಿನ ಬೀಳುವಿಕೆಯ ಬಗ್ಗೆ ಸಹ ಅದೇ ರೀತಿಯಲ್ಲಿ ಹೇಳಿದನು; ಅದು ಈಗಾಗಲೇ ಸಂಭವಿಸಿ ಬಿಟ್ಟಿದೆಯೋ ಎಂಬಂತೆ ಆತನು ಮಾತಾಡಿದನು (ಯೆಶಾಯ 21:9). ಈ ಸಾಂಕೇತಿಕ ಭಾಷೆಯು "ಪೂರ್ವ ಸೂಚಕ" ಎಂದು ಕರೆಯಲ್ಪಡುತ್ತದೆ. ಕರ್ತನ ದಾರಿಗಳಿಗೆ ವ್ಯತಿರಿಕ್ತವಾಗಿರುವ ನೀತಿಗಳನ್ನು ಇಟ್ಟುಕೊಂಡಿರುವ ಜನರು ತಮ್ಮೊಳಗೆ ಅವರ ಸ್ವಂತ ನಾಶನದ ಬೀಜಗಳನ್ನು ಹೊತ್ತು ಸಾಗುವವರಾಗಿದ್ದಾರೆ.

ದೇವರು ಏಕೆ ಬಾಬೆಲಿನ ನಾಶನವನ್ನು ಕುರಿತು ಘೋಷಿಸಿದನು? ಭಾಗಶಃ, ಆತನು ಬಾಬೆಲಿನಿಂದ ಪ್ರಭಾವಕ್ಕೊಳಗಾಗಿದ್ದ ಅವಿಶ್ವಾಸಿಗಳನ್ನು ಎಚ್ಚರಿಸುತ್ತಿದ್ದಾನೆ. ಕೆಟ್ಟವಾರ್ತೆಯು ಅವರನ್ನು ತಾವು ಹೋಗುತ್ತಿರುವ ದಾರಿಯಲ್ಲಿ ನಿಲ್ಲಿಸುವ ಹೊರತು ಕೆಲವರು ಶುಭವಾರ್ತೆಯನ್ನು ಆಲಿಸುವದಿಲ್ಲ. ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೇಳಿದ್ದೇನೆಂದರೆ, "ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿಬೀಳುವದು ಭಯಂಕರವಾದದ್ದು" (ಇಬ್ರಿಯ 10:31). ಪೌಲನು ಹೀಗೆ ಬರೆದನು, "ಕರ್ತನ ಭಯವು ನಮಗಿರುವದರಿಂದ ನಾವು ಮನುಷ್ಯರನ್ನು ಒಡಂಬಡಿಸುತ್ತೇವೆ" (2 ಕೊರಿಂಥ 5:11; KJV). ಆದಾಗ್ಯೂ, ಹೆಚ್ಚು ನಿರ್ದಿಷ್ಟವಾಗಿ 8ನೇ ವಚನವು ಬಾಬೆಲಿನ ಸೌಂದರ್ಯ ಹಾಗೂ ಸೊಬಗಿನ ಮೈಮಾಟಕ್ಕೆ ಆಕರ್ಷಿತನಾಗಿರುವ ಯಾವದೇ ಕ್ರೈಸ್ತನಿಗೆ ಒಂದು ಎಚ್ಚರಿಕೆಯಾಗಿರುತ್ತದೆ. ಚಂಚಲನಾಗಿದ್ದ ಯಾವನೇ ಆಗಲಿ ಬಾಬೆಲವು ಆಕೆಯಂತೆಯೇ ರಾಜಧಾನಿಯಾಗಿದ್ದ ಪ್ರಾಚೀನ ಮೆಸಪೊತಾಮ್ಯವು ನಾಶಗೊಂಡ ಪ್ರಕಾವೇ ನಾಶಗೊಳ್ಳುವಳು ಎಂಬುದನ್ನು ಅರಿತುಕೊಳ್ಳಬೇಕಿತ್ತು. ಈ ಸತ್ಯವನ್ನು ಕುರಿತು ಚರ್ಚಿಸುವ ವೇಳೆ, ಸುವಾರ್ತಿಕ John Risseನು ಹೀಗೆ ಕೇಳಿದನು, "ಈಗಾಗಲೇ ಪರಾಜಿತಗೊಂಡಿರುವಂಥ ಅಭ್ಯರ್ಥಿಗೆ ನೀವು ಮತ ಹಾಕುವಿರೋ?"[16] ಆತನ ಸಂದೇಶವು ಸ್ಪಷ್ಟವಾಗಿತ್ತು: ಯಾರ ಪದಚ್ಯುತಿಯೂ ಮೊದಲೇ ನಿರ್ಧರಿಸಲ್ಪಟ್ಟಿದೆಯೋ ಆ ವ್ಯಕ್ತಿಗೆ ಅಥವಾ ವ್ಯವಸ್ಥೆಯ ಪರವಾಗಿ ಏಕೆ ಬೆಂಬಲವನ್ನು ನೀಡಬೇಕು?

## ಮೃಗದ ಗುರುತು (14:9-13)

**9ಅವನ ಹಿಂದೆ ಮೂರನೆಯವನಾದ ಒಬ್ಬ ದೇವದೂತನು ಬಂದು - ಯಾವನಾದರೂ ಮೊದಲನೆಯ ಮೃಗಕ್ಕೂ ಅದರ ವಿಗ್ರಹಕ್ಕೂ ನಮಸ್ಕಾರಮಾಡಿ ತನ್ನ ಹಣೆಯ ಮೇಲಾಗಲಿ ಕೈಯ ಮೇಲಾಗಲಿ ಗುರುತುಹಾಕಿಸಿಕೊಂಡರೆ 10ಅವನು ಸಹ ದೇವರ ಕೋಪವೆಂಬ ಪಾತ್ರೆಯಲ್ಲಿ ಏನೂ ಬೆರಸದೆ ಹಾಕಿದ ದೇವರ ರೌದ್ರವೆಂಬ ದ್ರಾಕ್ಷಾರಸವನ್ನು ಕುಡಿಯುವನು; ಪರಿಶುದ್ಧ ದೇವದೂತರ ಮುಂದೆಯೂ ಯಜ್ಞದ ಕುರಿಯಾದಾತನ ಮುಂದೆಯೂ ಬೆಂಕಿಯಿಂದಲೂ ಗಂಧಕದಿಂದಲೂ ಯಾತನೆಪಡುವನು. 11ಅಂಥವರ ಯಾತನೆಯ ಹೊಗೆಯು ಯುಗಯುಗಾಂತರಗಳಲ್ಲಿಯೂ ಏರುತ್ತಾ ಹೋಗುತ್ತದೆ; ಮೃಗಕ್ಕೆ ಮತ್ತು ಅದರ ವಿಗ್ರಹಕ್ಕೆ ನಮಸ್ಕಾರಮಾಡುವವರೂ ಅದರ ಹೆಸರನ್ನು ಸೂಚಿಸುವ ಗುರುತನ್ನು ಹಾಕಿಸಿಕೊಂಡಿರುವವರೆಲ್ಲರೂ ಹಗಲಿರುಳು ಉಪಶಮನವಿಲ್ಲದೆ ಯಾತನೆಪಡುವರು ಎಂದು**

**ಮಹಾ ಶಬ್ದದಿಂದ ಹೇಳಿದನು. [12]ಇದರಲ್ಲಿ ದೇವರ ಆಜ್ಞೆಗಳನ್ನೂ ಯೇಸುವಿನ ಮೇಲಣ ನಂಬಿಕೆಯನ್ನೂ ಕೈಕೊಂಡು ನಡೆಯುತ್ತಿರುವ ದೇವಜನರ ತಾಳ್ಮೆಯು ತೋರಿಬರುತ್ತದೆ. [13]ಪರಲೋಕದಿಂದ ಒಂದು ಶಬ್ದವು ನನಗೆ ಕೇಳಿಸಿತು. ಅದು - ಇಂದಿನಿಂದ ಕರ್ತನ ಭಕ್ತರಾಗಿ ಸಾಯುವವರು ಧನ್ಯರು ಎಂಬದಾಗಿ ಬರೆ ಎಂದು ನನಗೆ ಹೇಳಿತು. ಅದಕ್ಕೆ ಆತ್ಮನು - ಹೌದು, ಅವರು ಧನ್ಯರೇ; ಅವರ ಕಷ್ಟ ತೀರಿತು, ಅವರಿಗೆ ವಿಶ್ರಾಂತಿಯಾಗುವದು; ಅವರ ಸುಕೃತ್ಯಗಳು ಅವರೊಡನೆ ಬರುವವು ಎಂದು ಹೇಳುತ್ತಾನೆ.**

**ವಚನ 9.** ಶುಭವರ್ತಮಾನವು - ಮತ್ತು ಅಶುಭವರ್ತಮಾನ - ತಿಳಿಸಲ್ಪಟ್ಟಿತ್ತು. ಈಗ ಕೊನೆಯ ದೇವದೂತನು ಕಾಣಿಸಿಕೊಳ್ಳುವ ಸಮಯವಾಗಿತ್ತು. ಮೂರನೆಯ **ದೇವದೂತನು ಮಹಾ ಶಬ್ದದಿಂದ** ನ್ಯಾಯತೀರ್ಪಿಗಾಗಿರುವ ಮಾನದಂಡವನ್ನು ತಿಳಿಸುವವನಾಗಿ ಆರಂಭಿಸುತ್ತಾನೆ: **ಯಾವನಾದರೂ ಮೃಗಕ್ಕೂ ಅದರ ವಿಗ್ರಹಕ್ಕೂ ನಮಸ್ಕಾರಮಾಡಿ ತನ್ನ ಹಣೆಯ ಮೇಲಾಗಲಿ ಕೈಯ ಮೇಲಾಗಲಿ ಗುರುತು ಹಾಕಿಸಿಕೊಂಡರೆ** ಅವನ ಮೇಲೆ ನ್ಯಾಯತೀರ್ಪು ಬರಲಿದೆ. 9ನೇ ವಚನವು **ಕೊಂಡರೆ** ಎಂಬ ಪದವನ್ನು ಸೇರ್ಪಡೆಗೊಳಿಸುವದಾಗಿದ್ದು ಒಂದು ಆಯ್ಕೆಯನ್ನು ಸೂಚಿಸುತ್ತದೆ. ಯೋಹಾನನ ವಾಚಕರಿಗೆ ಇದು ತೀರ್ಮಾನವನ್ನು ಮಾಡುವ ಸಮಯವಾಗಿತ್ತು.

ಎರಡನೆಯ ಮೃಗವು (ಸುಳ್ಳು ಪ್ರವಾದಿ) "ಮೊದಲನೆಯ ಮೃಗಕ್ಕೆ ಭುಲೋಕವೂ ಭೂನಿವಾಸಿಗಳೂ ನಮಸ್ಕರಿಸುವಂತೆ" ಮಾಡಿತ್ತು (13:12) ಮತ್ತು ಅದರ ವಿಗ್ರಹಕ್ಕೆ ನಮಸ್ಕರಿಸುವಂತೆ ಮಾಡಿತ್ತು (13:15). ಆತನು ಜನರನ್ನು "ತಮ್ಮ ತಮ್ಮ ಬಲಗೈಯ ಮೇಲಾಗಲಿ ಹಣೆಯ ಮೇಲಾಗಲಿ ಗುರುತು" ಹೊಂದುವಂತೆ ಮಾಡಿದ್ದನು (13:16), ಮತ್ತು ಆತನು "ಆ ಗುರುತು ಯಾರಿಗಿಲ್ಲವೋ ಅವರು ಕ್ರಯ ವಿಕ್ರಯಗಳನ್ನು ನಡಿಸಕೂಡದೆಂದಲೂ" ಏರ್ಪಾಡು ಮಾಡಿದ್ದನು (13:17). ಹೀಗೆ 13ನೇ ಅಧ್ಯಾಯವು ಮೃಗವನ್ನು ಆರಾಧಿಸಿ ಅದರ ಗುರುತು ಹಾಕಿಸಿಕೊಳ್ಳುವವರಿಗಾಗುವ *ಅಲ್ಪಾವಧಿ* ಪ್ರಯೋಜನಗಳನ್ನು ತಿಳಿಸುತ್ತದೆ. ಈಗ, 14ನೇ ಅಧ್ಯಾಯದಲ್ಲಿ *ದೀರ್ಘಾವಧಿ* ಪರಿಣಾಮಗಳು ಸಂಕ್ಷಿಪ್ತವಾಗಿ ವಿವರಿಸಲ್ಪಟ್ಟಿರುತ್ತವೆ.

**ವಚನ 10.** ಯಾವನಾದರೂ ಮೃಗಕ್ಕೆ ನಮಸ್ಕರಿಸಿ ಆತನ ಗುರುತು ಹಾಕಿಸಿಕೊಂಡರೆ, **ಅವನು ದೇವರ ಕೋಪವೆಂಬ ಪಾತ್ರೆಯಲ್ಲಿ ಏನೂ ಬೆರಸದೆ ಹಾಕಿದ ದೇವರ ರೌದ್ರವೆಂಬ ದ್ರಾಕ್ಷಾರಸವನ್ನು ಕುಡಿಸುವನು.** ಮೃಗದ ಗುರುತು ಹಾಕಿಸಿಕೊಂಡವರು "[ಮಹಾ ಜಾರಸ್ತ್ರೀಯ] ಅತಿ ಜಾರತ್ವವೆಂಬ ದ್ರಾಕ್ಷಾರಸವನ್ನು" ಕುಡಿದಿದ್ದರು (14:8). ಈಗ ಅವರು ದೇವರ ರೌದ್ರವೆಂಬ ದ್ರಾಕ್ಷಾರಸವನ್ನು ಕುಡಿಯಬೇಕಾಗಿರುತ್ತದೆ. ರೌದ್ರವೆಂಬ ಪಾತ್ರೆಯಲ್ಲಿ ಕುಡಿಯುವದು ದಂಡನೆ ಅನುಭವಿಸುವದನ್ನು ಸೂಚಿಸುವದಕ್ಕೆ ಬಳಸುವ ಸಹಜವಾದ ಬೈಬಲ್ ರೂಪಕ ಪದವಾಗಿರುತ್ತದೆ (ಕೀರ್ತನೆ 75:8; ಯೆಶಾಯ 51:17; ಯೆರೆಮೀಯ 25:15; ನೋಡಿರಿ ಮತ್ತಾಯ 20:22; 26:39).

**ದೇವರ ರೌದ್ರವೆಂಬ ದ್ರಾಕ್ಷಾರಸವು ಏನೂ ಬೆರಸದೆ** ಇರುವಂಥದ್ದು; ಅದರಲ್ಲಿ ಒಂದು ಹನಿ ಕರುಣೆಯನ್ನು ಸಹ ಸೇರಿಸಲಾಗುವದಿಲ್ಲ. ದ್ರಾಕ್ಷಾರಸವನ್ನು "ಏನೂ ಬೆರಸದೆ" ಎಂದು ಹೇಳಿರುವದು ("ಮಿಶ್ರಿತವಲ್ಲದ" ಅಥವಾ "ಸಾರಗುಂದಿಸದ") ಯೋಹಾನನ ದಿನದಲ್ಲಿ ಊಟದ ವೇಳೆ ದ್ರಾಕ್ಷಾರಸಕ್ಕೆ ನೀರು ಬೆರಸಿ ಸೇವಿಸುತ್ತಿದ್ದ ಪದ್ಧತಿಯನ್ನು ಪ್ರತಿಫಲಿಸುತ್ತದೆ. ಸಾಮಾನ್ಯವಾಗಿ ಮಾಡುತ್ತಿದ್ದ ಬೆರಸುವಿಕೆಯೆಂದರೆ ಒಂದು ಭಾಗ ದ್ರಾಕ್ಷಾರಸಕ್ಕೆ ಮೂರು ಭಾಗ ನೀರನ್ನು ಮಿಶ್ರಣ ಮಾಡುವದಾಗಿತ್ತು. ಇದರ ಅನ್ವಯಿಕೆಯು ಏನೆಂದರೆ, ಈ ಜೀವನದಲ್ಲಿ

ಅತ್ಯಂಥ ಭಕ್ತಿಹೀನನು ಸಹ ದೇವರ ಕರುಣೆಯ ಪ್ರಯೋಜನಗಳನ್ನು ಅನುಭವಿಸುತ್ತಾನೆ ಎಂಬದೆ. "ಆತನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ" (ಮತ್ತಾಯ 5:45). ಹೇಗೂ, ನ್ಯಾಯತೀರ್ಪಿನ ದಿನದಲ್ಲಿ, ಕರ್ತನನ್ನು ನಿರಂತರವಾಗಿ ತಿರಸ್ಕರಿಸುತ್ತಲೇ ಬಂದಿರುವವರಿಗೆ ಯಾವದೇ ಕರುಣೆಯು *ಇರುವದಿಲ್ಲ.* ದೇವರ ರೌದ್ರವೆಂಬ ದ್ರಾಕ್ಷಾರಸದಲ್ಲಿ ಏನನ್ನೂ ಬೆರಸುವದಿಲ್ಲ.

ಪಶ್ಚಾತ್ತಾಪ ಪಡದಿರುವವರಿಗಾಗುವ ದಂಡನೆಯ ಕುರಿತು ಅತ್ಯಂಥ ಭಯಂಕರವಾದ ಪದಗಳಲ್ಲಿ ಬಣ್ಣಿಸಲಾಗಿರುತ್ತದೆ: **ಪರಿಶುದ್ಧ ದೇವದೂತರ ಮುಂದೆಯೂ ಯಜ್ಞದ ಕುರಿಯಾದಾತನ ಮುಂದೆಯೂ ಬೆಂಕಿಯಿಂದಲೂ ಗಂಧಕದಿಂದಲೂ ಯಾತನೆಪಡುವನು.** "ಗಂಧಕ ಎಂಬುದು ಸಲ್ಫರ್ ಎಂಬುದಕ್ಕಿದ್ದ ಹಳೇ ಆಂಗ್ಲ ಪದವಾಗಿದ್ದು, ಅದು ಆರಿಸುವದಕ್ಕೆ ಕಷ್ಟಕರವಾದದ್ದು ಮಾತ್ರವೇ ಆಗಿರುವದಿಲ್ಲ, ಆದರೆ ವೈಶಿಷ್ಟ್ಯವಾದ ರೀತಿಯ ಕ್ಷಾರಕ ಹಾಗೂ ಅನಿಷ್ಟಕಾರಕ ಜ್ವಾಲೆಗಳಾಗಿ ಉರಿಯುತ್ತದೆ."[17] (9:17ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ.) **ಬೆಂಕಿಯಿಂದಲೂ ಗಂಧಕದಿಂದಲೂ** ಎಂಬ ರೂಪಕವು ಸೊದೋಮ್ ಮತ್ತು ಗೊಮೋರ ಪಟ್ಟಣಗಳ ನಾಶನದಿಂದ ಬಂದಿರುತ್ತದೆ (ಆದಿಕಾಂಡ 19:24; ನೋಡಿರಿ ಯೂದನು 7).

ದೇವದೂತರ ಮುಂದೆಯೂ ಯೇಸುವಿನ **ಮುಂದೆಯೂ** ಯಾತನೆ ಪಡುವ ಚಿತ್ರಣವು ದಂಡನೆಯನ್ನು ಅನುಭವಿಸುವವರ ಮೇಲೆ ಹಾಕಲಾಗುವ ಅವಮಾನವನ್ನು ಬಣ್ಣಿಸುವಂಥ ಒಂದು ರೂಪಕೋಕ್ತಿಯಾಗಿರುತ್ತದೆ. ನಂಬಿಗಸ್ತರಾದ ಕ್ರೈಸ್ತರು ಕುಚೇಷ್ಟೆ ಮಾಡುವಂಥ ಹಾಗೂ ಅನುತಾಪವಿಲ್ಲದಂಥ ಜನರ ಸಮೂಹದ ಮುಂದೆ ಹಿಂಸಲ್ಪಟ್ಟಿದ್ದರು. ಅದೇ ರೀತಿಯಲ್ಲಿಯೇ, ಕರ್ತನಿಗಾಗಿ ಒಂದು ದೃಢ ನಿಲುವು ತೆಗೆದುಕೊಳ್ಳದವರು ಪರಿಶುದ್ಧ ಸಭೆಯ ಮುಂದೆ ಯಾತನೆ ಪಡುವರು. ಸಾಮಾನ್ಯವಾಗಿ, ದಂಡನೆಯನ್ನು ಬೇರೆಯವರ ಎದುರಿನಲ್ಲಿ ಕೊಡುವಾಗ ಅದರ ವೇದನೆಯು ಇನ್ನಷ್ಟು ಅಧಿಕವಾಗುವಂತೆ ತೋರುತ್ತದೆ. ಯಾರು ಆತನನ್ನು ನಿರಾಕರಿಸುತ್ತಾರೋ ಅವರು ಸಹ ದೇವದೂತರ ಮುಂದೆ ನಿರಾಕರಿಸಲ್ಪಡುವರೆಂದು ಯೇಸುವು ಹೇಳಿದನು (ಲೂಕ 12:9; ನೋಡಿರಿ ಮಾರ್ಕ 8:38). ಸಾಂದರ್ಭಿಕವಾಗಿ, ಕೆಲವರು ಅಭಿಪ್ರಾಯ ಪಟ್ಟಿರುವ ಪ್ರಕಾರ ದೇವದೂತರು ಹಾಗೂ ಯೇಸುವು ದುಷ್ಟರಿಗೆ ದಂಡನೆಯಾಗುವದನ್ನು ನೋಡಿ *ಹಿಗ್ಗುವರು* ಎಂಬುದಕ್ಕೆ 10ನೇ ವಚನದಲ್ಲಿ ಯಾವ ಸೂಚನೆಯೂ ಇರುವದಿಲ್ಲ.

ಯೇಸುವಿನ ಮುಂದೆ ದಂಡನೆಯನ್ನು ಅನುಭವಿಸುವ ಕುರಿತ ಉಲ್ಲೇಖವು 14:9-11 ವಚನಗಳು ಪಾಪಕ್ಕಾಗಿ ಆಗುವ ನಿತ್ಯವಾದ ದಂಡನೆಯನ್ನು ಸೂಚಿಸುವದಿಲ್ಲ, ಯಾಕೆಂದರೆ ನಿತ್ಯವಾದ ದಂಡನೆಯು ದೇವರ ಸನ್ನಿಧಿಯಿಂದ ದೂರದಲ್ಲಾಗುವಂಥದ್ದು ಎಂದು ಕೆಲವರು ವಾದಿಸುತ್ತಾರೆ (2 ಥೆಸಲೋನಿಕ 1:7-9; ನೋಡಿರಿ ಪ್ರಕಟನೆ 21:27; 22:14, 15). ಇದು ಸರಿಯಾಗಿರಬಹುದಾಗಿದೆ, ಆದರೆ 11ನೇ ವಚನವು ಖಂಡಿತವಾಗಿಯೂ ನಿತ್ಯವಾದ ದಂಡನೆಯೆಂಬಂತೆ ಕಾಣಿಸುತ್ತದೆ. ಬಹುಶಃ, ಯೇಸುವಿನ ಮುಂದೆ ಎಂದು ಹೇಳಲ್ಪಟ್ಟಿರುವದು ಆತನಿಗೆ ನರಕದ ಮೇಲೆ ಸಾರ್ವಭೌಮತೆ ಇದೆ ಎಂಬುದನ್ನು ಸಾಂಕೇತಿಕವಾಗಿ ಘೋಷಿಸುತ್ತಿರಬಹುದಾಗಿದೆ.

**ವಚನ 11.** ದೇವದೂತನು ದಂಡನೆಯ ಕುರಿತಾದ ಬಣ್ಣನೆಯನ್ನು ಮುಂದುವರೆಸುತ್ತಾನೆ, **ಅಂಥವರ ಯಾತನೆಯ ಹೊಗೆಯು ಯುಗಯುಗಾಂತರಗಳಲ್ಲಿಯೂ ಏರುತ್ತಾ ಹೋಗುತ್ತದೆ; ಮೃಗಕ್ಕೆ ಮತ್ತು ಅದರ ವಿಗ್ರಹಕ್ಕೆ ನಮಸ್ಕಾರಮಾಡುವವರೂ ಅದರ ಹೆಸರನ್ನು ಸೂಚಿಸುವ**

**ಗುರುತನ್ನು ಹಾಕಿಸಿಕೊಂಡಿರುವವರೆಲ್ಲರೂ ಹಗಲಿರುಳು ಉಪಶಮನವಿಲ್ಲದೆ ಯಾತನೆಪಡುವರು**. ಕಂಬದ ಮೇಲೆ ಕಟ್ಟಲ್ಪಟ್ಟು ಸುಡುತ್ತಿದ್ದ ದೇವಾರಾಧಕನ **ಹೊಗೆಯು** ಕೆಲವೇ ನಿಮಿಷಗಳ ತನಕ ಏರಿ ಹೋಗುತ್ತಿತ್ತು, ಆದರೆ ಅದು ತೀರಿ ಹೋಗಿ "ಆತನು ದೇವರ ಅನ್ಯೋನ್ಯತೆಯಲ್ಲಿ ನಿತ್ಯವಾದ ಜೀವವನ್ನು ಹೊಂದಿದವನಾಗಿರುತ್ತಿದ್ದನು."[18] ಇನ್ನೊಂದು ಕಡೆಯಲ್ಲಿ, ಮೃಗದ ಆರಾಧಕರ ಹೊಗೆಯು **ಯುಗಯುಗಾಂತರಗಳಲ್ಲಿಯೂ** ಏರುತ್ತಾ ಹೋಗುತ್ತದೆ. ಅವರಿಗೆ ವಿಶ್ರಾಂತಿ ಎಂಬುದು ಎಂದಿಗೂ ಅನುಭವಕ್ಕೆ ಬರುವದೇ ಇಲ್ಲ - ಕೇವಲ ಯಾತನೆ, ವರ್ಣಿಲಸಾಧ್ಯವಾದ ಯಾತನೆ ಮಾತ್ರವೇ ಅವರಿಗೆ ಸಿಕ್ಕುವದು (19:20; 20:10, 14, 15ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಕೆಲವು ಪಂಡಿತರು 10 ಮತ್ತು 11 ವಚನಗಳನ್ನು ಕ್ರೈಸ್ತತ್ವಕ್ಕೆ ಕೆಳಮಟ್ಟದ್ದು ಎಂದು ಕರೆಯುತ್ತಾರೆ. ಇನ್ನು ಕೆಲವರು ಈ ವಾಕ್ಯಭಾಗವು ಯೇಸುವಿಗೆ ತಕ್ಕುದಲ್ಲ ಎಂದು ವಾದಿಸುತ್ತಾರೆ, "ಆತನು ನಮಗೆ ಎಲ್ಲರನ್ನೂ ಪ್ರೀತಿಸಬೇಕೆಂದು ಕಲಿಸಿದನ್ನಲ್ಲವೇ." ಸ್ಪಷ್ಟವಾಗಿರುವಂತೆ, ಈ ಜನರು ಅರಿಯದೆ ಇರುವದೇನೆಂದರೆ ನಿತ್ಯವಾದ ದಂಡನೆಯ ವಿಷಯದಲ್ಲಿ ಹೊಸ ಒಡಂಬಡಿಕೆಯ ಬೇರೆ ಯಾವದೇ ಬೋಧಕ ಅಥವಾ ಲೇಖಕನಿಗಿಂತಲೂ ಯೇಸುವೇ ಅಧಿಕವಾಗಿ ಮಾತಾಡಿರುತ್ತಾನೆ ಎಂಬುದೆ (ನೋಡಿರಿ ಮತ್ತಾಯ 25:30; ಲೂಕ 16:23). ಯಾವನಾದರೂ ಯೇಸುವನ್ನು ಕೆಳಮಟ್ಟದ-ಕ್ರೈಸ್ತ ಕರೆಯುವ ಧೈರ್ಯ ಮಾಡುವನೋ? ಈ ವಿಷಯದ ಮೇಲೆ ಯೇಸುವು ನಿಷ್ಠುರವಾಗಿ ನುಡಿದ ಕೆಲವು ಹೇಳಿಕೆಗಳು ಇಲ್ಲಿವೆ:

> ಇದಲ್ಲದೆ ದೇಹವನ್ನು ಕೊಂದು ಆತ್ಮವನ್ನು ಕೊಲ್ಲಲಾರದವರಿಗೆ ಹೆದರಬೇಡಿರಿ, ಆತ್ಮ ದೇಹ ಎರಡನ್ನೂ ಕೂಡ ನರಕದಲ್ಲಿ ಹಾಕಿ ನಾಶಮಾಡಬಲ್ಲಾತನಿಗೇ ಹೆದರಿರಿ (ಮತ್ತಾಯ 10:28).
>
> ಆಮೇಲೆ ಆತನು ಎಡಗಡೆಯಲ್ಲಿರುವವರಿಗೆ - ಶಾಪಗ್ರಸ್ತರೇ, ನನ್ನನ್ನು ಬಿಟ್ಟು ಪಿಶಾಚನಿಗೂ ಅವನ ದೂತರಿಗೂ ಸಿದ್ಧಮಾಡಿರುವ ನಿತ್ಯ ಬೆಂಕಿಯೊಳಕ್ಕೆ ಹೋಗಿರಿ ... ಮತ್ತು ಇವರು ನಿತ್ಯಶಿಕ್ಷೆಗೂ ನೀತಿವಂತರು ನಿತ್ಯಜೀವಕ್ಕೂ ಹೋಗುವರು (ಮತ್ತಾಯ 25:41, 46).
>
> ನಿನ್ನ ಕಣ್ಣು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕಿತ್ತು ಬಿಸಾಡು; ಎರಡು ಕಣ್ಣುಳ್ಳವನಾಗಿದ್ದು ನರಕದಲ್ಲಿ ಹಾಕಿಸಿಕೊಳ್ಳುವದಕ್ಕಿಂತ ಒಂದೇ ಕಣ್ಣುಳ್ಳವನಾಗಿದ್ದು ದೇವರ ರಾಜ್ಯದಲ್ಲಿ ಸೇರುವದು ನಿನಗೆ ಉತ್ತಮ. ನರಕದಲ್ಲಿ ಅವರನ್ನು ಕಡಿಯುವ ಹುಳ ಸಾಯುವದಿಲ್ಲ, ಬೆಂಕಿ ಆರುವದಿಲ್ಲ (ಮಾರ್ಕ 9:47, 48; ನೋಡಿರಿ ಮಾರ್ಕ 9:43-46).

ಮಾರ್ಕ 9:47, 48ರಲ್ಲಿ, ಯೇಸುವು ದೇವರ ಆಲಯವಾಗಿರುವ ದೇಹವನ್ನು ಕತ್ತರಿಸಿಕೊಳ್ಳುವ ಕುರಿತಾಗಿ ಕಲಿಸುತ್ತಿಲ್ಲ (1 ಕೊರಿಂಥ 6:19, 20). ಬದಲಾಗಿ, ಆತನು ನಮ್ಮನ್ನು ನಾಶನಕ್ಕೆ ಹೋಗುವಂತೆ ಮಾಡಬಲ್ಲ ಯಾವದಾದರೂ ನಮ್ಮ ಜೀವಿತಗಳಲ್ಲಿರುವದಾದರೆ ಅದನ್ನು ಕಿತ್ತು ಹಾಕಬೇಕೆಂದು ಕಲಿಸುತ್ತಿದ್ದಾನೆ. ನಿತ್ಯವಾದ ನರಕವು ಎಚ್ಚರಗೊಳಿಸುವಂತಹ ವಾಸ್ತವಿಕತೆಯಾಗಿದೆ.

**ವಚನ 12.** ಮೂರನೆಯ ದೇವದೂತನು ಮಾತಾಡಿ ಮುಗಿಸಿದ ಬಳಿಕ, ಯೋಹಾನನು ಈ ಪ್ರೇರಿತವಾದ ಹೇಳಿಕೆಯನ್ನು ಸೇರ್ಪಡೆಗೊಳಿಸಿದನು: **ಇದರಲ್ಲಿ ದೇವರ ಆಜ್ಞೆಗಳನ್ನೂ ಯೇಸುವಿನ ಮೇಲಣ ನಂಬಿಕೆಯನ್ನೂ ಕೈಕೊಂಡು ನಡೆಯುತ್ತಿರುವ ದೇವಜನರ ತಾಳ್ಮೆಯು ತೋರಿಬರುತ್ತದೆ.** ಈ ವಚನವು 13:10ನೇ ವಚನದ ಅಂತ್ಯದಲ್ಲಿರುವ ಪದಗುಚ್ಛದ

ಪುನರಾವರ್ತನೆ ಹಾಗೂ ವಿವರಿಸುವಿಕೆ ಆಗಿರುತ್ತದೆ. NASBಯಲ್ಲಿ ಅಕ್ಷರಶಃ ಅನುವಾದವು ಇರುತ್ತದೆ: **ಇದರಲ್ಲಿಯೇ ದೇವಜನರ ತಾಳ್ಮೆಯು ತೋರಿಬರುತ್ತದೆ.** ಅನೇಕ ವ್ಯಾಖ್ಯಾನಕಾರರು ಹಾಗೂ ಅನುವಾದಕರು ಈ ಹೇಳಿಕೆಯನ್ನು ಒಂದು ಆಜ್ಞೆಯನ್ನಾಗಿಸುವ ಮಾತುಗಳ ಸೇರ್ಪಡೆಗೊಳಿಸುತ್ತಾರೆ: "ಇದರಲ್ಲಿ ತಾಳ್ಮೆಯಿಂದಿರುವದಕ್ಕಾಗಿ ಒಂದು ಕರೆ ಕೊಡಲಾಗಿರುತ್ತದೆ"; "ಇದು ತಾಳ್ಮೆಯಿಂದಿರುವದಕ್ಕಾಗಿ ಕರೆಯಾಗಿರುತ್ತದೆ." ಈ ಪದಗುಚ್ಛವನ್ನು ಯಾವ ವಿಧದಲ್ಲಿ ಅನುವಾದಿಸಲ್ಪಟ್ಟರೂ, ಇದು ನಂಬಿಗಸ್ತರಿಗೆ ಒಂದು ಪ್ರೋತ್ಸಾಹವಾಗಿರಬೇಕೆಂಬ ಉದ್ದೇಶಕ್ಕಾಗಿಯೇ ಆಗಿರುತ್ತದೆ (13:10ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ದೇವರು ಎಲ್ಲವೂ ಹಿತಕರವಾಗಿ ಸಂಭವಿಸುವಂತೆ ಮಾಡುವನು ಎಂಬುದನ್ನು ತಿಳಿಯುವದು ಮುನ್ನಡೆಯುವಂತೆ ಕ್ರೈಸ್ತರಿಗೆ ಧೈರ್ಯವನ್ನು ಕೊಡುವದಾಗಿರುತ್ತದೆ.

*ಯಾರು* ತಾಳ್ಮೆಯಿಂದ ಸಹಿಸಿಕೊಳ್ಳುವರು ಎಂಬುದನ್ನು ಗಮನಿಸುವದು ಪ್ರಾಮುಖ್ಯವಾಗಿರುತ್ತದೆ: **ದೇವರ ಆಜ್ಞೆಗಳನ್ನೂ ಯೇಸುವಿನ ಮೇಲಣ ನಂಬಿಕೆಯನ್ನೂ ಕೈಕೊಂಡು ನಡೆಯುತ್ತಿರುವ**ವರು. ಈ ಮಾತುಗಳು ಬರೆಯಲ್ಪಟ್ಟ ಕಾಲದಲ್ಲಿ, ಅವುಗಳಿಗೆ ಈ ಸೂಚ್ಯಾರ್ಥವು ಇದ್ದಿರಬಹುದಾಗಿದೆ: "*ಚಕ್ರವರ್ತಿಯ ಆಜ್ಞೆಗಳನ್ನು ಕೈಕೊಂಡು ನಡೆಯುವದರ ಬದಲಾಗಿ* ದೇವರ ಆಜ್ಞೆಗಳನ್ನು ಕೈಕೊಂಡು ನಡೆಯುವವರು, ಮತ್ತು *ಚಕ್ರವರ್ತಿಯ ವಿಗ್ರಹಕ್ಕೆ ಮುಂದೆ ಯೇಸುವನ್ನು ನಿರಾಕರಿಸುವದರ ಬದಲಾಗಿ* ಯೇಸುವಿನಲ್ಲಿ ತಮ್ಮ ನಂಬಿಕೆಯನ್ನು ಇಡುವವರು." ನಮ್ಮಲ್ಲಿ ಒಬ್ಬನೂ ಪರಿಪೂರ್ಣವಾಗಿ ಜೀವಿಸಲಾರೆವು, ಆದರೆ ದೇವರು ನಮ್ಮ ಸಂಗಡ ಇರಬೇಕೆಂದು ಮತ್ತು ನಮ್ಮನ್ನು ಬಲಪಡಿಸಬೇಕೆಂದು ನಾವು ಬಯಸುವದಾದರೆ, ನಮಗೆ ಸಾಧ್ಯವಾದಷ್ಟು ಉತ್ತಮ ಪ್ರಯತ್ನ ಮಾಡುವದಕ್ಕೆ ಪ್ರಯಾಸ ಪಡತಕ್ಕದ್ದು. ತಮ್ಮ ನಂಬಿಕೆಯನ್ನು ದೃಢವಾಗಿ ಹಿಡಿದುಕೊಂಡು ಆತನ ಚಿತ್ತವನ್ನು ಮಾಡುವದಕ್ಕೆ ಸಮರ್ಪಿಸಿಕೊಂಡವರನ್ನು ದೇವರು ಆಶೀರ್ವದಿಸುತ್ತಾನೆ.

**ವಚನ 13.** ಪ್ರಸಂಗಿಗಳು ಉತ್ತಮವಾದ ಅಂಶಗಳನ್ನು ಕೊನೆಗೆ ಇಟ್ಟುಕೊಳ್ಳುತ್ತಾರೆ, ಮತ್ತು ಮಧ್ಯಾಕಾಶದ ಪ್ರಸಂಗದಲ್ಲಿ ಸಹ ಅದು ಹಾಗೆಯೇ ಆಗಿತ್ತು. ಮೂರನೆಯ ದೇವದೂತನು ಮುಗಿಸಿದ ಬಳಿಕ, ಯೋಹಾನನಿಗೆ **ಪರಲೋಕದಿಂದ ಒಂದು ಶಬ್ದವು ಕೇಳಿಸಿತು.** ಅದು ಆತನಿಗೆ **ಬರೆ ಎಂದು ಹೇಳಿತು.** ಮಾತಾಡುವವನು ಯಾರೆಂದು ಇಲ್ಲಿ ಹೇಳಲ್ಪಟ್ಟಿರುವದಿಲ್ಲ, ಆದರೆ ದೇವರು ಅಥವಾ ಆತನ ಪ್ರತಿನಿಧಿಗಳಲ್ಲೊಬ್ಬನು ಮಾತಾಡಿರಬೇಕೆಂದು ವಾಚಕನು ಭಾವಿಸಿಕೊಳ್ಳುವನು. ಯೋಹಾನನಿಗೆ ಕೆಲವು ಸಂಗತಿಗಳನ್ನು ಬರೆಯಬೇಕೆಂದು (1:11, 19; 2:1, 8, 12, 18; 3:1, 7, 14) ಮತ್ತು ಕೆಲವು ಸಂಗತಿಗಳನ್ನು ಬರೆಯಬಾರದೆಂದು ಅಪ್ಪಣೆಯಾಗಿರುತ್ತದೆ (10:4). **ಬರೆ** ಎಂಬ ಆಜ್ಞೆಯು ಕಾಣಿಸಿಕೊಳ್ಳುವಾಗಲೆಲ್ಲಾ, ಮುಂದೆ ಬರುವಂಥದ್ದಕ್ಕೆ ವಿಶೇಷವಾದ ಮಹತ್ವವಿರುತ್ತದೆಂಬುದನ್ನು ಸೂಚಿಸುತ್ತದೆ (ನೋಡಿರಿ 19:9; 21:5).

ಬರೆ ಎಂಬುದಾಗಿ ಯೋಹಾನನಿಗೆ ಆಜ್ಞಾಪಿಸಲ್ಪಟ್ಟ ಬಳಿಕ, ಆ ಶಬ್ದವು ಆತನಿಗೆ ಸಂದೇಶವನ್ನು ಕೊಟ್ಟಿತು: ಅದು ಹೀಗೆ ಆರಂಭಗೊಳ್ಳುತ್ತದೆ, **ಇಂದಿನಿಂದ ಕರ್ತನ ಭಕ್ತರಾಗಿ ಸಾಯುವವರು ಧನ್ಯರು. ಧನ್ಯರು** ಎಂಬ ಮಾತು ಈ ವಚನವು ಒಂದು ಧನ್ಯನುಡಿ ಆಗಿರುತ್ತದೆಂಬುದನ್ನು ಸೂಚಿಸುತ್ತದೆ, ಪ್ರಕಟನೆ ಪುಸ್ತಕದಲ್ಲಿ ಸಿಕ್ಕುವ ಏಳರಲ್ಲಿ ಎರಡನೆಯದ್ದಾಗಿದೆ (1:3; 14:13; 16:15; 19:9; 20:6; 22:7, 14). **ಕರ್ತನ ಭಕ್ತರಾಗಿ ಸಾಯುವವರು** ಯಾರೆಂದರೆ ಮೊದಲು ಆತನಲ್ಲಿ ದೀಕ್ಷಾಸ್ನಾನ ಹೊಂದಿರುವವರೇ (ರೋಮಾ

6:3, 4; ಗಲಾತ್ಯ 3:26, 27), ಮತ್ತು ಬಳಿಕ ಸಾಯಬೇಕಾದರೂ ಕ್ರಿಸ್ತನಲ್ಲಿ "ನೆಲೆಗೊಳ್ಳುವವರು" ಆಗಿರುತ್ತಾರೆ (ಪ್ರಕಟನೆ 2:10). ಮರಣದ ಸಮಯದಲ್ಲಿ, ಅವರು ತಮಗೋಸ್ಕರ ಮರಣಿಸಿದಾತನಿಗೆ ಆಗಲೂ ನಂಬಿಗಸ್ತರಾಗಿ ಇದ್ದವರಾಗಿದ್ದರು. ಅವರ ಮರಣವು ಧನ್ಯವಾದದ್ದು; ಅವರು "ದೇವರ ಜನರು ಅನುಭವಿಸುವದಕ್ಕಿರುವ ಸಬ್ಬತೆಂಬ ವಿಶ್ರಾಂತಿ" ಯಲ್ಲಿ ಸೇರಿದವರು (ಇಬ್ರಿಯ 4:9). ಅವರ ಮರಣವನ್ನು "ಯೆಹೋವನು ... ಮರಣವನ್ನು ಅಲ್ಪವೆಂದು ಎಣಿಸುವದಿಲ್ಲ" (ಕೀರ್ತನೆ 116:15).

**ಇಂದಿನಿಂದ** ಎಂದು ಅನುವಾದಿಸಲ್ಪಟ್ಟಿರುವ ಪದಗುಚ್ಛಕ್ಕೆ ಗ್ರಂಥಪಾಠದ ಸಮಸ್ಯೆಗಳು ಸಂಬಂಧಪಟ್ಟಿರುತ್ತವೆ. ಉದಾಹರಣೆಗೆ, ವಾಕ್ಯದಲ್ಲಿ ಈ ಪದಗುಚ್ಛವು ನಿಖರವಾಗಿ ಎಲ್ಲಿ ಬರತಕ್ಕದ್ದು ಮತ್ತು ಅದು ಏನನ್ನು ತಿದ್ದುಪಡಿ ಮಾಡುತ್ತದೆ ಎಂಬ ವಿಷಯದಲ್ಲಿ ಅನುವಾದಕರೊಳಗೆ ಪ್ರಶ್ನೆಗಳಿರುತ್ತವೆ. ಬಹುಶಃ ಸ್ಥಾಪಿಸಬೇಕಾಗಿರುವ ಪ್ರಮುಖ ಸಂಗತಿಯೆಂದರೆ 13ನೇ ವಚನದ ವಾಗ್ದಾನಕ್ಕೆ ಮುಂಚೆ ಸತ್ತವರು ಧನ್ಯರಲ್ಲ ಎಂಬ ಅರ್ಥವನ್ನು ಈ ಪದಗುಚ್ಛವು ಕೊಡುವ*ದಿಲ್ಲ* ಎಂಬುದೆ. ಮುಂದೆ ಮರಣಿಸುವವರೆಲ್ಲಾ ಚಿಂತಿಸಬೇಕಾಗಿಲ್ಲ ಎಂಬ ದೃಢವಾದ ನಿಶ್ಚಯವನ್ನು ಈ ಪದಗುಚ್ಛವು ಕೊಡುವದಾಗಿದೆ ಅಷ್ಟೆ: ಅವರು ಆಶೀರ್ವದಿಸಲ್ಪ*ಡುವರು*.

ಸಂದೇಶವು ಮುಂದುವರೆಯುತ್ತದೆ: **ಅದಕ್ಕೆ ಆತ್ಮನು - ಹೌದು, ಅವರು ಧನ್ಯರೇ; ಅವರ ಕಷ್ಟ ತೀರಿತು, ಅವರಿಗೆ ವಿಶ್ರಾಂತಿಯಾಗುವದು; ಅವರ ಸುಕೃತ್ಯಗಳು ಅವರೊಡನೆ ಬರುವವು ಎಂದು ಹೇಳುತ್ತಾನೆ**. "ಹೌದು" ಎಂಬುದು ಪವಿತ್ರಾತ್ಮನಿಂದ ನುಡಿಯಲ್ಪಟ್ಟ ಒಂದು ಒತ್ತಿ ಹೇಳಲಾದ ದೃಢನಿಶ್ಚಯದ ಮಾತಾಗಿರುತ್ತದೆ. ಈ ವಿಚಾರವನ್ನು ವ್ಯಕ್ತಪಡಿಸುವ ಇನ್ನೊಂದು ಪದಗುಚ್ಛವೆಂದರೆ "ಖಂಡಿತವಾಗಿಯೂ ಹೌದು!"

"ಕರ್ತನ ಭಕ್ತರಾಗಿ ಸಾಯುವವರು" **ಅವರ ಕಷ್ಟವು ತೀರಿತು**. ಈ ವಾಗ್ದಾನವು ಒಂದು ಸಾಮಾನ್ಯವಾದ ಅನ್ವಯಿಕೆಯನ್ನು ಹೊಂದಿರಬಲ್ಲದು, ಆದರೆ ಯೋಹಾನನ ವಾಚಕರಿಗೆ ಅದು ಒಂದು ವಿಶೇಷವಾದ ಅರ್ಥವನ್ನು ಹೊಂದಿತ್ತು: 'ಕಷ್ಟ' ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು ಆಯಾಸವಾಗುವಷ್ಟರ ಮಟ್ಟಿಗೆ ಆಗುವ ಕಷ್ಟವನ್ನು ಸೂಚಿಸುತ್ತದೆ. ಮೃಗದಿಂದ ಅವರಿಗಾದ ಕಿರುಕುಳಗಳು ದೇವಜನರನ್ನು ಬಳಲಿ ಹೋಗುವಷ್ಟರ ಮಟ್ಟಿಗೆ ಆಯಾಸಗೊಳಿ[ದ್ದವು]."[19] ಇದೇ ಗ್ರೀಕ್ ಪದವು "ಪ್ರಯಾಸ" ಎಂದು ಅನುವಾದಿಸಲ್ಪಟ್ಟಿದೆ (2:2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

"ವಿಶ್ರಾಂತಿ" (ἀναπαύω, *anapauō* ಎಂಬದರಿಂದ ಬಂದದ್ದು) ಎಂಬುದರ ಅರ್ಥವು "ಚಟುವಟಿಕೆಯು ನಿಂತುಹೋಗುವಿಕೆ" ಎಂಬುದನ್ನು ಸೂಚಿಸುವದಿಲ್ಲ. ಬದಲಾಗಿ, "ವಿಶ್ರಾಂತಿ ಎಂಬುದಕ್ಕಿರುವ ಪದದ ... ಅಕ್ಷರಶಃ ಅರ್ಥವು 'ಅವರು ಹೊಸ ಚೈತನ್ಯ ಪಡೆದುಕೊಳ್ಳುವರು' ಎಂದಾಗಿರುತ್ತದೆ."[20] ಪರಲೋಕದಲ್ಲಿ, ಕ್ರೈಸ್ತರು ಆಗಲೂ ದೇವರನ್ನು ಸೇವಿಸುವರು. ಹೀಗೆ ಈ ವಾಕ್ಯಭಾಗವು ಸೂಚಿಸುವದೇನೆಂದರೆ ಕ್ರೈಸ್ತರು ಮರಣಸಿದಾಗ - ಮೃಗದ ಒತ್ತಡಕ್ಕೂ ಬಾಬೆಲಿನ ಆಕರ್ಷಣೆಗಳಿಗೂ ಒಳಗಾಗುವದಕ್ಕೆ ನಿರಾಕರಿಸಿದ್ದ ಕ್ರೈಸ್ತರು - ಅವರಿಗೆ ಕೊನೆಗೂ ಮೃಗದಿಂದ ಹಾಗೂ ಅದರ ಹಿಂಬಾಲಕರಿಂದ ಸಾಲು ಸಾಲಾಗಿ ನೀಡಲ್ಪಟ್ಟ ನೋವು ಹಾಗೂ ವೇದನೆಗಳಿಂದ ಉಪಶಮನ ಸಿಕ್ಕಿತ್ತು. ಅವರ ಆತ್ಮಗಳು ಕರ್ತನ ಸನ್ನಿಧಿಯಲ್ಲಿ ಹೊಸ ಚೈತನ್ಯ ಪಡೆದುಕೊಂಡವು. ಎಂಥ ತದ್ವಿರುದ್ಧತೆ! ಈ ಜೀವನದ ನಂತರದಲ್ಲಿ, ಮೃಗದ ಹಿಂಬಾಲಕರಿಗೆ "ಹಗಲಿರುಳು ಉಪಶಮನವಿಲ್ಲದೆ" ಇರುವದು (ವ. 11), ಅದೇ ವೇಳೆಯಲ್ಲಿ

ಕುರಿಯಾದಾತನ ಹಿಂಬಾಲಕರಿಗೆ “ಕಷ್ಟವು ತೀರಿ ... ವಿಶ್ರಾಂತಿ ಆಗುವದು” (ವ. 13). ಕ್ರಿಸ್ತನ ಭಕ್ತರಾಗಿ ಸತ್ತವರು ಕಷ್ಟವು ಹೋಗಿ ಚೈತನ್ಯಗೊಳ್ಳುವರು ಯಾಕೆಂದರೆ **ಅವರ ಸುಕೃತ್ಯಗಳು ಅವರೊಡನೆ ಬರುವವು**. KJVಯಲ್ಲಿ “ಅವರ ಕ್ರಿಯೆಗಳು ಅವರನ್ನು ಹಿಂಬಾಲಿಸುವವು” ಎಂದಿರುತ್ತದೆ, ಆದರೆ “ಅವರೊಡನೆ” (μετά, *meta*) ಎಂಬ ಉಪಸರ್ಗವು ಮೂಲವಾಕ್ಯದ ಭಾಗವಾಗಿರುತ್ತದೆ. ಇಲ್ಲಿರುವ ಪಾಠವು ಏನೆಂದರೆ ಅವರು ತನ್ನ ಸೇವೆಯಲ್ಲಿ ಮಾಡಿರುವಂಥದ್ದನ್ನು ಅಥವಾ ಆತನ ಕೆಲಸಕ್ಕಾಗಿ ಏನೇನು ಅನುಭವಿಸಿದರೆಂಬುದನ್ನು ದೇವರು ಮರೆತು ಹೋಗುವದಿಲ್ಲ ಎಂಬದೆ (ನೋಡಿರಿ 1 ಕೊರಿಂಥ 15:58). ಒಂದು ತಂಬಿಗೆ ತಣ್ಣೀರು ಸಹ ಮರೆತು ಹೋಗಲ್ಪಡುವದಿಲ್ಲ (ಮತ್ತಾಯ 10:42).

14ನೇ ಅಧ್ಯಾಯದ ತನಕವೂ ಒಂದು ಆಯ್ಕೆಯನ್ನು ಮಾಡಿಕೊಳ್ಳಲು ಅವಕಾಶವು ಕೊಡಲ್ಪಟ್ಟಿರುತ್ತದೆ. ತತ್ಪರಿಣಾಮವಾಗಿ, ವಾಚಕನಿಗೆ ಹೀಗೆ ಹೇಳಲಾಗುತ್ತದೆ, “ನೀನು ಕೆಲವು ದಿನಗಳ ಮಟ್ಟಿಗೆ ಒಂದು ಸುಖಕರವಾದ ಜೀವನವನ್ನು ಆರಿಸಿಕೊಳ್ಳಬಹುದು, ಅದಾದ ನಂತರ ನಿತ್ಯವಾದ ನರಕವು ಇರುವದು; ಅಥವಾ ನೀವು ಕೆಲವು ದಿನಗಳ ಮಟ್ಟಿಗೆ ಕಷ್ಟವನ್ನನುಭವಿಸುವದಕ್ಕೆ ಆರಿಸಿಕೊಳ್ಳಬಹುದು, ಅದಾದ ಬಳಿಕ ನಿತ್ಯವಾದ ಪರಲೋಕವಿರುವದು.” ಅದರ ಬೆಳಕಿನಲ್ಲಿ ನೋಡುವಾಗ, ಆಯ್ಕೆಯು ಅಷ್ಟೇನೂ ಕಠಿಣವೇನಿಸುವದಿಲ್ಲ; ವಿಷಾದಕರವಾಗಿ, ಜನರು ತಕ್ಷಣದ ಭವಿಷ್ಯವನ್ನು ಬಿಟ್ಟರೆ ಮಿಕ್ಕ ಎಲ್ಲದಕ್ಕೂ ಕಣ್ಣುಗಳನ್ನು ಮುಚ್ಚಿಕೊಳ್ಳುವ ಪ್ರವೃತ್ತಿ ತೋರುತ್ತಾರೆ.

ಪವಿತ್ರಾತ್ಮನು ಈ ಆಯ್ಕೆಯನ್ನು ಇಷ್ಟೊಂದು ಕಣ್ಣಿಗೆ ಕಟ್ಟಿದಂತೆ ತಿಳಿಯಪಡಿಸಿರುವದು ವಾಚಕನಿಗೆ ಗೊತ್ತು ಪಡಿಸುವದೇನೆಂದರೆ ನಂಬಿಗಸ್ತರಾಗಿ ಉಳಿಯು ತೀರ್ಮಾನವನ್ನು ಮಾಡಿಕೊಳ್ಳುವದು ಎಷ್ಟು ಕಷ್ಟಕರವಾಗಿರುತ್ತದೆಂಬುದನ್ನು ಕರ್ತನು ಗ್ರಹಿಸಿಕೊಳ್ಳುತ್ತಾನೆ ಎಂಬುದೆ. ಅವರು ತಮಗೆ ಹಾಗೂ ತಮ್ಮ ಕುಟುಂಬದಕ್ಕೆ ಅವಮಾನ, ನೋವು, ಹಾಗೂ ಸಾವು ಸಂಭವಿಸದಂತೆ ತಪ್ಪಿಸಿಕೊಳ್ಳುವದಕ್ಕೆ ಆತನನ್ನು ನಿರಾಕರಿಸಬೇಕೆಂಬ ಪ್ರಲೋಭನೆಗೆ ಒಳಗಾಗುವರು ಎಂಬುದು ಆತನಿಗೆ ಗೊತ್ತಿತ್ತು. ಆತನ ಜನರು ಕಲ್ಲಿನಿಂದಲೂ ಸತ್ಯದಿಂದಲೂ ಕೂಡಿರುವಂಥದ್ದರ ಬದಲಾಗಿ ಬಿಸಿಲಿನಿಂದಲೂ ಮೃದಯವಾಗಿಯೂ ಇರುವಂಥದ್ದ ದಾರಿಯನ್ನು ಆರಿಸಿಕೊಳ್ಳುವ ಶೋಧನೆಯನ್ನು ಎದುರಿಸುತ್ತಾರೆಂಬುದು ಕರ್ತನಿಗೆ ಗೊತ್ತಿರುತ್ತದೆ. ತತ್ಪರಿಣಾಮವಾಗಿ, ಆತನು ಈ ಬುದ್ಧಿವಾದವನ್ನು ಮುಂದುವರೆಸುತ್ತಾನೆ, “ದೂರಭಾವಿ ದೃಷ್ಟಿಕೋನವನ್ನು ತೆಗೆದುಕೊಳ್ಳಿರಿ.”

## ಮಹಾ ಸುಗ್ಗೀಕಾಲ (14:14-20)

ಜನರು ಭವಿಷ್ಯವು ಹೇಗಿರುತ್ತದೆಂಬುದನ್ನು ತಿಳಿದುಕೊಳ್ಳುವಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಕೆಲವರು ಜಾತಕಗಳನ್ನು ನೋಡುತ್ತಾರೆ, ಅತೀಂದ್ರಿಯಗಳನ್ನು, ಪ್ರೇತಗಳ ಮಾಧ್ಯಮಿಕಗಳನ್ನು, ಹಾಗೂ ಒಯಿಜಾ ಬೋರ್ಡ್ ಇತ್ಯಾದಿಗಳಲ್ಲಿ ವಿಚಾರಿಸುತ್ತಾರೆ. ಇನ್ನು ಕೆಲವರು ಹೊಸ ತಂತ್ರಜ್ಞಾನಗಳನ್ನು ಪ್ರಯತ್ನಿಸಿ ನೋಡುತ್ತಾರೆ: ಶೈಲಿಗಳ ಮೌಲ್ಯಮಾಪನ ಮಾಡುವಂತೆ ವಿನ್ಯಾಶಿಸಲ್ಪಟ್ಟಿರುವ ಕಂಪ್ಯೂಟರ್ ಕಾರ್ಯಕ್ರಮಗಳು. ಅತಿ ಉತ್ತಮವೆಂದು ಹೇಳುವದಾದರೆ, ಈ ವಿವಿಧ ಮೂಲಗಳು ಕೇವಲ ಭವಿಷ್ಯದ ಕುರಿತಾದ ಕೆಲವೊಂದು ಸರಿಸುಮಾರು ಎಂದೆನ್ನಬಹುದಾದ ಊಹೆಗಳನ್ನು ತಿಳಿಸುತ್ತವೆ - ಮತ್ತು ಭವಿಷ್ಯದ ಕುರಿತಾಗಿ ನಮಗೊಂದಿ ಮಿನುಗು ನೋಟವನ್ನು ಕೊಡಬಲ್ಲ

ಏಕೈಕ ಪುಸ್ತಕವೆಂದರೆ ಅದು ಬೈಬಲ್ಲೇ.

ಭವಿಷ್ಯದ ವಿಷಯವಾಗಿ ನೋಡುವದಾದರೆ, ಬೈಬಲ್ ನಮಗೆ ಬಯಲುಗೊಳಿಸುವ ಅತ್ಯಂಥ ಪ್ರಾಮುಖ್ಯವಾದ ಸಂಗತಿಯೆಂದರೆ ಮಾನವು ಒಂದು ಪರಾಕಾಷ್ಠೆಯಿಂದ ಕೂಡಿದ ಕ್ಷಣದ ಕಡೆಗೆ ವೇಗವಾಗಿ ಸಾಗುತ್ತಿದೆ ಎಂಬುದೆ: ಅದು ಕ್ರಿಸ್ತನು ಹಿಂದಿರುಗಿ ಬರುವಂಥ ಮತ್ತು ನ್ಯಾಯತೀರ್ಪು ಹೊಂದುವದಕ್ಕಾಗಿ ಪ್ರತಿಯೊಬ್ಬ ವ್ಯಕ್ತಿಯು ದೇವರ ಸಿಂಹಾಸನದ ಮುಂದೆ ನಿಂತುಕೊಳ್ಳುವಂಥ ಸಮಯವಾಗಿರುತ್ತದೆ.

> ... ಮನುಷ್ಯಕುಮಾರನು ತನ್ನ ಮಹಿಮೆಯಿಂದ ಎಲ್ಲಾ ದೇವದೂತರೊಂದಿಗೆ ಕೂಡಿಬರುವಾಗ ತನ್ನ ಮಹಿಮೆಯ ಸಿಂಹಾಸನದಲ್ಲಿ ಕೂತುಕೊಳ್ಳುವನು; ಮತ್ತು ಎಲ್ಲಾ ದೇಶಗಳ ಜನರು ಆತನ ಮುಂದೆ ಕೂಡಿಸಲ್ಪಡುವರು. ಕುರುಬನು ಆಡುಗಳನ್ನೂ ಕುರಿಗಳನ್ನೂ ಬೇರೆಬೇರೆಮಾಡುವ ಪ್ರಕಾರ ಆತನು ಅವರನ್ನು ಬೇರೆಬೇರೆಮಾಡಿ ಕುರಿಗಳನ್ನು ತನ್ನ ಬಲಗಡೆಯಲ್ಲಿ ಆಡುಗಳನ್ನು ತನ್ನ ಎಡಗಡೆಯಲ್ಲಿ ನಿಲ್ಲಿಸುವನು (ಮತ್ತಾಯ 25:31-33).

ಪ್ರಕಟನೆ 14:14-20 ವಚನಗಳು ಆ ನಿರ್ಣಾಯಕ ಕಾಲವನ್ನು ಕುರಿತು ಅದು ಒಂದು *ಸುಗ್ಗೀಕಾಲ* ಎಂಬ ಪದಗಳಿಂದ ತಿಳಿಸುತ್ತದೆ. ಅನೇಕ ಹಳೆಯ ಒಡಂಬಡಿಕೆಯಲ್ಲಿ ನ್ಯಾಯತೀರ್ಪನ್ನು ಕುರಿತು ಮಾತಾಡುವಾಗ ಸುಗ್ಗೀಕಾಲದ ಸಾದೃಶ್ಯವನ್ನು ಬಳಸಲಾಗಿರುತ್ತದೆ (ಯೆಶಾಯ 63:1-6; ಯೆರೆಮೀಯ 51:33; ಪ್ರಲಾಪಗಳು 1:15; ಹೋಶೇಯ 6:11). ಯೋವೇಲ 3:13 ವಚನವು ಪ್ರಕಟನೆ 14:14-20 ವಚನಗಳಲ್ಲಿರುವ ರೀತಿಯ ಭಾಷೆಯನ್ನೇ ಒಳಗೊಂಡಿರುತ್ತದೆ. ಯೇಸುವು ತನ್ನ ಉಪದೇಶದಲ್ಲಿ, ವಿಶೇಷವಾಗಿ ಸುವಾರ್ತೆ ಸಾರಬೇಕೆಂದು ಪ್ರೋತ್ಸಾಹಿಸುವ ವೇಳೆ ಇದೇ ಸಾದೃಶ್ಯವನ್ನು ಬಳಸಿದನು (ಮತ್ತಾಯ 9:37, 38; ಲೂಕ 10:2; ಯೋಹಾನ 4:35-38). ಆತನ ಶಿಷ್ಯರು ಗೋಧಿ ಮತ್ತು ಹಣಜಿಯ ಕುರಿತ ಸಾಮ್ಯದ ಅರ್ಥವನ್ನು ವಿವರಿಸಬೇಕೆಂದು ಆತನನ್ನು ಕೇಳಿಕೊಂಡ ವೇಳೆ, ಯೇಸುವು ಹೀಗೆ ಹೇಳಿದನು,

> ... ಸುಗ್ಗೀಕಾಲ ಅಂದರೆ ಯುಗದ ಸಮಾಪ್ತಿ; ಕೊಯ್ಯುವವರು ಅಂದರೆ ದೇವದೂತರು. ಮನುಷ್ಯಕುಮಾರನು ತನ್ನ ದೂತರನ್ನು ಕಳುಹಿಸುವನು; ಅವರು ಆತನ ರಾಜ್ಯದೊಳಗಿಂದ ಎಲ್ಲಾ ಕಂಟಕರನ್ನೂ ಅಧರ್ಮಿಗಳನ್ನೂ ಕೂಡಿಸಿ ಬೆಂಕೀಕೊಂಡದಲ್ಲಿ ಹಾಕುವರು; ಅಲ್ಲಿ ಗೋಳಾಟವೂ ಕಟಕಟನೆ ಹಲ್ಲುಕಡಿಯೋಣವೂ ಇರುವವು. ಆಗ ನೀತಿವಂತರು ತಮ್ಮ ತಂದೆಯ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವರು ... (ಮತ್ತಾಯ 13:39, 41-43).

ಇನ್ನೊಂದು ಸಂದರ್ಭದಲ್ಲಿ, ಯೇಸುವು ಬೆಳೆಯುವ ಬೀಜಗಳ ಕುರಿತಾದ ಸಾಮ್ಯವನ್ನು ಈ ಮಾತುಗಳಿಂದ ಮುಕ್ತಾಯಗೊಳಿಸಿದನು: “ಆದರೆ ಫಲಮಾಗಿದ ಕೂಡಲೆ ಅವನು [ರೈತನು] ಸುಗ್ಗಿ ಕಾಲ ಬಂತೆಂದು ಕೊಯಿಸುತ್ತಾನೆ” (ಮಾರ್ಕ 4:29). ಸ್ನಾನಿಕನಾದ ಯೋಹಾನನು ಅದೇ ರೀತಿಯಲ್ಲಿ ನ್ಯಾಯತೀರ್ಪನ್ನು ಸೂಚಿಸುವದಕ್ಕೆ ಸುಗ್ಗೀಕಾಲವನ್ನು ಬಳಸಿದನು (ಮತ್ತಾಯ 3:12).

ಕೃಷಿಯೇ ಪ್ರಧಾನವಾಗಿದ್ದ ದಿನದಲ್ಲಿ ಸುಗ್ಗೀಕಾಲದ ಒಂದು ದೃಷ್ಟಾಂತವು ವಿಶೇಷವಾಗಿ ಅರ್ಥಗರ್ಭಿತವಾಗಿರುತ್ತಿತ್ತು. ಅಲ್ಲದೆ ಅದು ಅಸಹಜವಾದ ರೀತಿಯಲ್ಲಿ ಸಾಮಾನ್ಯವಾಗಿತ್ತು ಯಾಕೆಂದರೆ ಸುದೀರ್ಘವಾದ ಬೆಳೆಯುವ ಕಾಲದ ಬಳಿಕ ಸುಗ್ಗೀಕಾಲವು ಬರುತ್ತಿತ್ತು ಹಾಗೂ ಅದು ಪ್ರಕ್ರಿಯೆಯ ಪರಾಕಾಷ್ಠೆಯಾಗಿರುತ್ತಿತ್ತು.[21] ಸುಗ್ಗಿಯನ್ನು ಮಾಡುವದು ಕಷ್ಟಕರವಾದ

ಕೆಲಸವಾಗಿತ್ತು, ಆಯಾಸವನ್ನುಂಟು ಮಾಡುವ, ಹೊಲಸಾದ ಕೆಲಸವಾಗಿತ್ತು - ಆದರೆ ಅದು ಒಂದು ಉತ್ಸಾಹಕರವಾದ ಕೆಲಸವೂ ಆಗಿತ್ತು, ಯಾಕೆಂದರೆ ಅದು ತಿಂಗಳುಗಟ್ಟಲೆ ಮಾಡಿದ ಪ್ರಯಾಸವನ್ನು ಸಮಾಪ್ತಿಗೊಳಿಸುವ ಕ್ಷಣವಾಗಿತ್ತು.

14:14-20ರಲ್ಲಿನ ಸುಗ್ಗಿಯ ದೃಶ್ಯದ ವಿಷಯವಾಗಿ ನೋಡುವದಾದರೆ, ನಾವು ಮೊದಲು ಈ ವಾಕ್ಯಭಾಗವನ್ನು ಓದುವಾಗ,

> ಎರಡು ಸುಗ್ಗಿಗಳಿರುವಂತೆ ತೋರುತ್ತದೆ: 14:14-16, 17-20. ಹೇಗೂ, ಇವುಗಳು ಒಂದೇ ಘಟನೆಯ ಎರಡು ಬದಿಗಳಾಗಿದ್ದು, ಒಂದು ಏಕಕಾಲದಲ್ಲಿ ನಡೆಯುವ ದರ್ಶನದ ಎರಡು ಬೇರ್ಪಡಿಸಲಾಗದ ಭಾಗಗಳಾಗಿರುತ್ತವೆ. ಅಲ್ಲಿ ಎರಡು ಫಲಿತಾಂಶಗಳನ್ನು ಹೊಂದಿರುವ ಒಂದೇ ದರ್ಶನವಿರುತ್ತದೆ: ಒಂದು ಹೊಸ ಯೆರೂಸಲೇಮಿನ ನಾಗರಿಕಗಾಗಿ (14:14-16); ಮತ್ತು ಇನ್ನೊಂದು ಬಿದ್ದುಹೋಗಿರುವ ಬಾಬೆಲಿನ ನಾಗರಿಕಾಗಿ ಇರುವಂಥದ್ದು (ವಚನಗಳು 17-20).[22]

G. B. Cairdನು 14:14-20ರಲ್ಲಿನ ದರ್ಶನದ ಎರಡು ಭಾಗಗಳನ್ನು "ಒಂದು ಚರ್ಚೆಯಾಂಶದ ಮೇಲಿರುವ ಬೇರೆ ಬೇರೆ ವಿಧಗಳು"[23] ಎಂದು ಕರೆದನು.

ಈ ವಾಕ್ಯಭಾಗವು ಮಾನವರಿಗಾಗುವ ಅಂತಿಮ ನ್ಯಾಯತೀರ್ಪನ್ನು ಚಿತ್ರಿಸುತ್ತದೋ ಅಥವಾ ರೋಮನ್ ಸಾಮ್ರಾಜ್ಯದ ನಾಶವು ಇಲ್ಲಿ ಪ್ರಾಥಮಿಕವಾಗಿ ತೋರಿಸಲ್ಪಟ್ಟಿರುತ್ತದೋ ಎಂಬುದರ ಕುರಿತು ಕೆಲವು ಪ್ರಶ್ನೆಗಳಿರುತ್ತವೆ. ಆ ದಿನಕ್ಕೆ ವಿಶಿಷ್ಟವಾಗಿದ್ದ ಭಾಷೆಯಾಗಿದ್ದು, ಇದು ಅಂತಿಮ ನ್ಯಾಯತೀರ್ಪಿನ ಕುರಿತಾದ ಕಣ್ಣಿಗೆಕಟ್ಟಿದಂಥ ಚಿತ್ರಣವಾಗಿರುತ್ತದೆಂದು ನಂಬುವಂತೆ ಒಬ್ಬನನ್ನು ನಡಿಸುವದಾಗಿದೆ. ಈ ಹೇಳಿಕೆಗಳು ಪ್ರತಿಯೊಬ್ಬ ವ್ಯಕ್ತಿಯು ಹೀಗೆ ಕೇಳುವಂತೆ ನಡಿಸತಕ್ಕದ್ದು, "ಕ್ರಿಸ್ತನು ಹಿಂದಿರುಗಿ ಬರುವಾಗ, ನಾನು ಗೋದಿಯ ಹಾಗೆ ಸುರಕ್ಷತೆಗೆ ಕರೆತರಲ್ಪಡುವೆನೋ, ಅಥವಾ ನಾನು ದೇವರ ರೌದ್ರವೆಂಬ ದ್ರಾಕ್ಷಾ ಗಾಣದಲ್ಲಿ ತುಳಿಯಲ್ಪಡುವ ದ್ರಾಕ್ಷೆಯ ಫಸಲಿನಂತೆ ತುಳಿಯಲ್ಪಡುವೆನೋ?"

## ಮೇಘದಲ್ಲಿ ಕೂತಿರುವಾತನು (14:14-16)

**14ನಾನು ನೋಡಲಾಗಿ ಇಗೋ, ಪ್ರಕಾಶಮಾನವಾದ ಒಂದು ಮೇಘವು ನನಗೆ ಕಾಣಿಸಿತು. ಆ ಮೇಘದ ಮೇಲೆ ಮನುಷ್ಯಕುಮಾರನಂತಿದ್ದವನೊಬ್ಬನು ಕೂತಿರುವದನ್ನು ಕಂಡೆನು. ಆತನ ತಲೆಯ ಮೇಲೆ ಚಿನ್ನದ ಕಿರೀಟವೂ ಆತನ ಕೈಯಲ್ಲಿ ಹದವಾದ ಕುಡುಗೋಲೂ ಇದ್ದವು. 15ಆಗ ದೂತನಾದ ಮತ್ತೊಬ್ಬನು ದೇವಾಲಯದೊಳಗಿಂದ ಬಂದು ಮೇಘದ ಮೇಲೆ ಕುಳಿತಿದ್ದಾತನಿಗೆ - ಭೂಮಿಯ ಪೈರು ಮಾಗಿ ಒಣಗಿದೆ; ಕೊಯ್ಯುವ ಕಾಲ ಬಂತು; ನಿನ್ನ ಕುಡುಗೋಲನ್ನು ಹಾಕಿ ಕೊಯ್ಯಿ ಎಂದು ಮಹಾ ಶಬ್ದದಿಂದ ಕೂಗಿದನು. 16ಮೇಘದ ಮೇಲೆ ಕುಳಿತಿದ್ದಾತನು ತನ್ನ ಕುಡುಗೋಲನ್ನು ಹಾಕಿ ಭೂಮಿಯ ಪೈರನ್ನು ಕೊಯಿದನು; ಭೂಮಿಯ ಪೈರು ಕೊಯ್ಯಲ್ಪಟ್ಟಿತು.**

ವಚನ **14.** ಯೋಹಾನನು ಹೀಗೆ ಬರೆಯುತ್ತಾನೆ, **ನಾನು ನೋಡಲಾಗಿ ಇಗೋ, ಪ್ರಕಾಶಮಾನವಾದ ಒಂದು ಮೇಘವು ನನಗೆ ಕಾಣಿಸಿತು. ಆ ಮೇಘದ ಮೇಲೆ ಮನುಷ್ಯಕುಮಾರನಂತಿದ್ದವನೊಬ್ಬನು ಕೂತಿರುವದನ್ನು ಕಂಡೆನು. ಆತನ ತಲೆಯ ಮೇಲೆ ಚಿನ್ನದ ಕಿರೀಟವೂ ಆತನ ಕೈಯಲ್ಲಿ ಹದವಾದ ಕುಡುಗೋಲೂ ಇದ್ದವು.** KJVಯಲ್ಲಿ ಮನುಷ್ಯಕುಮಾರನಂತಿದ್ದವನೊಬ್ಬನು ಎಂಬದರ ಬದಲಾಗಿ "ಮನುಷ್ಯಕುಮಾರನು" (ಒತ್ತಿ

ಹೇಳಿದ್ದು ನನ್ನದು) ಎಂದಿರುತ್ತದೆ, ಆದರೆ ಹಸ್ತಪ್ರತಿಗಳಲ್ಲಿನ ಪುರಾವೆಯು "the" ಎಂಬುದರ ಬದಲಾಗಿ "ಒಬ್ಬನು" ಎಂಬುದರ ಪರವಾಗಿರುತ್ತದೆ. ಪುಸ್ತಕದೊಳಗಿನ ಮೊದಲನೆಯ ದರ್ಶನದಲ್ಲಿ (1:12-3:22), ಯೋಹಾನನು "ದೀಪಸ್ತಂಭಗಳ ಮಧ್ಯದಲ್ಲಿ ಮನುಷ್ಯಕುಮಾರನಂತೆ ಇರುವವನನನ್ನು" ಕಂಡಿದ್ದನು (1:13), ಅದು ಯೇಸು ಕ್ರಿಸ್ತನನನ್ನು ಸೂಚಿಸಿ ಹೇಳಿದ್ದಾಗಿರುತ್ತದೆ (1:13ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಯಾವ ಸಂಶಯವೂ ಇಲ್ಲದೆ, 14ರಿಂದ 16 ವಚನಗಳು ಯೇಸುವನ್ನು ಬಣ್ಣಿಸುತ್ತವೆ (ನೋಡಿರಿ ಯೋಹಾನ 5:27). NASB ಅನುವಾದಕರು ಈ ವಾಕ್ಯಭಾಗ ಯೇಸುವಿನ ಕುರಿತು ಮಾತಾಡುತ್ತಿದೆ ಎಂದು ಯೋಚಿಸಿದರು, ಯಾಕೆಂದರೆ ಅವರು 14:14-16ರಲ್ಲಿ "ಆತನ" ಎಂಬ ಪದಕ್ಕೆ ದೊಡ್ಡ "H" ಬಳಸಿರುತ್ತಾರೆ, ಅದು ದೇವತ್ವವನ್ನು ಸೂಚಿಸುವದಕ್ಕೆ NASBಯು ಬಳಸಿರುವ ಶೈಲಿಯಾಗಿರುತ್ತದೆ. ಕೆಲವು ವ್ಯಾಖ್ಯಾನಕಾರರು "ಮನುಷ್ಯಕುಮಾರನಂತಿದ್ದವನೊಬ್ಬನು" ಎಂಬುದನ್ನು ಯೇಸುವು ಎಂಬದಾಗಿ ವ್ಯಾಖ್ಯಾನಿಸುವದಕ್ಕೆ ಆಕ್ಷೇಪಣೆಗಳನ್ನು ಹೊಂದಿರುತ್ತಾರೆ: ವಾಸ್ತವಾಂಶವೇನೆಂದರೆ ಯಾವಾಗ ಕೊಯ್ಯಬೇಕೆಂದು ಒಬ್ಬ ದೇವದೂತನು ಅವನಿಗೆ ಹೇಳುತ್ತಾನೆ ಎಂಬುದು, ಮತ್ತು ಅಲ್ಲಿ "ದೂತನಾದ ಮತ್ತೊಬ್ಬನು" ಎಂಬುದು ಬಳಸಲ್ಪಟ್ಟಿದೆ ಎಂಬುದನ್ನು ಎತ್ತಿ ತೋರಿಸುತ್ತಾರೆ. ಈ ಎರಡೂ ಆಕ್ಷೇಪಣೆಗಳ ಬಗ್ಗೆ ಅನಂತರದಲ್ಲಿ ವಿಶ್ಲೇಷಿಸಲಾಗುವದು.

ಮೊದಲನೆಯ ದರ್ಶನದಲ್ಲಿ, ಯೇಸುವು ಚಿನ್ನದ ದೀಪಸ್ತಂಭಗಳ ಮಧ್ಯದಲ್ಲಿ ನಡೆದಾಡುತ್ತಿದ್ದನು (1:13; 2:1); ಈ ದರ್ಶನದಲ್ಲಿ, ಆತನು ಮೇಘಗಳ ಮೇಲೆ ಕೂತಿದ್ದನು - ಅದು ದೈವತ್ವದ ಒಂದು ವಿಶೇಷಾಧಿಕಾರವಾಗಿರುತ್ತದೆ (ಕೀರ್ತನೆ 104:3; ಯೆಶಾಯ 19:1). ಅಧ್ಯಾಯ 1ರಲ್ಲಿ ಯೇಸುವು ಒಂದು ಚಿನ್ನದ ಪಟ್ಟಿಯನ್ನು ಎದೆಗೆ ಕಟ್ಟಿಕೊಂಡವನಾಗಿ ಒಂದು ರಾಜಕುಮಾರನ ನಿಲುವಂಗಿಯನ್ನು ಧರಿಸಿಕೊಂಡಿದ್ದನು (1:13); ಇಲ್ಲಿ ಆತನು ತನ್ನ ತಲೆಯ ಮೇಲೆ ಚಿನ್ನದ ಕಿರೀಟವನ್ನು ಹೊಂದಿದ್ದನು. **ಚಿನ್ನದ ಕಿರೀಟ** ಎಂಬ ಪದವು "ಮಾಲೆ" στέφανος (*stephanos*) ಎಂದು ಅನುವಾದಿಸಲ್ಪಟ್ಟಿರುವ ಪದಕ್ಕೆ ಅಸಹಜವಾದದ್ದಾಗಿದೆ, ಇದರರ್ಥವು ಜಯಮಾಲೆ ಎಂದಾಗಿರುತ್ತದೆ. ಸಾಮಾನ್ಯವಾಗಿ *stephanos*ವು ಹಸಿಯಾದ ಕೊಂಬೆಯಿಂದ ತಯಾರಿಸಲ್ಪಟ್ಟಿರುತ್ತಿತ್ತೇ ಹೊರತು ಬಂಗಾರದಿಂದಲ್ಲ. ಈ ಚಿತ್ರಣದಲ್ಲಿ, "ಜಯ ಹಾಗೂ ರಾಜಾಧಿಕಾರದ ಎರಡು ವಿಚಾರಗಳು ... ಒಂದಾಗಿ ಮಿಶ್ರಣವಾಗಿರುತ್ತವೆ."[24]

ಹೇಗೂ, ಅತ್ಯಂಥ ಮಹತ್ವಪೂರ್ಣವಾದ ವಿರುದ್ಧ ಹೋಲಿಕೆಯೆಂದರೆ, ಮೊದಲನೆಯ ದರ್ಶನದಲ್ಲಿ ಮನುಷ್ಯಕುಮಾರನ ಬಳಿಯಲ್ಲಿ ಒಂದು ಕತ್ತಿಯಿತ್ತು (1:6); ಇಲ್ಲಿ ಆತನು **ಕುಡುಗೋಲ**ನ್ನು ಹಿಡಿದಿದ್ದನು. ಕುಡುಗೋಲು ಕತ್ತರಿಸುವದಕ್ಕೆ ಬಳಸುವ ಸಾಧನವಾಗಿದ್ದು ಅದು ಅರ್ಧದಷ್ಟು ವೃತ್ತಾಕಾರದಲ್ಲಿರುವ ಅಲುಗು ಹಿಡಿಕೆಯೊಂದಕ್ಕೆ ಜೋಡಿಸಲ್ಪಟ್ಟಿರುವದಾಗಿದೆ. ಅಂಥ ಸಾಧನವೊಂದು ಯೋಹಾನನ ದಿನದಲ್ಲಿ ಧಾನ್ಯಗಳನ್ನು ಅಥವಾ ಹುಲ್ಲು ಕತ್ತರಿಸುವದಕ್ಕೆ ಬಳಸಲಾಗುತ್ತಿತ್ತು ಮತ್ತು ಕೆಲವು ಸ್ಥಳಗಳಲ್ಲಿ ಈಗಲೂ ಅದೇ ಉದ್ದೇಶಕ್ಕೆ ಬಳಸಲ್ಪಡುತ್ತಿದೆ. ಬಹಳಷ್ಟು ಮಂದಿ ಕುಡುಗೋಲಿನ ಮೇಲೆ ಎದ್ದುಕಾಣುವಂತೆ ಸುತ್ತಿಗೆಯ ಚಿತ್ರವನ್ನು ಹಾಕಲಾಗಿರುವ ಕಮ್ಯೂನಿಷ್ಟ್ ಸಂಕೇತವನ್ನು ನೋಡಿರುತ್ತೇವೆ. ಕುಡುಗೋಲು ಕೃಷಿಯನ್ನು ಪ್ರತಿನಿಧಿಸುತ್ತದೆ; ಸುತ್ತಿಗೆಯು ವ್ಯಾಪಾರವನ್ನು ಪ್ರತಿನಿಧಿಸುತ್ತದೆ.

ಮನುಷ್ಯಕುಮಾರನು ಪೈರನ್ನು ಸುಗ್ಗಿ ಮಾಡುವದಕ್ಕಾಗಿ ಸಿದ್ಧಗೊಂಡು ಕುಡುಗೋಲನ್ನು ಹಿಡಿದುಕೊಂಡಿದ್ದನು. ಯೇಸುವು ಮೊದಲ ಸಾರಿ ಬಂದ ವೇಳೆ, ಆತನು ರಕ್ಷಕನಾಗಿ ಬಂದನು; ಆತನು ನಮ್ಮ ಪಾಪಗಳಿಗೋಸ್ಕರ ಮರಣಿಸುವದಕ್ಕೆ ಬಂದನು. ಆತನು ಎರಡನೆಯ ಸಾರಿ

ಬರುವ ವೇಳೆ, ಆತನು ನನ್ನ ನ್ಯಾಯಾಧಿಪತಿಯಾಗಿರುವನು. ಏಕೆ ದರ್ಶನವು ಯೇಸುವನ್ನು ಕೂತಿರುವವನಂತೆ - ಕಾಯುತ್ತಿರುವಂತೆ ಸ್ಪಷ್ಟವಾಗಿ ತೋರುತ್ತದೆ - ಚಿತ್ರಿಸುತ್ತದೆ? ಒಂದು ಕಾರಣವು ಏನಾಗಿರಬಹುದೆಂದರೆ "[ನ್ಯಾಯತೀರ್ಪಿನ ಸಮಯದ ಕುರಿತು] ನನ್ನ ತಂದೆಗೆ ತಿಳಿಯುವದೇ ಹೊರತು ಮತ್ತಾರಿಗೂ ತಿಳಿಯದು; ಪರಲೋಕದಲ್ಲಿರುವ ದೂತರಿಗೂ ತಿಳಿಯದು; ಮಗನಿಗೂ ತಿಳಿಯದು" (ಮಾರ್ಕ 13:32).

**ವಚನ 15.** ದರ್ಶನದಲ್ಲಿ, ಕ್ರಿಸ್ತನು ಬಹಳ ಹೊತ್ತು ಕಾಯಬೇಕಾಗಲಿಲ್ಲ. **ಆಗ ದೂತನಾದ ಮತ್ತೊಬ್ಬನು ದೇವಾಲಯದೊಳಗಿಂದ** [ದೇವರ ಸಮ್ಮುಖದೊಳಗಿಂದ] **ಬಂದು ಮೇಘದ ಮೇಲೆ ಕುಳಿತಿದ್ದಾತನಿಗೆ - ಭೂಮಿಯ ಪೈರು ಮಾಗಿ ಒಣಗಿದೆ; ಕೊಯ್ಯುವ ಕಾಲ ಬಂತು; ನಿನ್ನ ಕುಡುಗೋಲನ್ನು ಹಾಕಿ ಕೊಯ್ಯಿ ಎಂದು ಮಹಾ ಶಬ್ದದಿಂದ ಕೂಗಿದನು.**

**ದೂತನಾದ ಮತ್ತೊಬ್ಬನು** ಎಂಬ ಪದಗುಚ್ಛದರಲ್ಲಿ ಯಾವದೇ ಮಹತ್ವಪೂರ್ಣತೆಯು ಇಲ್ಲದಿರುವದು ಸ್ಪಷ್ಟವಾಗಿರುತ್ತದೆ, ಅದೇ ರೀತಿಯಲ್ಲಿಯೇ 6ನೇ ವಚನದಲ್ಲಿರುವ "ಮತ್ತೊಬ್ಬ ದೇವದೂತನು" ಎಂಬುದರಲ್ಲಿಯೂ ಇರಲಿಲ್ಲ. 6ನೇ ವಚನದಲ್ಲಿದ್ದ ಪ್ರಕಾರವಾಗಿಯೇ, 15ನೇ ವಚನದಲ್ಲಿ "ದೂತನಾದ ಮತ್ತೊಬ್ಬನು" ಎಂಬ ಪದಗುಚ್ಛವು, ಈ ಸಂದರ್ಭದಲ್ಲಿ ದೇವರ ಮತ್ತೊಬ್ಬ ಸಂದೇಶಕನನ್ನು ಸೇವೆಗೆ ಕರೆಯಲಾಯಿತು ಎಂಬುದನ್ನು ಸೂಚಿಸುತ್ತದಷ್ಟೆ. ಈ ಪದಗುಚ್ಛವು "ಮನುಷ್ಯಕುಮಾರನು" ಎಂದು ಕರೆಯಲ್ಪಟ್ಟವನು ಒಬ್ಬ ದೇವದೂತನಾಗಿದ್ದನೆಂದು ಸಾಭಿತುಪಡಿಸುವದಿಲ್ಲ. ಈ ಮುಂಚೆ ಹೇಳಿದ ಹಾಗೆ, "ಮನುಷ್ಯಕುಮಾರನು" ಎಂಬುದು ಯೇಸುವನ್ನು ಸೂಚಿಸುವಿಕೆಯಾಗಿದೆ. ಯೇಹೋವನ ಸಾಕ್ಷಿಗಳು "ಮನುಷ್ಯಕುಮಾರನು" ಯೇಸುವೇ ಆಗಿದ್ದನು ಎಂಬುದನ್ನು ಒಪ್ಪಿಕೊಳ್ಳುತ್ತಾರೆ, ಆದಾಗ್ಯೂ ಯೇಸುವು ಒಬ್ಬ ದೇವದೂತನಾಗಿದ್ದನೆ - ಒಬ್ಬ ಸೃಷ್ಟಿಸಲ್ಪಟ್ಟ ಜೀವಿ - ಎಂಬುದನ್ನು ಸಾಭಿತುಪಡಿಸುವದಕ್ಕಾಗಿ ಈ ವಚನವನ್ನು ಬಳಸುವದಕ್ಕೆ ಪ್ರಯತ್ನಿಸುತ್ತಾರೆ. ಹೇಗೂ, ಯೇಸುವು ಸೃಷ್ಟಿಸಲ್ಪಟ್ಟವನಲ್ಲ, ಆದರೆ ಬದಲಾಗಿ ಸಮಸ್ತವನ್ನೂ ಸೃಷ್ಟಿಸಿದಾತನು ಎಂಬುದನ್ನು ಬೇರೆ ಅನೇಕ ವಾಕ್ಯಭಾಗಗಳು ಕಲಿಸಿ ಕೊಡುತ್ತವೆ (ಯೋಹಾನ 1:3; ಕೊಲೊಸ್ಸೆ 1:16).

ದೇವದೂತನು ಮನುಷ್ಯಕುಮಾರನಿಗೆ **ಭೂಮಿಯ ಪೈರು ಮಾಗಿ ಒಣಗಿದೆ; ಕೊಯ್ಯುವ ಕಾಲ ಬಂತು; ನಿನ್ನ ಕುಡುಗೋಲನ್ನು ಹಾಕಿ ಕೊಯ್ಯಿ** ಎಂದು ಹೇಳುತ್ತಾನೆ. **ಕಾಲ** ಎಂಬುದು ಅಪೊಸ್ತಲನಾದ ಯೋಹಾನನಿಂದ ಮೇಲಿಂದಮೇಲೆ ಬಳಸಲ್ಪಡುತ್ತದೆ, ಅದು ಅಷ್ಟಾಗಿ ಒಂದು ನಿಶ್ಚಿತ ಕಾಲವನ್ನೂ ಸೂಚಿಸಿದೆ ಸರಿಯಾದ ಅಥವಾ ಸೂಕ್ತವಾದ ಕಾಲವನ್ನು ಸೂಚಿಸುವದಾಗಿದೆ. ಒಬ್ಬ ಲೇಖಕನು ಹೀಗೆ ಹೇಳಿದನು, "ದೇವರು ಒಂದು ನಿಶ್ಚಿತವಾದ ದಿನಾಂಕಕ್ಕಾಗಿ ಕಾಯುವದಿಲ್ಲ ಆದರೆ ಒಂದು ನೆರವೇರಿದ ಉದ್ದೇಶಕ್ಕಾಗಿ ಕಾಯುತ್ತಿರುತ್ತಾನೆ."[25]

ಒಬ್ಬ ರೈತನು ಸುಗ್ಗಿಗಾಗಿ ಕಾತುರದಿಂದ ಕಾಯುತ್ತಿರುವ ವೇಳೆ, ಸಮಯವು ಹಾಗೆಯೇ ಕದಲದೆ ನಿಂತು ಬಿಟ್ಟಿದೆ ಎಂಬಂತೆ ಅನ್ನಿಸಬಹುದು. ಹೇಗೂ, ಅಂತಿಮವಾಗಿ ಸುಗ್ಗೀಕಾಲ ಬರುವದು (ಯಾಕೋಬ 5:7). ಯುದ್ಧದಲ್ಲಿ ನಲುಗಿ ಹೋಗಿರುವ ದೇವರ ಮಗುವಿಗೆ, ಕೆಲವು ಸಾರಿ ಕರ್ತನು "ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ತಡಮಾಡುತ್ತಾನೆಂದು" ತೋರಬಹುದು (2 ಪೇತ್ರ 3:9), ಆದರೆ ಹೆದರಬೇಡ: ಸುಗ್ಗೀಕಾಲ ಬರುವದು. ಅದು ಇಂದು ಬರಬಹುದು; ಅದು ನಾಳೆ ಬರಬಹುದು; ಇದು ಇಂದಿನಿಂದ ಕೆಲ ವರ್ಷಗಳಲ್ಲಿ ಬರಬಹುದು - ಆದರೆ ಅದು ಬಂದೇ ಬರುವದು ಮೂಲ ವಾಕ್ಯದಲ್ಲಿ, ξηραίνω (*xerainō*) ಎಂಬದರಿಂದ

ತೆಗೆದುಕೊಳ್ಳಲ್ಪಟ್ಟಿರುವ ಕ್ರಿಯಾಪದವು **ಮಾಗಿ** ಎಂದು ಅನುವಾದಿಸಲ್ಪಟ್ಟಿದ್ದು, "ಒಣಗಿದೆ" ಎಂದರ್ಥವಾಗಿರುತ್ತದೆ. ಈ ಪರಿಭಾಷೆಯು ದರ್ಶನದ ಈ ಭಾಗದಲ್ಲಿರುವ ಸಾಂಕೇತಿಕತೆಯು ಧಾನ್ಯದ ಸುಗ್ಗಿಯದ್ದಾಗಿರುತ್ತದೆಂಬುದನ್ನು ಪ್ರಕಟಗೊಳಿಸುತ್ತದೆ. ಧಾನ್ಯದ ತೆನೆಗಳು ಸುಗ್ಗಿ ಮಾಡಲ್ಪಡುವದಕ್ಕೆ ಮುನ್ನ ಸಂಪೂರ್ಣ ಒಣಗಿರಬೇಕಾಗುತ್ತದೆ. ನಾವು ಗಾಳಿಯಿಂದ ಅತ್ತಿತ್ತ ಅಲುಗಾಡುತ್ತಿರುವ ಬಂಗಾರದ ಬಣ್ಣದ ಗೋದಿಯ ಒಂದು ವಿಸ್ತಾರವಾದ ಸಮುದ್ರವನ್ನು ಕಲ್ಪನೆ ಮಾಡಿಕೊಳ್ಳತಕ್ಕದ್ದು.

**ವಚನ 16.** ತಂದೆಯು ಕಾಲವು ಬಂದಿದೆ ಎಂದು ಹೇಳಿದಾಗ, ಮಗನು ತಡಮಾಡಲಿಲ್ಲ: **ಮೇಘದ ಮೇಲೆ ಕುಳಿತಿದ್ದಾತನು ತನ್ನ ಕುಡುಗೋಲನ್ನು ಹಾಕಿ ಪೈರನ್ನು ಕೊಯಿದನು. ಹಾಕಿ** ಎಂದು ಅನುವಾದಿಸಲ್ಪಟ್ಟಿರುವ ಪದವು βάλλω (*ballō*) ಎಂಬುದರಿಂದ ತೆಗೆದುಕೊಳ್ಳಲ್ಪಟ್ಟಿದ್ದು, ಅದನ್ನು "ಎಸೆದನು" ಎಂದು ಸಹ ಅನುವಾದಿಸಬಹುದಾಗಿದೆ. ಆತನು ತನ್ನ ಕುಡುಗೋಲನ್ನು ಭೂಮಿಯ ಮೇಲೆ "ಎಸೆದನು." ಕುಡುಗೋಲು ತಿರುಗುಬಾಣದ ರೀತಿಯಲ್ಲಿ ಸುತ್ತುತ್ತಾ ಇರುವದನ್ನು, ಅದು ಮೊಬ್ಬಾಗಿ ಕಾಣಿಸುವಷ್ಟು ವೇಗವಾಗಿ ತಿರುಗುತ್ತಿರುವದನ್ನು ಊಹಿಸಿಕೊಳ್ಳಿರಿ. ಅದು ಭೂಮಿಯಲ್ಲೆಲ್ಲಾ ಹಾರುತ್ತಾ ಧಾನ್ಯಗಳನ್ನು ಅವುಗಳ ಭೂಮಿಯ ಬಂಧಗಳಿಂದ ಬಿಡಿಸುತ್ತದೆ.

**ಭೂಮಿಯ ಪೈರು ಕೊಯ್ಯಲ್ಪಟ್ಟಿತು.** ಸ್ನಾನಿಕನಾದ ಯೋಹಾನನಿಂದ ಮತ್ತು ಯೇಸುವಿನಿಂದ ಚಿತ್ರಿಸಲ್ಪಟ್ಟಿರುವ ಪ್ರಕಾರ, ಆಗ ಗೋದಿಯು "ಕಣಜಗಳಲ್ಲಿ" ಸಂಗ್ರಹಿಸಲ್ಪಟ್ಟಿರಬಹುದು (ಮತ್ತಾಯ 3:12; ನೋಡಿರಿ ಮತ್ತಾಯ 13:30; ಲೂಕ 3:17). ಇದೆಲ್ಲವೂ ಕರ್ತನು ಒಂದು ದಿನ ತನ್ನ ಜನರನ್ನೆಲ್ಲಾ ತನಗಾಗಿ ಒಟ್ಟುಗೂಡಿಸಿಕೊಳ್ಳುವವು ಎಂಬುದನ್ನು ಕ್ರೈಸ್ತರಿಗೆ ಜ್ಞಾಪಕಪಡಿಸುವದಕ್ಕೆ ಬಳಸಲಾಗಿರುವ ಒಂದು ಚಿತ್ರಸದೃಶ್ಯತೆಯಾಗಿರುತ್ತದೆ.

> ಪ್ರಧಾನದೂತನ ಶಬ್ದದೊಡನೆಯೂ ದೇವರ ತುತೂರಿಧ್ವನಿಯೊಡನೆಯೂ ಆಕಾಶದಿಂದ ಇಳಿದು ಬರುವನು; ಆಗ ಕ್ರಿಸ್ತನಲ್ಲಿರುವ ಸತ್ತವರು ಮೊದಲು ಎದ್ದು ಬರುವರು. ಆಮೇಲೆ ಜೀವದಿಂದುಳಿದಿರುವ ನಾವು ಅಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವದಕ್ಕಾಗಿ ಅವರ ಸಂಗಡಲೇ ಮೇಘವಾಹನರಾಗಿ ಫಕ್ಕನೆ ಒಯ್ಯಲ್ಪಡುವೆವು; ಹೀಗಾಗಿ ನಾವು ಸದಾಕಾಲವೂ ಕರ್ತನ ಜೊತೆಯಲ್ಲಿರುವೆವು (1 ಥೆಸಲೋನಿಕ 4:16, 17).

ಅದು ಎಂಥ ಒಂದು ಮಹಿಮೆಕರವಾದ ದಿನವಾಗಿರಲಿದೆ! ಈ ದೃಶ್ಯವು ಸುಗ್ಗೀಕಾಲದ ಸಂತೋಷಕರ ಬದಿಯಾಗಿರುತ್ತದೆ. ದರ್ಶನದಲ್ಲಿ ಯೇಸುವು *ಧಾನ್ಯವನ್ನು* ಕೊಯಿದರೆ ಒಬ್ಬ ದೇವದೂತನು *ದ್ರಾಕ್ಷೇಗೊಂಚಲುಗಳನ್ನು* ಕೊಯಿದನು ಎಂಬುದರಲ್ಲಿ ಕೆಲವರು ಒಂದು ವಿಶೇಷ ಅರ್ಥವನ್ನು ಕಂಡು ಹಿಡಿಯಲು ಪ್ರಯತ್ನಿಸುತ್ತಾರೆ (ವಚನಗಳು 17-20). ಇದು ಕೇವಲ *ಒಂದು ದರ್ಶನ* ಮಾತ್ರವೇ ಆಗಿರುತ್ತದೆಂಬುದನ್ನು ನೆನಪಿಟ್ಟುಕೊಳ್ಳಿರಿ. ಸಾಂಕೇತಿಕತ್ವಕ್ಕೆ ಏನಾದರೂ ಅರ್ಥವು ಇರುವದೇ ಆಗಿದ್ದರೆ, ಯೇಸುವಿಗೆ ಪ್ರಾಥಮಿಕವಾಗಿ ತನ್ನ ಜನರ ಬಗ್ಗೆ ಕಾಳಜಿಯಿರುತ್ತದೆಂಬುದೇ ಆ ಅರ್ಥವಾಗಿರಬಹುದು. ವಾಸ್ತವಿಕದಲ್ಲಿ, ಒಳ್ಳೇಯವರು ಹಾಗೂ ಕೆಟ್ಟವರಿಬ್ಬರನ್ನೂ ಒಟ್ಟಾಗಿ "ಕೂಡಿಸುವದರಲ್ಲಿ" ಮಾತ್ರವಲ್ಲದೆ "ಪ್ರತಿಫಲಗಳನ್ನು" ಕೊಡುವದರಲ್ಲಿ ಯೇಸು ಮತ್ತು ದೇವದೂತರು *ಇಬ್ಬರೂ* ಪಾಲುಗೊಳ್ಳುವರು (ಮತ್ತಾಯ 13:41, 49; 16:27; 25:31; ಮಾರ್ಕ 8:38; ಲೂಕ 9:26; 2 ಥೆಸಲೋನಿಕ 1:7, 8).

## ದೇವದೂತನು ಮತ್ತು ಆತನ ಕುಡುಗೋಲು (14:17-20)

**[17]ಮತ್ತೊಬ್ಬ ದೂತನು ಪರಲೋಕದಲ್ಲಿರುವ ದೇವಾಲಯದೊಳಗಿಂದ ಬಂದನು. ಅವನಲ್ಲಿ ಸಹ ಹದವಾದ ಕುಡುಗೋಲು ಇತ್ತು. [18]ತರುವಾಯ ಬೆಂಕಿಗೆ ಅಧಿಕಾರಿಯಾದ ಇನ್ನೊಬ್ಬ ದೂತನು ಯಜ್ಞವೇದಿಯ ಬಳಿಯಿಂದ ಬಂದು ಆ ಹದವಾದ ಕುಡುಗೋಲಿನವನಿಗೆ - ನಿನ್ನ ಹದವಾದ ಕುಡುಗೋಲನ್ನು ಹಾಕಿ ಭೂಮಿಯ ದ್ರಾಕ್ಷೇಗೊಂಚಲುಗಳನ್ನು ಕೊಯ್ಯಿ; ಅದರ ಹಣ್ಣುಗಳು ಪೂರಾ ಮಾಗಿವೆ ಎಂದು ಮಹಾಶಬ್ದದಿಂದ ಕೂಗಿದನು. [19]ಆಗ ಆ ದೂತನು ತನ್ನ ಕುಡುಗೋಲನ್ನು ಭೂಮಿಗೆ ಹಾಕಿ ಭೂಮಿಯ ದ್ರಾಕ್ಷೇಬಳ್ಳಿಯ ಹಣ್ಣನ್ನು ಕೊಯಿದು ದೇವರ ರೌದ್ರವೆಂಬ ದೊಡ್ಡ ತೊಟ್ಟಿಯಲ್ಲಿ ಹಾಕಿದನು. [20]ಅದನ್ನು ಪಟ್ಟಣದ ಹೊರಗೆ ಆ ತೊಟ್ಟಿಯಲ್ಲಿ ತುಳಿದರು. ಆ ತೊಟ್ಟಿಯೊಳಗಿಂದ ರಕ್ತವು ಹೊರಟು ಕುದುರೆಗಳ ಕಡಿವಾಣಗಳನ್ನು ಮುಟ್ಟುವಷ್ಟು ಆಳವಾಗಿ ಇನ್ನೂರು ಮೈಲಿ ದೂರ ಹರಿಯಿತು.**

**ವಚನ 17.** ಸುಗ್ಗೀಕಾಲಕ್ಕೆ ಒಂದು ದುಃಖದ ಬದಿ ಸಹ ಇರುತ್ತದೆ, ಮತ್ತು ದರ್ಶನವು ಮುಂದೆ ಅದರ ಬಗ್ಗೆ ಹೇಳುತ್ತದೆ: **ಮತ್ತೊಬ್ಬ ದೂತನು ಪರಲೋಕದಲ್ಲಿರುವ ದೇವಾಲಯದೊಳಗಿಂದ ಬಂದನು. ಅವನಲ್ಲಿ ಸಹ ಹದವಾದ ಕುಡುಗೋಲು ಇತ್ತು.** ಸುಗ್ಗಿಯ ಈ ಭಾಗವು ಒಂದು ದ್ರಾಕ್ಷೇಗೋಂಚಲುಗಳ ಕೊಯ್ಯುವಿಕೆ ಎಂದು ಚಿತ್ರಿಸಲ್ಪಟ್ಟಿರುತ್ತದಾದ್ದರಿಂದ, ಬಹುಶಃ ನಾವು ದೇವದೂತನ ಸಾಧನವನ್ನು ಸರ್ವಸಾಧಾರಣವಾಗಿರುವ-ಗಾತ್ರದ ಕುಡುಗೋಲು ಎಂದು ನೋಡಬಾರದು, ಆದರೆ ಅದನ್ನು ಸಮರುಕೊಕ್ಕೆಯಂತೆ ಬಳಸಲ್ಪಡಬಹುದಾದ ಒಂದು ಚಿಕ್ಕದಾದ ಸಾಧನವಾಗಿರಬಹುದು. "'ಕುಡುಗೋಲು' [δρέπανον, *drepanon*] ಎಂಬ ಪದವನ್ನು 'ಸಮರುಕೊಕ್ಕೆ' ಅಥವಾ 'ಕಟಾವು ಕತ್ತಿ' ಎಂದು ಅನುವಾದಿಸಬಹುದಾಗಿದೆ."[26]

**ವಚನ 18. ತರುವಾಯ ಬೆಂಕಿಗೆ ಅಧಿಕಾರಿಯಾದ ಇನ್ನೊಬ್ಬ ದೂತನು ಯಜ್ಞವೇದಿಯ ಬಳಿಯಿಂದ ಬಂದನು.** "ಬೆಂಕಿ" ಎಂಬುದು ಸಾಮಾನ್ಯವಾಗಿ ಪ್ರಕಟನೆ ಪುಸ್ತಕದಲ್ಲಿ ದೇವರ ನ್ಯಾಯತೀರ್ಪಿಗೆ ಸಂಬಂಧಿಸಿದಂತೆ ಬಳಸಲ್ಪಟ್ಟಿರುತ್ತದೆ. **ಬೆಂಕಿಗೆ ಅಧಿಕಾರಿ** ಎಂಬುದರ ಅರ್ಥವು ದೇವರು ನ್ಯಾಯವನ್ನು ಒದಗಿಸುವದಕ್ಕೆ ದೇವದೂತನನ್ನು ಒಂದು ವಿಶೇಷವಾದ ವಿಧದಲ್ಲಿ ಬಳಸಿಕೊಂಡನೆಂಬದಾಗಿರಬಹುದು. ಈ **ದೇವದೂತನು** 8ನೇ ಅಧ್ಯಾಯದಲ್ಲಿ ಪರಿಚಯಿಸಲ್ಪಟ್ಟವನೇ ಆಗಿರಬಹುದಾಗಿದೆ, ಆತನು ಯಜ್ಞವೇದಿಯ ಮೇಲೆ ಧೂಪವನ್ನು ಹಾಕಿದನು, ಅದರ ಹೊಗೆಯು ದೇವಜನರ ಪ್ರಾರ್ಥನೆಗಳೊಂದಿಗೆ ಬೆರೆತುಕೊಂಡಿತು ಎಂಬುದನ್ನು ನೋಡಿದೆವು. ಧೂಪವನ್ನು ಅರ್ಪಿಸಿದ ಮೇಲೆ, ಈ ದೇವದೂತನು ವೇದಿಯ ಮೇಲಿದ್ದ ಬೆಂಕಿಯನ್ನು ಭೂಮಿಯ ಮೇಲೆ ಹಾಕಿದ್ದನು (8:3-5). ಆತನ ಕ್ರಿಯೆಗಳು "ಅವರು - ಒಡೆಯನೇ, ಪರಿಶುದ್ಧನೂ ಸತ್ಯವಂತನೂ ಆಗಿರುವಾತನೇ, ಭೂನಿವಾಸಿಗಳು ನಮ್ಮನ್ನು ಕೊಂದದ್ದಕ್ಕಾಗಿ ನೀನು ಎಷ್ಟು ಕಾಲದವರೆಗೂ ನ್ಯಾಯವಿಚಾರಿಸದೆಯೂ ಪ್ರತಿದಂಡನೆ ಮಾಡದೆಯೂ ಇರುವಿ?" ಎಂದು "ಯಜ್ಞವೇದಿಯ ಕೆಳಗಿರುವ" ರಕ್ತಸಾಕ್ಷಿಗಳು (6:9, 10) ಕೂಗಿದ್ದಕ್ಕೆ ನೀಡಿದ ಪ್ರತಿಕ್ರಿಯೆಗಳಾಗಿದ್ದವೆಂದು ಅಭಿಪ್ರಾಯವನ್ನು ತಿಳಿಸಲಾಗಿತ್ತು. ನಾವು ಬಹುಶಃ 14ನೇ ಅಧ್ಯಾಯದ ಅಂತ್ಯದಲ್ಲಿನ ಘಟನೆಗಳನ್ನು ಅವರ ಕೂಗಿಗೆ ದೇವರು ನೀಡಿದ ಉತ್ತರವೆಂದು ಕಾಣಬಹುದಾಗಿದೆ: ತತ್ಪರಿಣಾಮವಾಗಿ ದೇವರು ಹೀಗೆ ಹೇಳುವವನಾಗಿದ್ದನು, "ಕೊನೆಗೂ, ನಿಮಗಾಗಿ ಪ್ರತಿದಂಡನೆಯನ್ನು ಮಾಡುವ ಸಮಯವು ಬಂದಿದೆ."

ಯಜ್ಞವೇದಿಯ ಬಳಿಯಿಂದ ಬಂದ ದೇವದೂತನು **ಆ ಹದವಾದ ಕುಡುಗೋಲಿನವನಿಗೆ - ನಿನ್ನ ಹದವಾದ ಕುಡುಗೋಲನ್ನು ಹಾಕಿ ಭೂಮಿಯ ದ್ರಾಕ್ಷೇಗೊಂಚಲುಗಳನ್ನು ಕೊಯ್ಯಿ; ಅದರ ಹಣ್ಣುಗಳು ಪೂರಾ ಮಾಗಿವೆ ಎಂದು ಮಹಾಶಬ್ದದಿಂದ ಕೂಗಿದನು**. ಧಾನ್ಯದ ತೆನೆಗಳು ಒಣಗಿ ಕೊಯ್ಲು ಮಾಡುವದಕ್ಕೆ ಮಾಗಿದ್ದ ಹಾಗೆಯೇ (ವ. 15), ಈಗ ಭೂಮಿಯ ದ್ರಾಕ್ಷೇಗೊಂಚಲುಗಳು ಮಾಗಿದ್ದವು ಮತ್ತು ಅವುಗಳನ್ನು ಸುಗ್ಗಿ ಮಾಡುವ ಸಮಯವು ಬಂದಿತ್ತು.

**ವಚನ 19.** ಸುಗ್ಗಿ ಮಾಡಬೇಕೆಂದು ಆಜ್ಞೆಯು ಬಂದಾಗ, ಪುನಃ ಅಲ್ಲಿ ಸ್ವಲ್ಪವೂ ತಡ ಮಾಡಲ್ಪಡಲಿಲ್ಲ. **ಆಗ ಆ ದೂತನು ತನ್ನ ಕುಡುಗೋಲನ್ನು ಭೂಮಿಗೆ ಹಾಕಿ ಭೂಮಿಯ ದ್ರಾಕ್ಷೇಬಳ್ಳಿಯ ಹಣ್ಣನ್ನು ಕೊಯಿದ**ನು. ಹೇಗೂ, ಈ ಸಾರಿ ಸುಗ್ಗಿ ಮಾಡಲ್ಪಟ್ಟದ್ದನ್ನು ಸುರಕ್ಷಿತವಾದ ಸ್ಥಳದಲ್ಲಿ ಸಂಗ್ರಹಿಸಿಡಲ್ಪಡಲಿಲ್ಲ. ಬದಲಾಗಿ, ದೇವದೂತನು ಗೊಂಚಲುಗಳನ್ನು **ದೇವರ ರೌದ್ರವೆಂಬ ದೊಡ್ಡ** [ದ್ರಾಕ್ಷೆ] **ತೊಟ್ಟಿಯಲ್ಲಿ ಹಾಕಿದನು.**

ಒಂದು ದ್ರಾಕ್ಷೆ**ತೊಟ್ಟಿ**ಯು ಕೆಳಮಟ್ಟದಲ್ಲಿರುವ ಒಂದು ಬೃಹತ್ ಪಾತ್ರೆಗೆ ಕೊಳವೆಯಿಂದ ಜೋಡಿಸಲ್ಪಟ್ಟಿರುವ ದೊಡ್ಡ ತೊಟ್ಟಿಯಾಗಿತ್ತು. ತೊಟ್ಟಿಗಳನ್ನು ಒಂದು ಬಂಡೆಯಲ್ಲಿ ನಿರ್ಮಿಸಲ್ಪಟ್ಟಿರುತ್ತಿತ್ತು ಅಥವಾ ಇಟ್ಟಿಗೆಗಳಿಂದ ಕಟ್ಟಿರಲಾಗಿತ್ತು. ದ್ರಾಕ್ಷೆಗಳನ್ನು ಮೇಲಿನ ತೊಟ್ಟಿಯಲ್ಲಿ ಹಾಕಲಾಗುತ್ತಿತ್ತು, ಅದು ನಿಜವಾದ ದ್ರಾಕ್ಷೇಗಾಣವಾಗಿತ್ತು.ಕೆಲವು ಸಾರಿ ದ್ರಾಕ್ಷೆಗಳನ್ನು ಭಾರದ ವಸ್ತುವಿನಿಂದ ಒತ್ತಲಾಗುತ್ತಿತ್ತು. ಆದರೆ ಸಾಮಾನ್ಯವಾಗಿ ಅವುಗಳನ್ನು ಕಾಲುಗಳಿಂದ ತುಳಿಯಲಾಗುತ್ತಿತ್ತು (ಯೆಶಾಯ 63:3). ತುಳಿಯುವದರಿಂದ ಉತ್ಪತ್ತಿಯಾಗುವ ರಸವು ಕೆಳಗಿರುವ ತೊಟ್ಟಿಗೆ ಹರಿದು ಹೋಗುತ್ತಿತ್ತು, ಅದನ್ನು “ಪೀಪಾಯಿ” (ಹಗ್ಗಾಯ 2:16) ಎಂದು ಕರೆಯಲಾಗುತ್ತಿತ್ತು.

ದ್ರಾಕ್ಷೇತೊಟ್ಟಿಯಲ್ಲಿ ದ್ರಾಕ್ಷೆಗಳು ತುಳಿಯಲ್ಪಡುವಿಕೆಯನ್ನು ಹಳೆಯ ಒಡಂಬಡಿಕೆಯಲ್ಲಿ ದೇವರ ನ್ಯಾಯ ಒದಗಿಸುವಿಕೆಯ ಒಂದು ಸಾದೃಶ್ಯವಾಗಿ ಬಳಸಲ್ಪಟ್ಟಿರುತ್ತದೆ (ಯೆಶಾಯ 63:3; ಪ್ರಲಾಪಗಳು 1:15; ಯೋವೇಲ 3:13). ಈ ಸಾಂಕೇತಿಕತೆಯು ಹಿಂಸೆಗೊಳಗಾಗಿದ್ದ ಕ್ರೈಸ್ತರಿಗೆ ಒಂದು ವಿಶೇಷ ಅರ್ಥವನ್ನು ಹೊಂದಿರಬಹುದಾಗಿದೆ: ಅವರ ಹಿಂಸಕರು ಅವರನ್ನು ತುಳಿದ ಪ್ರಕಾರವೇ, ಅವರ ಹಿಂಸಕರು ಸಹ ತುಳಿಯಲ್ಪಡುವರು.

**ವಚನ 20. ಅದನ್ನು ಪಟ್ಟಣದ ಹೊರಗೆ ಆ ತೊಟ್ಟಿಯಲ್ಲಿ ತುಳಿದರು.** ವ್ಯಾಖ್ಯಾನಕಾರರು ಈ ವಾಕ್ಯಭಾಗದಲ್ಲಿರುವ **ಪಟ್ಟಣ**ವನ್ನು ಗುರುತಿಸುವದಕ್ಕೆ ಕಷ್ಟಪಡುತ್ತಾರೆ. ಬಹುಶಃ ಈ ಪದಗುಚ್ಛವು ಚಿತ್ರಣವನ್ನು ಸಂಪೂರ್ಣಗೊಳಿಸುವದಕ್ಕೆ ಕೊಡಲ್ಪಟ್ಟಿರುವ ಮಹತ್ವಪೂರ್ಣವಲ್ಲದ ಅಂಶವಾಗಿರಬಹುದಾಗಿದೆ; ಸಾಮಾನ್ಯವಾಗಿ ದ್ರಾಕ್ಷೇತೊಟ್ಟಿಗಳು ಪಟ್ಟಣದ ಗೋಡೆಗಳ **ಹೊರಗೆ** ಇರುತ್ತಿದ್ದವು. “ಪಟ್ಟಣ” ಎಂಬುದಕ್ಕೆ ಏನಾದರೂ ಮಹತ್ವವು ಇರುವದಾದರೆ, ಈ ಪದವು ಬಹುಶಃ 21 ಮತ್ತು 22 ಅಧ್ಯಾಯಗಳಲ್ಲಿ ಬಣ್ಣಿಸಲಾಗಿರುವ “ಪರಿಶುದ್ಧ ಪಟ್ಟಣ”ವಾದ ಯೆರೂಸಲೇಮನ್ನು ಸೂಚಿಸಬಹುದಾಗಿದೆ (ಅದು ಪರಲೋಕಕ್ಕೆ ಒಂದು ಸಾಂಕೇತಿಕ ಸೂಚನೆಯಾಗಿರುತ್ತದೆ). ಪ್ರಕಟನೆ 22:15ನೇ ವಚನವು ದುಷ್ಟರು ಆ ಪರಲೋಕ ನಿವಾಸದ “ಹೊರಗಿನವರು” ಎಂದು ತಿಳಿಸುತ್ತದೆ (ನೋಡಿರಿ 21:27). 14:20ರಲ್ಲಿನ “ಪಟ್ಟಣ”ವು “ಮಹಾ ಬಾಬೆಲ”ನ್ನು ಸೂಚಿಸುತ್ತಿರಬಹುದಾಗಿದೆ, ತಾನು ಮೋಹಕ್ಕೊಳಪಡಿಸಿಕೊಂಡಿದ್ದವರನ್ನು ರಕ್ಷಿಸುವದಕ್ಕೆ ಬಾಬೆಲ್ ಅಸಹಾಯಕವಾಗಿತ್ತದೆಂಬ ಸೂಚ್ಯಾರ್ಥವು ಅಲ್ಲಿರುತ್ತದೆ. 19ನೇ ಅಧ್ಯಾಯದ ಪ್ರಕಾರವಾಗಿ, ಸ್ವತಃ ಯೇಸುವೇ “ಆತನು ಸರ್ವಶಕ್ತನಾದ ದೇವರ ಉಗ್ರಕೋಪವೆಂಬ ದ್ರಾಕ್ಷೆಯ ತೊಟ್ಟಿಯಲ್ಲಿರುವದನ್ನು ತುಳಿಯುತ್ತಾನೆ” (19:15). ಆತನು

ಇದನ್ನು ಮಾಡುತ್ತಿರುವ ವೇಳೆ, ಕೆಳಗಿನ ತೊಟ್ಟಿಗೆ ದ್ರಾಕ್ಷಾರಸವು ಹರಿಯುವದಿಲ್ಲ, ಆದರೆ ದುಷ್ಟರ ರಕ್ತವೇ ಹರಿಯುತ್ತದೆ. ಅನೇಕ ದ್ರಾಕ್ಷೆಗಳು ಕೆಂಪು ಅಥವಾ ನೆರಳೆ ಬಣ್ಣದಲ್ಲಿರುತ್ತವಾದ್ದರಿಂದ, ಅವುಗಳ ರಸವು ನಮಗೆ ರಕ್ತವನ್ನು ಜ್ಞಾಪಿಸಬಲ್ಲವು. ಯೇಸುವು ತಾನು ಸುರಿಸಲಿದ್ದ ರಕ್ತಕ್ಕೆ "ದ್ರಾಕ್ಷಾರಸ"ವನ್ನು ಸಂಕೇತವಾಗಿ ಬಳಸಿದನು (ಮತ್ತಾಯ 26:29).

ದರ್ಶನದಲ್ಲಿ, ರಕ್ತವು ಒಂದು ನದಿಯಂತಾಗಿ ತೊಟ್ಟಿಯ ಮೇಲಿಂದ ಹರಿಯಿತು ಮತ್ತು ದೇಶವನ್ನೆಲ್ಲಾ ವ್ಯಾಪಿಸಿಕೊಂಡಿತ್ತು, ಹೆಚ್ಚೆಚ್ಚು ಎತ್ತರಕ್ಕೆ ಏರುತ್ತಲೇ ಇತ್ತು. ಅನೇಕ ಲೇಖಕರು ಇದನ್ನು "ಅರ್ಮೆಗೆದ್ದೋನ್ ಯುದ್ಧ" ಎನ್ನುವಂಥದ್ದು ಸಂಭವಿಸಿದ ನಂತರದಲ್ಲಿ ಆಗುವ ಘಟನೆಯೆಂದು ಭಾವಿಸುತ್ತಾರೆ, ಆದರೆ ಸಾದೃಶ್ಯವು ಸುಗ್ಗೀಕಾಲದಿಂದ ಮಾರ್ಪಟ್ಟು ಒಂದು ಯುದ್ಧಕ್ಕೆ ಬದಲಾಗುತ್ತದೆಂಬ ಯಾವ ಸೂಚನೆಯೂ ಇರುವದಿಲ್ಲ. ಕುದುರೆಗಳು ಪ್ರಸ್ತಾಪಿಸಲ್ಪಟ್ಟಿರುವದು ಯಾವದೇ ಯುದ್ಧದ ಸೂಚ್ಯಾರ್ಥವನ್ನು ಹೊಂದಿರುವದಿಲ್ಲ; ಇವುಗಳು ವಾಚಕರಿಗೆ ಪರಿಚಿತವಿದ್ದ ದೃಶ್ಯಗಳಾಗಿದ್ದವು ಮತ್ತು ಹೀಗೆ ಅವುಗಳನ್ನು ರಕ್ತದ ಆಳವನ್ನು ಸೂಚಿಸುವದಕ್ಕಾಗಿ ಬಳಸಲ್ಪಟ್ಟಿರುತ್ತದೆ. **ಆ ತೊಟ್ಟಿಯೊಳಗಿಂದ ರಕ್ತವು ಹೊರಟು ಕುದುರೆಗಳ ಕಡಿವಾಣಗಳನ್ನು ಮುಟ್ಟುವಷ್ಟು ಆಳವಾಗಿ ಇನ್ನೂರು ಮೈಲಿ ದೂರ ಹರಿಯಿತು.** ಕಡಿವಾಣವು ಕುದುರೆಯ ಕುತ್ತಿಯ ಸುತ್ತ ಹಾಕಲ್ಪಡುವ ಸಜ್ಜು ಆಗಿರುತ್ತದೆ; ಬಹುಪಾಲು ಕುದುರೆಗಳ ತಲೆಗಳು ನೆಲದಿಂದ ಹಲವಾರು ಅಡಿಗಳಷ್ಟು ಎತ್ತರದಲ್ಲಿರುತ್ತವೆ. ರಕ್ತವು ನಾಲ್ಕರಿಂದ ಐದು ಅಡಿಗಳಷ್ಟು ಆಳವಾಗಿತ್ತು, ಮತ್ತು ನೂರಾರು ಮೈಲಿಗಳಷ್ಟು ವ್ಯಾಪಿಸಿಕೊಂಡಿತ್ತು.

ಅಕ್ಷರಶಃ ವಾದಿಗಳು (ಸಹಸ್ರವರ್ಷಪೂರ್ವಾಡಳಿತ ವಾದಿಗಳು) ಆ ಗಾತ್ರದ ರಕ್ತದ ಮಡುವಿನ ಭಾವನೆಯನ್ನು ಅರ್ಥಮಾಡಿಕೊಳ್ಳಲು ಹೆಣಗಾಡುತ್ತಾರೆ. ಅವರು **ಇನ್ನೂರ ಮೈಲಿ ದೂರ**ವು ಫಿಲಿಷ್ಟಿಯದ ಉದ್ದವಾಗಿರುತ್ತದೆ ಎಂಬುದನ್ನು ಗಮನಕ್ಕೆ ತರಲು ಇಷ್ಟಪಡುತ್ತಾರೆ, ಆದರೆ ಈ ದರ್ಶನದಲ್ಲಿ ಸಿಕ್ಕುವ ಮಿಕ್ಕ ಅಳತೆಗಳನ್ನು ಸರಿಯಾಗಿ ವಿಶ್ಲೇಷಿಸಲು ಹೆಣಗಾಡುತ್ತಾರೆ. ಸರಾಸರಿ ಮಾನವ ಜೀವಿಯ ದೇಹವು ಸುಮಾರು ಐದು ಕ್ವಾರ್ಟ್ಸ್ ರಕ್ತವನ್ನೊಳಗೊಂಡಿರುತ್ತದೆ, ಅದು ಮನ್ನೂರು ಕ್ಯೂಬಿಕ್ ಇಂಚುಗಳಿಗಿಂತ ಕಡಿಮೆಯಾಗಿರುತ್ತದೆ. (ಅಮೆರಿಕದ ದ್ರವ ಕ್ವಾರ್ಟವು 57.75 ಕ್ಯೂಬಿಕ್ ಇಂಚುಗಳಷ್ಟಿರುತ್ತದೆ.) ದೃಷ್ಟಾಂತವನ್ನು ನೀಡುವ ಉದ್ದೇಶಕ್ಕಾಗಿ, ನಾನ್ನೂರು ಮೈಲಿಗಳಷ್ಟು ಉದ್ದ ಹಾಗೂ ನಾಲ್ಕು ಅಡಿಗಳಷ್ಟು ಆಳವಿರುವ ರಕ್ತದ ನದಿಯನ್ನು ಊಹಿಸಿಕೊಳ್ಳಿರಿ. ನದಿಯು ಒಂದು ಮೈಲಿಯಷ್ಟು ಅಗಲವಿರುವದಾದಲ್ಲಿ ಅದಕ್ಕೆ 120 ಬಿಲಿಯನ್ ಜನರಿಗಿಂತಲೂ ಅಧಿಕ ಜನರ ರಕ್ತವು ಬೇಕಾಗುತ್ತದೆ - ಆದರೆ, ಈಗ ಸದ್ಯಕ್ಕೆ ಇಡೀ ವಿಶ್ವದ ಜನಸಂಖ್ಯೆಯು ಕೇವಲ "ಆರು" ನೂರು ಕೋಟಿ ಮಾತ್ರವೇ ಇರುತ್ತದೆ. ದರ್ಶನದಲ್ಲಿರುವ ರಕ್ತದ ಮಡುವು ಎಲ್ಲಾ ದಿಕ್ಕುಗಳಲ್ಲಿಯೂ ಇನ್ನೂರು ಮೈಲಿಗಳಷ್ಟು ವ್ಯಾಪಿಸಿರುವದಾದರೆ, ಅದಕ್ಕೆ ಇನ್ನೂ ಅತ್ಯಧಿಕವಾದ ರಕ್ತದ ಅಗತ್ಯವು ಬೀಳುವ ಸಂಭಾವ್ಯತೆಯಿರುತ್ತದೆ. ಕೆಲವು ಅಕ್ಷರಶಃವಾದಿಗಳು ರಕ್ತವು ನಾಲ್ಕು ಅಥವಾ ಐದು ಅಡಿಗಳಷ್ಟು ಎತ್ತರಕ್ಕೆ "ಸಿಡಿಯುತ್ತಿತ್ತು" ಎಂದು ಹೇಳುವ ಮೂಲಕ ಸಂದಿಗ್ಧತೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಆದರೆ ವಾಕ್ಯಭಾಗವು ಆ ರೀತಿಯಾಗಿ ಹೇಳುವದಿಲ್ಲ. ಮತ್ತೊಂದಾವರ್ತಿ ಇದು ಸಾಂಕೇತಿಕ ಭಾಷೆಯನ್ನು ಅಕ್ಷರಶಃವೆಂದು ಪರಿಗಣಿಸಿಕೊಳ್ಳುವದರ ನಿರರ್ಥಕತೆಯನ್ನು ತೋರಿಸಿ ಕೊಡುತ್ತದೆ. ಸಂಕೇತವು ರಕ್ತವನ್ನು ಅಳೆಯುವ ಕೃತ್ಯವಾಗಿ ಕೊಡಲ್ಪಟ್ಟಿರುವದಿಲ್ಲ, ಆದರೆ ಬದಲಾಗಿ ದೇವರ ಕರುಣೆಯನ್ನು ಅಸಡ್ಡೆಮಾಡುವದರಿಂದಾಗುವ ದುರಂತದ ಪ್ರಮಾಣವು ಎಷ್ಟೊಂದು

ದೊಡ್ಡದಾಗಿರುತ್ತದೆಂಬುದನ್ನು ಒತ್ತಿ ಹೇಳುವದಕ್ಕಾಗಿ ಕೊಡಲ್ಪಟ್ಟಿದೆ.

"ಇನ್ನೂರು ಮೈಲಿ" ಬದಲಾಗಿ, ಮೂಲವಾಕ್ಯದಲ್ಲಿ "1,600 ಸ್ತಾದ್ಯ" ಎಂದಿರುತ್ತದೆ (NIV). NASBಯಲ್ಲಿ ಕೊಡಲಾಗಿರುವ "ಇನ್ನೂರು ಮೈಲಿ" ಎಂಬುದು ಇಂದಿನ ವಾಚಕರಿಗೆ ಅರ್ಥವಾಗುವ ರೀತಿಯಲ್ಲಿ ಗ್ರೀಕ್ ಪದಗಳನ್ನು ವಿವರಿಸುವ ಪ್ರಯತ್ನವಾಗಿರುತ್ತದೆ. ಈ στάδιον (*stadion*) ಎಂಬುದು 607 ಅಡಿಗಳ ರೋಮನ್ ಅಳತೆಯನ್ನು ಸೂಚಿಸಲು ಬಳಸುವ ಗ್ರೀಕ್ ಪದವಾಗಿರುತ್ತದೆ ಮತ್ತು 1,600 ಸ್ತಾದ್ಯ ಅಂದಾಜಾಗಿ 184 ಮೈಲಿಗಳಷ್ಟಾಗಿರುತ್ತದೆ. "ಇನ್ನೂರ ಮೈಲಿ" ಎಂಬ ಪದಗುಚ್ಛವು ಆಧುನಿಕ ವಾಚಕರಿಗೆ ದೂರವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡಬಹುದು, ಆದರೆ ಅದು ಪವಿತ್ರಾತ್ಮನು ಒದಗಿಸಿರುವ ಸಾಂಕೇತಿಕತೆಯನ್ನು ಹಾಳು ಮಾಡುತ್ತದೆ. "ಒಂದು ಸಾವಿರದ ಆರುನೂರು" ಎಂಬುದು ಮುಖ್ಯವಾದ ಪದವಾಗಿದೆ. ಹದಿನಾರು ನೂರು ಮಾನವರ ಸಂಖ್ಯೆಯನ್ನು ಸಂಪೂರ್ಣತೆಯ ಸಂಖ್ಯೆಯೊಂದಿಗೆ ("ಹತ್ತು") ಅಷ್ಟೇ ಸಾರಿ ಗುಣಕಾರ ಮಾಡುವಾಗ ಆ ಸಂಖ್ಯೆಗೆ ("ನಾಲ್ಕು") ಸಮಾನವಾಗಿದೆ. ಈ ಮುಂಚೆ "1,600" ಸಂಖ್ಯೆಯು ಮಾನವ ಮಟ್ಟದಲ್ಲಿ ಸಂಪೂರ್ಣತೆಯನ್ನು ಸೂಚಿಸುತ್ತದೆ ಎಂದು ಲೆಕ್ಕಿಸಲಾಗಿತ್ತು.

ಸರಳವಾಗಿ ಆದರೆ ದುಃಖದಿಂದ ಹೇಳುವದಾದರೆ, ದಂಡನೆ ನೀಡಲ್ಪಡುವವರೊಳಗೆ ಒಬ್ಬನೂ ದಂಡನೆಯಿಂದ ತಪ್ಪಿಸಿಕೊಳ್ಳಲಾರನೆಂಬುದನ್ನು ಒತ್ತಿ ಹೇಳುವದಕ್ಕಾಗಿ "1,600" ಸಂಖ್ಯೆಯು ಬಳಸಲ್ಪಟ್ಟಿದೆ. Robert Mounceನು ಹೀಗೆ ಬರೆದನು, "ದೇವರ ನ್ಯಾಯತೀರ್ಪು ... ದೈವಿಕ ಸುರಕ್ಷತೆಯ ಗಡಿಯ ಆಚೆಯಲ್ಲಿನ *ಎಲ್ಲಾ ಸ್ಥಳಗಳಲ್ಲಿರುವ ಎಲ್ಲಾ ಮಾನವರಿಗೆ* ಸಂಭವಿಸುವದು."[27] Martin Franzmannನು ರಕ್ತದ ನದಿಯ ಕುರಿತು ಈ ಹೇಳಿಕೆಯನ್ನು ನೀಡಿದನು:

> ... ನದಿಯ ಅಳತೆಯು ಕಠಿಣ ಹೃದಯದ ಹಾಗೂ ಪಶ್ಚಾತ್ತಾಪವಿಲ್ಲದವರು ತಮ್ಮ ಮೇಲೆ ಕೂಡಿಸಿಟ್ಟಿರುವ ದೇವರ ರೌದ್ರದ ಅಳತೆಯಾಗಿರುತ್ತದೆ (ರೋಮಾ 2:5) ಮತ್ತು ಮೃಗದ ನಾಯಕತ್ವದಲ್ಲಿ ಸಂಭವಿಸುವ ವಿಶ್ವವ್ಯಾಪಿ ಬಂಡಾಯದಲ್ಲಿ ಸೇರಿಕೊಂಡಿರುವವರ ಅಪರಾಧದ ಅತಿಘೋರತೆಯ ಅಳತೆ ಸಹ ಆಗಿರುತ್ತದೆ.[28]

ಆ ಭೀಕರ ದೃಶ್ಯವನ್ನು ವಿವರವಾಗಿ ಬಣ್ಣಿಸಬಹುದಾಗಿದೆ: ನೂರಾರು ಮೈಲಿಗಳಷ್ಟು ರಕ್ತವು ಹೆಪ್ಪುಗಟ್ಟುತ್ತಿರುವದು, ವಾಸನೆ, ಭಯಾನಕತೆ. ಹೇಗೂ, ನೂರು ಮೈಲಿ ಉದ್ದ ಹಾಗೂ ನಾಲ್ಕು ಅಡಿಗಳಷ್ಟು ಆಳವಾದ ರಕ್ತದ ನದಿಯ ಎಂದು ಹೇಳುತ್ತಿದ್ದಂತೆಯೇ ಬಹುಪಾಲು ಶ್ರೋತೃಗಳ ಮುಖದಲ್ಲಿ ಒಂದು ಕರಾಳವಾದ ನೋಟವು ಕಾಣಿಸಿಕೊಳ್ಳುವಂತೆ ಮಾಡುವದಕ್ಕೆ ಸಾಕಾಗುತ್ತದೆ. ವಾಚಕರ ಮನಸ್ಸುಗಳಲ್ಲಿ ಈ ಭಯಾನಕವಾದ ದೃಶ್ಯವು ದೇವರು ಪಾಪದ ಬಗ್ಗೆ ಗಂಭೀರವಾಗಿದ್ದಾನೆಂಬ ಭಾವನೆಯನ್ನು ಮೂಡಿಸುತ್ತದೆ.

14ನೇ ಅಧ್ಯಾಯದಲ್ಲಿನ ಇನ್ನೊಂದು ದರ್ಶನದ ರೀತಿಯಲ್ಲಿಯೇ, ಸುಗ್ಗೀಕಾಲದ ದೃಶ್ಯವು ಎರಡು ಪ್ರಾಥಮಿಕ ಉದ್ದೇಶಗಳನ್ನು ಹೊಂದಿತ್ತು. ಮೊದಲನೆಯದಾಗಿ, ಅದು ಹಿಂಸೆಗೊಳಪಡುತ್ತಿರುವ ಕ್ರೈಸ್ತರಿಗೆ ಆದರಣೆಯನ್ನುಂಟು ಮಾಡುವದಕ್ಕೋಸ್ಕರವಾಗಿತ್ತು. "ದೃಶ್ಯಕ್ಕೆ ತೆರೆಗಳು ಎಳೆಯಲ್ಪಡುತ್ತಿರುವ ವೇಳೆ, ಈ ದೃಶ್ಯಾವಳಿಯನ್ನು ನೋಡಿದವರ ಹೃದಯಗಳಲ್ಲಿ ಸಂಭ್ರಮವು ಉಂಟಾಗಿರಬಹುದಾಗಿದೆ."[29] ಎರಡನೆಯದಾಗಿ, ತಮ್ಮ ನಂಬಿಕೆಯನ್ನು ತೊರೆದು ಬಿಡಬೇಕೆಂದು ಶೋಧಿಸಲ್ಪಟ್ಟ ಕ್ರೈಸ್ತರಿಗೆ ಧೈರ್ಯವನ್ನು

ತುಂಬುದಕ್ಕಾಗಿ ಸುಗ್ಗೀಕಾಲದ ದರ್ಶನವು ಕೊಡಲ್ಪಟ್ಟಿತ್ತು. James Moffattನು ಹೀಗೆ ಬರೆಯುತ್ತಾನೆ,

> ... ಬಹಳ ಮಟ್ಟಿಗೆ ಅಂತ್ಯಕಾಲಿಕ ಪುಸ್ತಕದಲ್ಲಿ ವಿವರಿಸಲ್ಪಟ್ಟಿರುವ ಆ ದೃಢನಿಶ್ಚಯದ ವಿಚಾರಗಳ ಪ್ರತಿಪಾದನೆಯ ಕಾರಣದಿಂದಲೇ ಕ್ರೈಸ್ತರು ತಮ್ಮ ನಂಬಿಕೆಯಲ್ಲಿ ನಿಷ್ಠೆಯಿಂದ ಉಳಿದರು, ಮತ್ತು ಏನೆಂದರೆ, ಅವರ ಕಣ್ಣುಗಳಲ್ಲಿ ಭಯವಾಗಲಿ ಅಥವಾ ಕೈಯಲ್ಲಿ ಕತ್ತಿಯಾಗಲಿ ಇಲ್ಲದೆಯೇ, ಅವರು ಸಾಮ್ರಾಜ್ಯದ ಕೈಗಳಲ್ಲಿ ತಮ್ಮ ಹಕ್ಕುಗಳಿಗೆ ಮನ್ನಣೆ ಸಿಕ್ಕುವಂತೆ ಜಾರಿಗೆ ತರುವ ಮೂಲಕ ಕ್ರಮೇಣದಲ್ಲಿ ಜಗತ್ತಿನ ಚಹರೆಯನ್ನೇ ಬದಲಾಯಿಸುವದಕ್ಕೆ ಶಕ್ತರಾಗಿದ್ದರು.[30]

## ಅನ್ವಯಿಸುವಿಕೆ

### ಶಬ್ದಗಳು ಮತ್ತು ದರ್ಶನಗಳು (ಅಧ್ಯಾಯ 14)

14ನೇ ಅಧ್ಯಾಯದಲ್ಲಿರುವದನ್ನೆಲ್ಲಾ ಒಟ್ಟಾಗಿ ಅಧ್ಯಯನ ಮಾಡಬಹುದು, ಎಲ್ಲಾ ವಿಭಾಗಗಳನ್ನು ಮೂರು ಅಂಶಗಳನ್ನಾಗಿ ರೂಪಿಸಬಹುದು. Warren Wiersbeನು "ಜಯದ ಶಬ್ದಗಳು"[31] ಎಂಬ ಪದಗುಚ್ಛವನ್ನು ಬಳಸಿದನು. "ಶಬ್ದಗಳು" ಎಂಬ ಯೋಚನೆಯನ್ನು ಬಳಸಿಕೊಂಡು, ನೀವು "ಸ್ತುತಿಯ ಶಬ್ದಗಳು" (ವಚನಗಳು 1-5), "ಎಚ್ಚರಿಕೆಯ ಶಬ್ದಗಳು" (ವಚನಗಳು 6-13), ಮತ್ತು "ನ್ಯಾಯತೀರ್ಪಿನ ಶಬ್ದಗಳು" (ವಚನಗಳು 14-20) ಎಂದು ಮಾತಾಡಬಹುದು.

ಅಧ್ಯಾಯವನ್ನು ಏಳು ವಿಭಾಗಗಳನ್ನಾಗಿ ಸಹ ವಿಂಗಡಿಸಬಹುದಾಗಿದೆ: (1) ವಚನಗಳು 1-5; (2) ವಚನಗಳು 6, 7; (3) ವ. 8; (4) ವಚನಗಳು 9-11; (5) ವಚನಗಳು 12, 13; (6) ವಚನಗಳು 14-16; (7) ವಚನಗಳು 17-20. Frank Packನು ಈ ವಿಭಾಗಗಳನ್ನು "ಮನುಷ್ಯಕುಮಾರನ ಏಳು ದರ್ಶನಗಳು"[32] ಎಂದು ಕರೆದನು.

### ಮೇಲಕ್ಕೆ ನೋಡು (ಅಧ್ಯಾಯ 14)

ಈ ಮೂರರಲ್ಲಿ ಪ್ರತಿಯೊಂದು ವಿಭಾಗವು "ಕಂಡೆನು" ಅಥವಾ "ನಾನು ನೋಡಲಾಗಿ" ಎಂಬ ಮಾತುಗಳಿಂದ ಆರಂಭಗೊಳ್ಳುತ್ತವೆ. ಯೋಹಾನನು ಪ್ರತಿಯೊಂದು ದರ್ಶನವನ್ನು *ನೋಡುವದು* ಮಾತ್ರವೇ ಆಗಿರಲಿಲ್ಲ, ಆದರೆ *ಮೇಲಕ್ಕೆ* ಸಹ ನೋಡಬೇಕಾಗಿತ್ತು. ಮೊದಲನೆಯ ವಿಭಾಗದಲ್ಲಿ, ಆತನು ಮೇಲಕ್ಕೆ ಚೀಯೋನ್ ಪರ್ವತದ ತುದಿಯನ್ನು ನೋಡಬೇಕಾಗಿತ್ತು (ವ. 1). ಎರಡನೆಯ ದರ್ಶನದಲ್ಲಿ, ಆತನು ಪ್ರಕಟನೆಗಳನ್ನು ತಿಳಿಸುತ್ತಿರುವ ಮೂವರು ದೇವದೂತರನ್ನು ನೋಡುವದಕ್ಕೆ ಮೇಲೆ ಆಕಾಶದ ಕಡೆಗೆ ನೋಡಬೇಕಾಗಿತ್ತು (ವ. 6). ಮೂರನೆಯ ವಿಭಾಗದಲ್ಲಿ, ಆತನು ಮೇಲಕ್ಕೆ ಮೇಘದ ಮೇಲೆ ಕೂತಿದ್ದ ಮನುಷ್ಯಕುಮಾರನನ್ನು ನೋಡಬೇಕಾಗಿತ್ತು (ವ. 14). ಇಲ್ಲಿ ನಮಗೊಂದು ಪಾಠವು ಇರಬಹುದಾಗಿದೆ: ನಮ್ಮ ಸುತ್ತಲು ನಡೆಯುತ್ತಿರುವ ಘಟನೆಗಳಿಂದ ಕಳವಳಕ್ಕೀಡಾಗಿ ಹೋಗುವಾಗ, ನಾವು ನಮ್ಮ ಮೇಲ್ಗಡೆಯಲ್ಲಿ ಏನು ನಡೆಯುತ್ತದೆ ಎಂಬುದನ್ನು ಕಾಣುವದಕ್ಕೆ ನಮ್ಮ ಕಣ್ಣುಗಳನ್ನು ಮೇಲಕ್ಕೆ ಎತ್ತಬೇಕಾದ ಅಗತ್ಯವಿರುತ್ತದೆ. ಕೀರ್ತನೆಗಾರನು ಹೀಗೆ ಬರೆದನು:

> ನಾನು ಕಣ್ಣೆತ್ತಿ ಪರ್ವತಗಳ ಕಡೆಗೆ ನೋಡುತ್ತೇನೆ; ನನ್ನ ಸಹಾಯವು ಎಲ್ಲಿಂದ ಬರುವದು? ಭೂಮ್ಯಾಕಾಶಗಳನ್ನು ನಿರ್ಮಿಸಿದ ಯೆಹೋವನಿಂದಲೇ ನನ್ನ ಸಹಾಯವು ಬರುತ್ತದೆ. ಆತನು ನಿನ್ನ ಪಾದಗಳನ್ನು ಕದಲಗೊಡಿಸದಿರಲಿ; ನಿನ್ನನ್ನು ಕಾಯುವವನು ತೂಕಡಿಸದಿರಲಿ ... ನಿನ್ನನ್ನು ಕಾಯುವವನು ಯೆಹೋವನೇ; ನಿನ್ನ ಬಲಗಡೆಯಲ್ಲಿ ನೆರಳಿನಂತೆ ನಿಂತಿರುವಾತನು ಯೆಹೋವನೇ. ಹಗಲಲ್ಲಿ ಸೂರ್ಯನೂ ಇರುಳಲ್ಲಿ ಚಂದ್ರನೂ ನಿನ್ನನ್ನು ಬಾಧಿಸುವದಿಲ್ಲ. ಯೆಹೋವನು ನಿನ್ನನ್ನು ಎಲ್ಲಾ ಕೇಡಿನಿಂದ ತಪ್ಪಿಸುವನು; ನಿನ್ನ ಪ್ರಾಣವನ್ನು ಕಾಯುವನು. ನೀನು ಹೋಗುವಾಗಲೂ ಬರುವಾಗಲೂ ಇಂದಿನಿಂದ ಸದಾಕಾಲವೂ ಯೆಹೋವನು ನಿನ್ನನ್ನು ಕಾಪಾಡುವನು (ಕೀರ್ತನೆ 121:1-8).

ಒಬ್ಬರು ಹೀಗೆ ಹೇಳಿದ್ದಾರೆ, "ಹೊರ ನೋಟವು ಕೆಟ್ಟದಾಗಿ ಕಾಣಿಸುತ್ತಿರುವದಾದರೆ, ಮೇಲಿನ ನೋಟವನ್ನು ಪ್ರಯತ್ನಿಸಿ ನೋಡಿರಿ." "ಕರ್ತನೇ, ಆ ವಿಧವಾದ ಸಕಾರಾತ್ಮಕ ಮನೋಭಾವದ ಕಡೆಗೆ ನಮ್ಮ ಕಣ್ಣುಗಳನ್ನು ತೆರೆಯ ಮಾಡು!"

## ವಿರುದ್ಧ ಹೋಲಿಕೆಗಳು (14:1-5)

ನೀವು 13 ಮತ್ತು 14 ಅಧ್ಯಾಯಗಳಲ್ಲಿರುವ ವಿರುದ್ಧ ಹೋಲಿಕೆಗಳನ್ನು ತೋರಿಸುವಂಥ ಒಂದು ನಕ್ಷೆಯನ್ನು ತಯಾರಿಲಿಟ್ಟಿಸಬಹುದು. ಎರಡು ಮೃಗಗಳು ಸಮುದ್ರ ಹಾಗೂ ಭೂಮಿಯಿಂದ ಬಂದವು, ಆದರೆ ಕುರಿಯಾದಾತನು ಪರ್ವತದ ಮೇಲಿದ್ದನು. ನಕಲಿ ಕುರಿಯಾದಾತನಿಂದ ಜನಸಮೂಹಗಳು ವಂಚನೆಗೊಳಗಾದರು, ಆದರೆ 144,000 ಮಂದಿ ನಿಜವಾದ ಕುರಿಯಾದಾತನನ್ನು ಹಿಂಬಾಲಿಸಿದ್ದರು. ಜನಸಮೂಹಗಳು ತಮ್ಮ ಹಣೆಗಳ ಮೇಲೆ ಒಂದು ಗುರುತು ಹಾಕಿಸಿಕೊಂಡಿದ್ದರು, ಆದರೆ ರಕ್ಷಣೆ ಹೊಂದಿದವರು ತಮ್ಮ ಹಣೆಗಳ ಮೇಲೆ ಒಂದು ಹೆಸರನ್ನು ಬರೆಸಿಕೊಂಡಿದ್ದರು. ಜನರ ಗುಂಪು "ಮೃಗಕ್ಕೆ ಸಮಾನರು ಯಾರು?" ಎಂದು ಘೋಷಗಳನ್ನು ಕೂಗುತ್ತಿದ್ದರು ಆದರೆ ವಿಮೋಚಿಸಲ್ಪಟ್ಟವರು ಒಂದು ನೂತನ ಹಾಡನ್ನು ಹಾಡಿದರು. ಮೃಗವನ್ನು ಹಿಂಬಾಲಿಸಿದವರು ಸುರಕ್ಷಿತರಾಗಿದ್ದಾರೆಂಬಂತೆ ಕಂಡರು, ಆದರೆ ನಿಜವಾಗಿಯೂ ಸುರಕ್ಷಿತವಾಗಿದ್ದವರೆಂದರೆ ಕುರಿಯಾದಾತನನ್ನು ಹಿಂಬಾಲಿಸಿದವರೇ.

## "ಕರ್ತನೇ, ನಮ್ಮ ಕಣ್ಣುಗಳನ್ನು ತೆರೆ" (14:1-5)

14:1-5ರ ಮೇಲೆ "ಕರ್ತನೇ, ನಮ್ಮ ಕಣ್ಣುಗಳನ್ನು ತೆರೆ" ಎಂಬ ಶಿರ್ಷಿಕೆಯೊಂದಿಗೆ ಒಂದು ಸಂದೇಶವನ್ನು ಅಭಿವೃದ್ಧಿಗೊಳಿಸಬಹುದಾಗಿದೆ. ಈ ವಾಕ್ಯಬಾಗದಲ್ಲಿ ಮೂರು ಮನವಿಗಳನ್ನು ಮಾಡಲಾಗಿರುತ್ತದೆ: ಕರ್ತನೇ, ನಮ್ಮ ಕಣ್ಣುಗಳನ್ನು ಇವುಗಳಿಗಾಗಿ ತೆರೆಯ ಮಾಡು: (1) ಜಯದ ಖಚಿತತೆಯನ್ನು ಕಾಣುವಂತೆ (ವ. 1); (2) ಸ್ತುತಿಯ ಬೆಲೆಯನ್ನು ಅರಿತುಕೊಳ್ಳುವಂತೆ (ವಚನಗಳು 2, 3); (3) ಗುಣಸ್ವಭಾವದ ಪ್ರಾಮುಖ್ಯತೆ (ವಚನಗಳು 4, 5).

## ಸ್ತುತಿಗಳನ್ನು ಹಾಡುವದು (14:2, 3)

144,000 ಮಂದಿ ದೇವರಿಗೆ ಸ್ತುತಿಗಳನ್ನು ಹಾಡುವ ಮೂಲಕ ತಮ್ಮ ಜಯವನ್ನು ಕೊಂಡಾಡುತ್ತಿದ್ದರು ಎಂಬುದನ್ನು ಅರ್ಥಮಾಡಿಕೊಳ್ಳುವದು ಪ್ರಾಮುಖ್ಯವಾಗಿರುತ್ತದೆ. ಕೆಲವರು ಆರಾಧನೆಯನ್ನು ಮಾಡುವದು ಸಮಯದ ವ್ಯರ್ಥ ಮಾಡಿದಂತೆ ಎಂದು ಯೋಚಿಸುತ್ತಾರೆ, ಆದರೆ 144,000 ಮಂದಿ ಹಾಗೆ ಯೋಚಿಸಲಿಲ್ಲ. ಅವರ ಸ್ತೋತ್ರ ಸಲ್ಲಿಸುವಿಕೆಯು ಹಾಡಿನ

ರೆಕ್ಕೆಗಳ ಮೇಲೆ ಸಾಗಿ ದೇವರ ಸನ್ನಿಧಿಯೊಳಗೆ ಹಾರಾಡುತ್ತಿತ್ತು. "ನಮಗೆ ಒಬ್ಬ ಗ್ರೀಕ್ ತಾಯಿಯೊಬ್ಬಳ ಕಥೆಯು ಹೇಳಲ್ಪಟ್ಟಿರುತ್ತದೆ, ಆಕೆಯ ಮಗುವು ಒಂದು ಕಡಿದಾದ ಬೆಟ್ಟದ ತುದಿಯಲ್ಲಿರುವದನ್ನು ಕಂಡಳು. ಆಕೆಯು ಕೂಗುವದಾದರೆ [ಮಗುವಿನಲ್ಲಿ] ಗಾಬರಿಯನ್ನುಂಟು ಮಾಡಿ [ಆತನು] ಕೆಳಕ್ಕೆ ಉರುಳಿ ಬೀಳುವಂತೆ ಮಾಡಬಹುದಾಗಿತ್ತು. ಆಕೆಯು ಮಗುವಿಗೆ ಪರಿಚಿತವಿದ್ದ ಒಂದು ಸಂಕೀರ್ತನೆಯನ್ನು ಹಾಡಿ ಚಿಕ್ಕ ಮಗುವನ್ನು ತನ್ನ ಕಡೆಗೆ ಬರುವಂತೆ ಆಕರ್ಷಿಸಿದಳು."[33] ಸ್ತುತಿಯ ಹಾಡುಗಳು ಸ್ವಾಭಾವಿಕವಾಗಿಯೇ ನಮ್ಮನ್ನು ನಮ್ಮ ಸೃಷ್ಟಿಕರ್ತನ ಕಡೆಗೆ ಸಮೀಪವಾಗಿ ಸೆಳೆಯುವವು. ಸ್ತುತಿಯು ನಮ್ಮ ಹೃದಯಗಳಿಗೆ ಉಲ್ಲಾಸವನ್ನು ನೀಡುವದು ಮತ್ತು ನಮಗೆ ಬಲವನ್ನು ಒದಗಿಸುವದು.

## ಹಾಡುಗಳನ್ನು ಕಲಿತುಕೊಳ್ಳುವದು (14:3)

ಕೆಲವು ಸಂಗೀತ ಕಾರ್ಯಕ್ರಮಗಳು, ಪ್ರತಿಭೆಯುಳ್ಳ ಮಕ್ಕಳ ಗಿಣಿ ಹಾಡುಗಳು ಕೆಲವು ಮಹಾನ್ ಕಲಾವಿದರ ಮೂಲಕವಾಗಿ ಪ್ರಸಿದ್ಧಗೊಳಿಸಲ್ಪಟ್ಟಿರುತ್ತವೆ. ಅವರು ಮೂಲ ಗಾಯಕರ ಧ್ವನಿಯ ಏರಿಳಿತವನ್ನು ಅನುಕರಣೆ ಮಾಡುತ್ತಾರೆ ಮತ್ತು ಕೆಲವು ಸಾರಿ ಅವರ ಚಲನಗಳನ್ನು ಸಹ ನಕಲು ಮಾಡುತ್ತಾರೆ. ಕೇಳುಗನಿಗೆ ವಿಚಿತ್ರವೆಂಬಂತೆ ತೋರುವ ಸಂಗತಿಯು ಏನೆಂದರೆ ಹಾಡುಗಳು ಅನೇಕ ಸಾರಿ ಪ್ರೀತಿ, ಹೃದಯವೇದನೆ, ಹಾಗೂ ಕಳವಳದಿಂದ ತುಳಬಿಸುವ ನಿರಾಶೆಗಳ ಕುರಿತಾಗಿ ಇರುತ್ತವೆ ಎಂಬದೆ. ಪ್ರದರ್ಶನಗಳು ಆನಂದವನ್ನುಂಟು ಮಾಡುವ ರೀತಿಯಲ್ಲಿರುತ್ತವೆ, ಆದರೆ ಯುವ ಕಲಾವಿದರಿಗೆ ತಾವು ಯಾವುದರ ಕುರಿತು ಹಾಡುತ್ತಿದ್ದಾರೆಂಬುದರ ಯೋಚನೆಯೇ ಇರುವದಿಲ್ಲ ಎಂಬದು ಸ್ಪಷ್ಟವಾಗಿ ಕಾಣಿಸುತ್ತದೆ. ಅವರು ಪದಗಳನ್ನು ಹಾಗೂ ರಾಗ ವಿನ್ಯಾಸಗಳನ್ನು ಕಲಿತುಕೊಂಡಿರಬಹುದು, ಆದರೆ ಅವರು *ಹಾಡುಗಳನ್ನು ಕಲಿತುಕೊಂಡವರಾಗಿ* ಇರುವದಿಲ್ಲ. ಅವರು ಹಾಡುಗಳಲ್ಲಿ ವ್ಯಕ್ತಪಡಿಸಲಾಗಿರುವ ಭಾವಗಳನ್ನು ಅನುಭವ ಮಾಡುವ ಹೊರತು ಎಂದಿಗೂ ಹಾಡುಗಳನ್ನು ಕಲಿಯಲು ಸಾಧ್ಯವಿಲ್ಲ.

## ನಡತೆಯು ನಿಜಕ್ಕೂ ಮುಖ್ಯವಾದದ್ದು (14:4, 5)

4 ಮತ್ತು 5 ವಚನಗಳು ರಕ್ಷಣೆ ಹೊಂದಿದವರ ನಡತೆಯು ಎಂಥದ್ದೆಂಬುದನ್ನು ಬಯಲುಗೊಳಿಸುತ್ತವೆ; ನಾವು ಯಾವ ವಿಧವಾದ ಕ್ರೈಸ್ತರಾಗಿರತಕ್ಕದ್ದೆಂಬ ಕುರಿತು ನಮಗೆ ತಿಳಿಸುತ್ತವೆ. ಈ ವಚನಗಳು ನಮಗೆ ನಿರಾಶೆಯುಂಟು ಮಾಡಬಾರದು ಆದರೆ ಬದಲಾಗಿ ಇನ್ನಷ್ಟು ಉತ್ತಮ ಜನರಾಗುವಂತೆ ಕರೆ ಕೊಡತಕ್ಕದ್ದು.

> Londonನಲ್ಲಿರುವ ಬ್ರಿಟಿಷ್ ವಸ್ತು ಸಂಗ್ರಹಾಲಯದಲ್ಲಿ ಅಪೊಲ್ಲೊನ ಪ್ರತಿಮೆಯೊಂದನ್ನು ಇಟ್ಟಿದ್ದಾರೆ. ಅಪೊಲ್ಲನು ಪೌರಸುತ್ವದ ಒಂದು ಅತ್ಯಮೋಘವಾದ ಮಾದರಿಯಾಗಿರುತ್ತದೆ. ಅಲ್ಲಿ ಹೋಗುವ ಜನರು ಆ ಪ್ರತಿಮೆಯನ್ನು ನೋಡುವದನ್ನು ಅವರು ಕಂಡಿದ್ದಾರೆ ... ಪುರುಷರು ಅಲ್ಲಿ ಒಳಗೆ ನಿರಾಸಕ್ತರಾಗಿಯೂ ಜೋಲುಬಿದ್ದವರಾಗಿಯೂ ಹೋಗುತ್ತಾರೆ ಮತ್ತು ಹೊರಗೆ ಬರುವಾಗ ನೆಟ್ಟಗೆ ಉತ್ಸಾಹದಿಂದ ನಡೆದು ಬರುತ್ತಾರೆ. ಬಹುಶಃ ನಾವು ಹೇಗಿರತಕ್ಕದ್ದೆಂಬ ಎಂಬುದರೊಂದಿಗೆ ನಿರಂತರವಾಗಿ ಮುಖಾ-ಮುಖಿಯಾಗುವದಾದಲ್ಲಿ, ನಾವು ಮೊದಲಿಗಿಂತಲೂ ಹೆಚ್ಚು ನೆಟ್ಟಗೆ ನಡೆದು ಹೋಗುವೆವು.[34]

## ಯೇಸುವನ್ನು ಹಿಂಬಾಲಿಸುವದು (14:4)

> ಒಂದು ಸಾಯಂಕಾಲದಂದು Belgian Congoದಲ್ಲಿನ ಒಂದು ಮಿಶನ್ ಕ್ಷೇತ್ರದಲ್ಲಿ ಪರಿವರ್ತನೆಗೊಂಡಿದ್ದ ಸ್ಥಳೀಯನೊಬ್ಬನು ಹೀಗೆ ಪ್ರಾರ್ಥಿಸಿದನು, "ಕರ್ತನಾದ ಯೇಸುವೇ, ನೀನೇ ಸೂಜಿಯಾಗಿರುವಿ ಮತ್ತು ನಾನು [ದಾರ] ಆಗಿದ್ದೇನೆ." ಮಿಶನರಿಗೆ ಇದೊಂದು ವಿಚಿತ್ರ ಭಾಷೆಯಂತೆ ಕಂಡಿತ್ತು, ಆದ್ದರಿಂದ ಅವನು ಆ ವ್ಯಕ್ತಿಯನ್ನು ಆತನ ಆ ಅಸಹಜ ಮಾತುಗಳ ಅರ್ಥವೇನಾಗಿತ್ತೆಂದು ಕೇಳಿದನು. ಆ ಸ್ಥಳೀಯ ಮನುಷ್ಯನು ಆ ದಿನ ಒಂದು ಮಿಶನ್ ಶಾಲೆಗೆ ಭೇಟಿ ಕೊಟ್ಟ ವೇಳೆ ಅಲ್ಲಿ ಹುಡುಗಿಯರು ಹೊಲಿಗೆ ಮಾಡುವದನ್ನು ನೋಡಿದ್ದನೆಂದು ತಿಳಿದು ಬಂದಿತು. ಆತನಿಗೆ ಬಹಳ ಆಸಕ್ತಿಯುಂಟು ಮಾಡಿದ್ದೆಂದರೆ ಸೂಜಿಯು ಸದಾ ದಾರವನ್ನೇ ಹಿಂಬಾಲಿಸುತ್ತಿತ್ತು ಎಂಬುದೆ. ಅದೇ ರೀತಿಯಲ್ಲಿ, ಯೇಸುವು ಹೋದಲೆಲ್ಲಾ ಆತನನ್ನು ತಾನು ಹಿಂಬಾಲಿಸುವೆನೆಂದು ಈ ವ್ಯಕ್ತಿಯು ಬಯಸಿದ್ದನು.[35]

ಯೇಸುವು ನಡಿಸಿಕೊಂಡು ಹೋದಲೆಲ್ಲಾ ಆತನನ್ನು ನಾವು ಹಿಂಬಾಲಿಸುವ ಅಗತ್ಯವಿರುತ್ತದೆ (ವ. 4). 144,000 ಮಂದಿಯು ಸಾಯಬೇಕಾದರೂ ಕುರಿಯಾದಾತನನ್ನು ಹಿಂಬಾಲಿಸುವದಕ್ಕೆ ಸಿದ್ಧರಾಗಿದ್ದರಾದ್ದರಿಂದ, ಅವರು ಚೀಯೋನ್ ಪರ್ವತದ ತುದಿಯಲ್ಲಿ ಜಯದ ವೇದಿಕೆಯ ವರೆಗೆ ಆತನನ್ನು ಹಿಂಬಾಲಿಸುವದಕ್ಕೆ ಅನುಮತಿಸಲ್ಪಟ್ಟಿದ್ದರು! ನಾವು 14:1-5ರಲ್ಲಿನ ದೃಶ್ಯವನ್ನು ಆತನ ದೇಶದ ರಾಷ್ಟ್ರಗೀತೆಯು ನುಡಿಸಲ್ಪಡುವತ್ತಿರುವ ವೇಳೇ ಓಲಂಪಿಕ್ ಚಿನ್ನದ ಪದಕವನ್ನು ತನ್ನ ಕೊರಳಿನ ಸುತ್ತ ಹಾಕಿಕೊಂಡು ಜಯದ ವೇದಿಯ ಮೇಲೆ ನಿಂತಿರುವ ಜಯಶಾಲಿ ಕ್ರೀಡಾಪಟುವಿಗೆ ಹೋಲಿಸಬಹುದಾಗಿದೆ.

## ತೀರ್ಮಾನ ಮಾಡಬೇಕಾದ ಸಮಯ (14:6-13)

ನೀವು 14:6-13 ರೊಂದಿಗೆ ಬಳಸುವದಕ್ಕಾಗಿ "ತೀರ್ಮಾನ ಮಾಡುವ ಸಮಯ" ಎಂಬ ಶಿರ್ಷೀಕೆಯ ನಕ್ಷೆಯೊಂದನ್ನು ಅಭಿವೃದ್ಧಿಪಡಿಸಿಕೊಳ್ಳಲು ಬಯಸಬಹುದು, ಎರಡು ಆಯ್ಕೆಗಳ ನಡುವೆ ವಿರುದ್ಧ ಹೋಲಿಕೆಗಳನ್ನು ಸೇರಿಸಬಹುದು. "ಈ ಜೀವನದಲ್ಲಿ" ಎಂಬ ಶಿರೋನಾಮೆಯಡಿಯಲ್ಲಿ, ಮೃಗಕ್ಕೆ ನಮಸ್ಕರಿಸಿದವರಿಗೆ ಆದ್ಯತೆಯ ಆತಿಥ್ಯವು ಕೊಡಲ್ಪಟ್ಟರೆ ದೇವರ-ಆರಾಧಕರು ಹಿಂಸಿಸಲ್ಪಡುತ್ತಿದ್ದಾರೆ ಎಂಬುದನ್ನು ನಕ್ಷೆಯು ದೃಷ್ಟಾಂತಪಡಿಸುವದು. ಬಳಿಕ ನಕ್ಷೆಯಲ್ಲಿ "ಬರಲಿರುವ ಜೀವನ" ಎಂಬ ಶಿರೋನಾಮೆಯನ್ನು ಹೊಂದಿರಬಹುದು ಮತ್ತು ಬರಲಿರುವ ಜೀವಿತದಲ್ಲಿ, ಮೃಗದ-ಆರಾಧಕರಿಗೆ ಯಾವ ವಿಶ್ರಾಂತಿಯೂ ಇರುವದಿಲ್ಲ, ಅದೇ ವೇಳೆಯಲ್ಲಿ ದೇವರ-ಆರಾಧಕರಿಗೆ ಅವರ ಕಷ್ಟವೆಲ್ಲಾ ತೀರಿ ಹೋಗಿ ವಿಶ್ರಾಂತಿ ಸಿಕ್ಕುವದು.

ನಿಮಗೆ ಚಿತ್ರಕಲೆಯ ಸಾಮರ್ಥ್ಯವಿದ್ದಲ್ಲಿ, ಅದೇ ವಿರುದ್ಧ ಹೋಲಿಕೆಯನ್ನು ಒತ್ತಿ ಹೇಳುವದಕ್ಕೆ ಚಿತ್ರವೊಂದನ್ನು ಬಿಡಿಸಬಹುದು. ಆರಂಭದಲ್ಲಿ, ಈ ಜೀವನವನ್ನು ಮಾತ್ರವೇ ತೋರಿಸುವಂತೆ ಚಿತ್ರದ ಒಂದು ಭಾಗವನ್ನು ಮರೆ ಮಾಡಬಹುದು. ಬಳಿಕ, ಚಿತ್ರದ ಉಳಿದ ಭಾಗದ ಮೇಲಿನ ಮುಸುಕನ್ನು ತೆಗೆಯುವ ಮೂಲಕ, ನೀವು ಮಾಡಲ್ಪಟ್ಟ ತೀರ್ಮಾನಗಳಿಂದಾಗುವ ದೀರ್ಘಕಾಲಿಕ ಫಲಿತಗಳನ್ನು ಬಯಲುಗೊಳಿಸಬಹುದು.

## ಕರ್ತನ ಭಯವನ್ನು ತಿಳಿದುಕೊಳ್ಳುವದು (14:6-13)

ದೇವದೂತನು ನಾಶನದಲ್ಲಿರುವ ಲೋಕವನ್ನುದ್ದೇಶಿಸಿ ಪ್ರಕಟನೆಗಳನ್ನು ತಿಳಿಸುವದರಿಂದ ಪಾಠವನ್ನು ಕಲಿತುಕೊಳ್ಳುವ ಮೂಲಕ, ಈ ವಾಕ್ಯಭಾಗವನ್ನು ಸುವಾರ್ತಾಸೇವೆ ಕುರಿತು

ಸಂದೇಶವೊಂದನ್ನು ಸಾರುವದರಲ್ಲಿ ಬಳಸಿಕೊಳ್ಳಬಹುದು. ಈ ವಾಕ್ಯಭಾಗವು ಸುವಾರ್ತಾಸೇವೆಯನ್ನು ಮಾಡುವದಕ್ಕಾಗಿ ನಮಗೆ ಮೂರು ಬಲವಾದ ಪ್ರೇರಣೆಗಳನ್ನು ಒದಗಿಸುತ್ತದೆ: (1) ಮೊದಲನೆಯ ದೇವದೂತನು: ದೇವರಿಗೆ ನಾಶನದಲ್ಲಿರುವವರು ಕುರಿತು ಕಳಕಳಿಯಿರುತ್ತದೆ, ಮತ್ತು ನಾವು ಸಹ ಆ ಕಳಕಳಿಯನ್ನು ಹೊಂದಿರಬೇಕು. (2) ಎರಡನೆಯ ದೇವದೂತನು: ಸ್ನೇಹಿತರು ಹಾಗೂ ನೆರೆಯವರು ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ, ಅವರ ಬೀಳುವಿಕೆ ನಿಶ್ಚಯವಾಗಿರುತ್ತದೆ. (3) ಮೂರನೆಯ ದೇವದೂತನು: ನಮ್ಮ ಸ್ನೇಹಿತರು ಮಾಡುವ ಆಯ್ಕೆಗಳು ಅವರ ನಿತ್ಯತ್ವವನ್ನು ನಿರ್ಧರಿಸುವವು; ಸರಿಯಾದ ತೀರ್ಮಾನಗಳನ್ನು ಮಾಡಿಕೊಳ್ಳುವಂತೆ ಅವರನ್ನು ಪ್ರೋತ್ಸಾಹಿಸೋಣ. ಈ ಪ್ರಸಂಗಕ್ಕೆ ಇಡಬಹುದಾದ ಒಂದು ಉತ್ತಮ ಬಿರುದು ಎಂದರೆ "ಕರ್ತನ ಭಯವನ್ನು ತಿಳಿದುಕೊಳ್ಳುವದು."

ಕೆಲವೊಂದು ಪರ್ಯಾಯ ಶಿರ್ಷಿಕೆಗಳು ಹೀಗಿರುತ್ತವೆ: "ಕೊನೆಗೆ ದೇವರು ಹೇಳದ್ದೇ ಆಗುವದು," "ಕೃಪೆಯ, ನಾಶನದ ಮತ್ತು ಎಚ್ಚರಿಕೆ ದೇವದೂತರು," "ದರ್ಶನಗಳು ಹಾಗೂ ನ್ಯಾಯತೀರ್ಪಿನ ಶಬ್ದಗಳು," "ಒಂದು ಪ್ರೋತ್ಸಾಹಕರ ಮಾತು," "ದೇವದೂತರ ಸಾರುವಿಕೆಗಳು," "ಶುಭವರ್ತಮಾನ, ಅಶುಭವರ್ತಮಾನ," ಮತ್ತು "ಕೇಳಿಸಿಕೊಳ್ಳಿರಿ, ಕೇಳಿಕೊಳ್ಳಿರಿ!"

## ತೀರ್ಮಾನ-ದಿನ (14:6-13)

ಎರಡನೆಯ ವಿಶ್ವಯುದ್ಧದ ಅತ್ಯಂತ ಸ್ಮರಣೀಯ ದಿನವೆಂದರೆ ಅದು ತೀರ್ಮಾನ-ದಿನೇ: ಜೂನ್ 6, 1944, ಮೈತ್ರಿ ಪಡೆಗಳು Normandyಗೆ ಮುತ್ತಿಗೆ ಹಾಕಿದ ದಿನ, ಯುರೋಪನ್ನು ಬಿಡುಗಡೆಗೊಳಿಸುವದಕ್ಕಾಗಿ ಅಂತಿಮ ಚಾಲನೆಯನ್ನು ನೀಡಿದ ದಿನವಾಗಿತ್ತು. ನಮ್ಮ ಜೀವಿತದ ಅತ್ಯಂಥ ಸ್ಮರಣೀಯ ದಿನವೆಂದರೆ ಅದು ತೀರ್ಮಾನ-ದಿನೇ: *ತೀರ್ಮಾನ ಮಾಡಿಕೊಳ್ಳುವ* ದಿನ, ನೀವು ಪಾಪದ ಬಂಧನಗಳಿಂದ ಬಿಡಿಸಲ್ಪಟ್ಟ ದಿನ, ನೀವು ನಿಮ್ಮ ಜೀವಿತವನ್ನು ಕರ್ತನಿಗೆ ಸಮರ್ಪಿಸುವ ದಿನ.

ಪ್ರಕಟನೆ 14:6-13 ವಚನಗಳು ಕೇವಲ ಎರಡೇ ಆಯ್ಕೆಗಳು ಇರುವ ಸಾಧ್ಯತೆಗಳಿವೆ: ನಾವು ಸೈತಾನನಿಗೋಸ್ಕರ ಬದುಕುವದಕ್ಕೆ ತೀರ್ಮಾನ ಮಾಡಿಕೊಂಡು ಆತನು ಕಳೆಯಲಿರುವ ಸ್ಥಳದಲ್ಲಿಯೇ ನೀವೂ ನಿಮ್ಮ ನಿತ್ಯತ್ವವನ್ನು ಕಳೆಯಬಹುದಾಗಿದೆ (20:10), ಅಥವಾ ಕರ್ತನಿಗೋಸ್ಕರ ಜೀವಿಸಿ ನಿತ್ಯತ್ವವನ್ನು ಆತನೊಂದಿಗೆ ಜೀವಿಸಿರಿ (21:3). ದೇವರು ತನ್ನನ್ನೇ ಆಯ್ಕೆ ಮಾಡಿಕೊಳ್ಳುವಂತೆ ನಮ್ಮನ್ನು ಒತ್ತಾಯಿಸುವವನಲ್ಲ. ಆತನು ತನ್ನ ಕರುಣೆಯನ್ನು ತೋರಿಸುವನು, ಆದರೆ ನಾವು ಅದನ್ನು ಅಂಗೀಕರಿಸಿಕೊಳ್ಳಬಹುದು ಅಥವಾ ತಿರಸ್ಕರಿಸಲೂ ಬಹುದು. ನಾವು ಆಯ್ಕೆಯನ್ನು ಮಾಡುತ್ತೇವೆ - ಮತ್ತು ಬಳಿಕ ನಾವು ಪರಿಣಾಮಗಳನ್ನು ಅನುಭವಿಸುತ್ತೇವೆ.

1829ರಲ್ಲಿ, ಅಂಚೆ ರೈಲಿನಲ್ಲಿ ದರೋಡೆ ಮಾಡಿದ ಹಾಗೂ ಕೊಲೆಯ ಅಪರಾಧಕ್ಕಾಗಿ George Wilsonನಿಗೆ ದಂಡನೆಯ ತೀರ್ಪು ನೀಡಲ್ಪಟ್ಟಿತ್ತು. ಅಧ್ಯಕ್ಷನಾದ Andrew Jacksonನು ಆತನಿಗೆ ಕ್ಷಮೆಯನ್ನು ನೀಡಿದನು, ಆದರೆ George Wilsonನು ಅದನ್ನು ಅಂಗೀಕರಿಸಿಕೊಳ್ಳಲಿಲ್ಲ ಮತ್ತು ತಾನು ಅದನ್ನು ಅಂಗೀಕರಿಸಿಕೊಳ್ಳುವ ಹೊರತು ಅದು ಕ್ಷಮೆಯೇ ಅಲ್ಲ ಎಂಬುದಾಗಿ ವಾದಿಸಿದನು. ಈ ನಿರಾಕರಣೆಯು ಒಂದು ಕಾನೂನಾತ್ಮಕ ಪ್ರಶ್ನೆಯಾಗಿದ್ದು ಈ ಹಿಂದೆ ಅಮೆರಿಕದಲ್ಲಿ ಕೇಳಲ್ಪಟ್ಟಿರಲೇ ಇಲ್ಲ. ಈ ಪ್ರಕರಣವು ಉಚ್ಚ

ನ್ಯಾಯಾಲಯಕ್ಕೆ ಕೊಂಡೊಯ್ಯಲ್ಪಟ್ಟಿತು, ಮತ್ತು ಮುಖ್ಯ ನ್ಯಾಯಾಧಿಶನಾದ John Marshallನು ಈ ತೀರ್ಪನ್ನು ಕೊಟ್ಟನು:

> ಕ್ಷಮೆ ಎಂಬುದು ಕಾಗದವಾಗಿದ್ದು ಕ್ಷಮೆಗೆ ಒಳಪಡಿಸಲ್ಪಟ್ಟವನು ಅದನ್ನು ಸ್ವೀಕರಿಸಿಕೊಳ್ಳುವದರ ಮೇಲೆ ಅದರ ಮೌಲ್ಯವು ಆಧಾರವಾಗಿರುತ್ತದೆ. ಮರಣ ದಂಡನೆಗೆ ಗುರಿಯಾಗಿರುವವನು ನೀಡಲಾದ ಕ್ಷಮೆಯನ್ನು ನಿರಾಕರಿಸುವನೆಂಬುದನ್ನು ಊಹಿಸಿಕೊಳ್ಳಲಾಗದು, ಆದರೆ ಅದು ನಿರಾಕರಿಸಲ್ಪಟ್ಟದ್ದೇ ಆದಲ್ಲಿ, ಅದು ಕ್ಷಮಾಪಣೆಯೇ ಅಲ್ಲ. George Wilsonನನ್ನು ಗಲ್ಲಿಗೆ ಏರಿಸತಕ್ಕದ್ದು.[36]

ಇಂದು, ದೇವರು ತನ್ನ ಕ್ಷಮೆಯನ್ನು ನಿಮಗೆ ನೀಡುತ್ತಿದ್ದಾನೆ. ನೀವು ಅದನ್ನು ನಂಬಿಕೆ ಹಾಗೂ ವಿಧೇಯತೆಯಿಂದ ಅಂಗೀಕರಿಸಿಕೊಳ್ಳಬಹುದು - ಆದರೆ ನೀವು ಅದನ್ನೆ ಅಂಗೀಕರಿಸಿಕೊಳ್ಳಲೇ ಬೇಕಾದ ನಿರ್ಬಂಧವಿಲ್ಲ. ಆಯ್ಕೆಯು ನಿಮಗೆ ಬಿಟ್ಟದ್ದು. ಏನೆಂದರೆ ಅದರಿಂದಾಗುವ ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವದಕ್ಕೆ ಮರೆಯಬೇಡಿರಿ ಅಷ್ಟೆ.

## ದುಷ್ಟರಿಗಾಗುವ ದಂಡನೆ (14:9-11)

ಒಂದು ಭಾನುವಾರದಂದು, ದುಷ್ಟರಿಗಾಗುವ ದಂಡನೆಯ ಕುರಿತು ಒಬ್ಬ ಬೋಧಕನು ಪ್ರಸಂಗವನ್ನು ಮಾಡಿದನು. ಮರುದಿನ ಬೆಳಿಗ್ಗೆ ಒಬ್ಬ ಯುವಕನು ಅವನ ಅಧ್ಯಯನ ತರಗತಿಗೆ ಬಂದು ಸಮರಕ್ಕೀಳಿದವನಂತೆ, “ನೀನು ನಿನ್ನೆಯ ದಿನ ಹೇಳಿದ ಒಂದು ವಿಚಾರದ ಬಗ್ಗೆ ನನಗೆ ಭಿನ್ನಾಭಿಪ್ರಾಯವಿದೆ ಎಂಬುದು ನಿನಗೆ ಗೊತ್ತಾಗತಕ್ಕದ್ದೆಂದು ಯೋಚಿಸಿದೆನು” ಎಂದು ಹೇಳಿದನು.

ಸೇವಕನು ಅವನಿಗೆ, “ಆ ವಿಷಯವು ಯಾವುದು?” ಎಂದು ಕೇಳಿದನು.

“ಭಕ್ತಿಹೀನರು ನಿತ್ಯವಾದ ದಂಡನೆಯನ್ನು ಅನುಭವಿಸುವದಕ್ಕೆ ಹೋಗುವರು ಎಂದು ಹೇಳಿದೆಯಲ್ಲಾ, ಮತ್ತು ಅವರು ಹಾಗೆ ಹೋಗುವರೆಂದು ನಾನು ನಂಬುವದಿಲ್ಲ!” ಎಂದನು.

ಆಗ ಬೋಧಕನು “ಓ, ಅಷ್ಟೇನಾ? ನೀನು ಮತ್ತಾಯ 25:46ರನ್ನು ಓದುವದಾದರೆ, ನಿನಗೆ ನನ್ನ ಮಾತಿನಲ್ಲಿ ಯಾವದೇ ಭಿನ್ನಾಭಿಪ್ರಾಯವೇ ಇರುವದಿಲ್ಲ, ಆದರೆ ಯೇಸುವು ಹೇಳಿದ ಮಾತಿಗೆ ಭಿನ್ನಾಭಿಪ್ರಾಯವನ್ನು ಹೊಂದಿರುವಿಯಷ್ಟೇ ಎಂಬುದನ್ನು ಅರಿತುಕೊಳ್ಳುವಿ. ಆದ್ದರಿಂದ ಶೀಘ್ರವೇ ಆತನ ಬಳಿಗೆ ಹೋಗಿ ಆ ವಿಷಯವನ್ನು ಇತ್ಯರ್ಥ ಪಡಿಸಿಕೋ ಎಂದು ನಿನಗೆ ಸಲಹೆ ಮಾಡುತ್ತೇನೆ” ಎಂದು ಹೇಳಿದನು.[37]

## ಕರ್ತನ ಭಕ್ತರಾಗಿ ಸಾಯುವದು (14:13)

13ನೇ ವಚನವು ಪ್ರಕಟನೆ ಪುಸ್ತಕದಲ್ಲಿ ಬರುವಂಥ ಎರಡನೆಯ ಧನ್ಯನುಡಿಯಾಗಿರುತ್ತದೆ (ನೋಡಿರಿ 1:3), ಮತ್ತು ಇದು ಪುಸ್ತಕದಲ್ಲಿಯೇ ಅತ್ಯಂಥ ಆದರಣೆಯನ್ನು ತರುವ ಮಾತುಗಳನ್ನೊಳಗೊಂಡಿದೆ. ಇಷ್ಟು ವರ್ಷಗಳಿಂದಲೂ ಈ ವಾಕ್ಯಭಾಗವು ದುಃಖಪಡುವ ಸಾವಿರಾರು ಜನರಿಗೆ ಸಾಂತ್ವನವನ್ನು ನೀಡಿರುತ್ತದೆ. ನಿಮಗೆ ಈ ವಚನವು ಈಗಾಗಲೇ ಕಂಠಪಾಠವಾಗಿ ಗೊತ್ತಿಲ್ಲವಾದಲ್ಲಿ, ಬಹುಶಃ ನೀವು ಇದನ್ನು ಕಂಠಪಾಠ ಮಾಡಿಕೊಳ್ಳಲಿಚ್ಚೆಸಬಹುದು.

ಬೋಧಕರು ತಮ್ಮ ಜೀವಿತ ಕಾಲವೆಲ್ಲಾ ದುಡಿದು ತಮ್ಮ ಅಂತಿಮ ದಿನಗಳನ್ನು ನೋವಿನಿಂದಲೂ, ರೋಗಗ್ರಸ್ಥ ದೇಹಗಳಲ್ಲಿ ಕಳೆದಿದ್ದ ವಿಶ್ವಾಸಿಗಳ ಶವಸಂಸ್ಕಾರದ

ಆರಾಧನೆಗಳಲ್ಲಿ ಅನೇಕ ಸಾರಿ ಈ ವಚನವನ್ನು ಮಾತಾಡಿರುತ್ತಾರೆ. ಅಂತಹ ಸಂದರ್ಭಗಳಿಗೆ ಪ್ರಕಟನೆ 14:13 ವಿಶೇಷವಾದ ರೀತಿಯಲ್ಲಿ ಸೂಕ್ತವೆಂದೆಣಿಸುತ್ತದೆ. ನಂಬಿಗಸ್ತರಿಗಾದರೋ, ಮರಣವು ನಿಜಕ್ಕೂ ಒಂದು ಧನ್ಯತೆಯೇ ಆಗಿತ್ತು; ಕೊನೆಗೂ ಅವರು ವಿಶ್ರಾಂತಿಯಲ್ಲಿರುತ್ತಾರೆ.

ಈ ವಚನವು ಮರಣಿಸುವಂಥ ಎಲ್ಲರಿಗೂ ಆಶೀರ್ವಾದಗಳ ವಾಗ್ದಾನವನ್ನು ಮಾಡುವದಿಲ್ಲ, ಆದರೆ "ಕರ್ತನ ಭಕ್ತರಾಗಿ ಸಾಯುವವರಿಗೆ" ಮಾತ್ರ ವಾಗ್ದಾನ ಮಾಡುತ್ತದೆಂಬುದನ್ನು ಒತ್ತಿ ಹೇಳುವದು ಪ್ರಾಮುಖ್ಯವಾಗಿರುತ್ತದೆ. ನಾವು ಸುವಾರ್ತೆಗೆ ವಿಧೇಯರಾಗುವಾಗ, ನಾವು "ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಕೊಳ್ಳುತ್ತೇವೆ" (ರೋಮಾ 6:3; ನೋಡಿರಿ ಗಲಾತ್ಯ 3:27). "ಕ್ರಿಸ್ತನಲ್ಲಿ" ನಾವು ನೂತನ ಸೃಷ್ಟಿಯಾಗಿರುತ್ತೇವೆ (2 ಕೊರಿಂಥ 5:17); "ಕ್ರಿಸ್ತನಲ್ಲಿ" ನಾವು ದೇವರ ಪುತ್ರರಾಗಿರುತ್ತೇವೆ (ಗಲಾತ್ಯ 3:26); "ಕ್ರಿಸ್ತನಲ್ಲಿ" ನಾವು ಸಕಲ ಆತ್ಮೀಯ ಆಶೀರ್ವಾದಗಳನ್ನು ಹೊಂದಿಕೊಂಡಿದ್ದೇವೆ (ಎಫೆಸ 1:3). "ಕ್ರಿಸ್ತನಲ್ಲಿ" ಎಂಬ ಪದಗುಚ್ಛವು ಒಂದು ವಿಶೇಷ ಸಂಬಂಧವನ್ನು, ಎಷ್ಟೊಂದು ನಿಕಟವಾದ ಸಂಬಂಧವೆಂದರೆ ನಾವು ಯೇಸುವಿನಲ್ಲಿಯೂ ಆತನು ನಮ್ಮಲ್ಲಿಯೂ ನೆಲೆಗೊಂಡಿದ್ದಾನೆಂದು ಹೇಳಲ್ಪಡುವಂಥ ಸಂಬಂಧವನ್ನು ಸೂಚಿಸುತ್ತದೆ (ಕೊಲೊಸ್ಸೆ 1:27, 28).

ಹೇಗೂ, ಆ ಸಂಬಂಧದಲ್ಲಿ ಇರದಿರಬಾರದೆಂಬದನ್ನು ನಾವು ಆಯ್ಕೆ ಮಾಡಿಕೊಳ್ಳಬಹುದಾಗಿದೆ. ಆತನ ಭೂಲೋಕದ ಸೇವೆಯ ಅಂತ್ಯದ ಹತ್ತಿರದಲ್ಲಿ, ಯೇಸುವು ಶಿಷ್ಯರಿಗೆ ಈ ಕರೆಯನ್ನು ಕೊಟ್ಟನು:

> ನೀವು ನನ್ನಲ್ಲಿ ನೆಲೆಗೊಂಡಿರ್ರಿ, ನಾನೂ ನಿಮ್ಮಲ್ಲಿ ನೆಲೆಗೊಂಡಿರುವೆನು. ಕೊಂಬೆಯು ಬಳ್ಳಿಯಲ್ಲಿ ನೆಲೆಗೊಂಡಿರದಿದ್ದರೆ ಹೇಗೆ ತನ್ನಷ್ಟಕ್ಕೆ ತಾನೇ ಫಲಕೊಡಲಾರದೋ ಹಾಗೆಯೇ ನೀವು ನನ್ನಲ್ಲಿ ನೆಲೆಗೊಂಡಿರದಿದ್ದರೆ ಫಲಕೊಡಲಾರಿರಿ. ನಾನು ದ್ರಾಕ್ಷೇ ಬಳ್ಳಿ, ನೀವು ಕೊಂಬೆಗಳು; ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲಕೊಡುವನು; ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ. ಯಾವನು ನನ್ನಲ್ಲಿ ನೆಲೆಗೊಂಡಿರುವದಿಲ್ಲವೋ ಅವನು ಆ ಕೊಂಬೆಯಂತೆ ಹೊರಕ್ಕೆ ಬಿಸಾಡಲ್ಪಟ್ಟು ಒಣಗಿಹೋಗುವನು; ಅಂಥ ಕೊಂಬೆಗಳನ್ನು ಕೂಡಿಸಿ ಬೆಂಕಿಯಲ್ಲಿ ಹಾಕುತ್ತಾರೆ, ಅವು ಸುಟ್ಟುಹೋಗುತ್ತವೆ (ಯೋಹಾನ 15:4-6).

## ಸುಗ್ಗೀಕಾಲ (14:14-20)

14:14-20ರ ಮೇಲಿನ ಒಂದು ಪಾಠಕ್ಕಾಗಿ ಕೊಡಬಹುದಾದ ಶಿರ್ಷೀಕೆಗಳಲ್ಲಿ ಇವುಗಳು ಸೇರಿರುತ್ತವೆ "ನ್ಯಾಯತೀರ್ಪಿನ ಖಚಿತತೆ" ಮತ್ತು "ಅಂತ್ಯದ ನೆರವೇರಿಕೆ." "ಒಂದು ಮಹಾ ದಿನವು ಬರುತ್ತಲಿದೆ" ಎಂಬ ಹಾಡು ಈ ವಿಭಾಗದ ಮುಖ್ಯಾಂಶದೊಂದಿಗೆ ಜೋಡಣೆಯಾಗುತ್ತದೆ; ಹಾಡಿನ ಶಿರೋನಾಮೆಯನ್ನು ಪಾಠದ ಶಿರೋನಾಮೆಯಾಗಿ ಸಹ ಬಳಸಬಹುದಾಗಿದೆ.

ಈ ಸುಗ್ಗೀಕಾಲದ ದೃಶ್ಯವು ಸುಗ್ಗಿ ಮಾಡಲ್ಪಟ್ಟ ಗೋದಿಯು ಕಣಜದಲ್ಲಿ ಸಂಗ್ರಹಿಸಿಡಲ್ಪಡುವ ರೀತಿಯಲ್ಲಿಯೇ ಸುರಕ್ಷಿತವಾಗಿ ಒಟ್ಟುಗೂಡಿಸಲ್ಪಡಲಿರುವ ನಂಬಿಗಸ್ತರಿಗೆ ಅದು ಆದರಣೆಯನ್ನುಂಟು ಮಾಡುತ್ತದೆ (ವಚನಗಳು 14-16). ಹೇಗೂ, ದ್ರಾಕ್ಷೇಗೊಂಚಲುಗಳ ದೃಶ್ಯವು ಹೇಗೆ ಕೊಯ್ಯಲಾದ ದ್ರಾಕ್ಷೆಗಳನ್ನು ದ್ರಾಕ್ಷೇತೊಟ್ಟಿಯಲ್ಲಿ ತುಳಿಯಲಾಗುತ್ತದೋ ಹಾಗೆಯೇ ಅಪನಂಬಿಗಸ್ತರಿಗೆ ಒಂದು ದೊಡ್ಡ ಎಚ್ಚರಿಕೆಯನ್ನು ನೀಡುತ್ತದೆ (ವಚನಗಳು 17-20).

ದಿನದಿಂದ ದಿನಕ್ಕೆ, ನಮ್ಮ ಗುಣನಡತೆಗಳು ಪಕ್ವಗೊಳ್ಳುತ್ತಿವೆ - ಆದರಣೆಗಾಗಿ ಅಥವಾ ಭ್ರಷ್ಟತೆಗಾಗಿ, ಅಂಗೀಕಾರಕ್ಕಾಗಿ ಅಥವಾ ತಿರಸ್ಕಾರಕ್ಕಾಗಿ, ನಿತ್ಯಜೀವಕ್ಕಾಗಿ ಅಥವಾ ನಿತ್ಯ ಮರಣಕ್ಕಾಗಿ ಪಕ್ವಗೊಳ್ಳುತ್ತಿರಬಹುದಾಗಿದೆ. ಕರ್ತನು ಹಿಂದಿರುಗಿ ಬರುವಾಗ, ನೀವು ಆತನ ಸುರಕ್ಷತೆಯ ಕಣಜದೊಳಗೆ ಸಂಗ್ರಹಿಸಲ್ಪಡುವಿರೋ, ಅಥವಾ ದೇವರ ರೌದ್ರವೆಂಬ ದ್ರಾಕ್ಷೇತೊಟ್ಟಿಯಲ್ಲಿ ತುಳಿಯಲ್ಪಡುವಿರೋ?

> ಮೋಸಹೋಗಬೇಡಿರಿ; ದೇವರು ತಿರಸ್ಕಾರ ಸಹಿಸುವವನಲ್ಲ. ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯಬೇಕು. ತನ್ನ ಶರೀರಭಾವವನ್ನು ಕುರಿತು ಬಿತ್ತುವವನು ಆ ಭಾವದಿಂದ ನಾಶನವನ್ನು ಕೊಯ್ಯುವನು. ಆತ್ಮನನ್ನು ಕುರಿತು ಬಿತ್ತುವವನು ಆತ್ಮನಿಂದ ನಿತ್ಯಜೀವವನ್ನು ಕೊಯ್ಯುವನು (ಗಲಾತ್ಯ 6:7, 8).

---

### ಅಡಿಟಿಪ್ಪಣಿಗಳು

[1]Jim McGuiggan, *The Book of Revelation*, Looking Into The Bible Series (Lubbock, Tex.: International Biblical Resources, 1976), 214. [2]Robert H. Mounce, *The Book of Revelation*, The New International Commentary on the New Testament, ed. F. F. Bruce (Grand Rapids, Mich.: Wm. B. Eerdmans Publishing Co., 1977), 267. [3]Michael Wilcock, *The Message of Revelation: I Saw Heaven Opened*, The Bible Speaks Today, ed. John R. W. Stott (Downers Grove, Ill.: Intervarsity Press, 1975), 132. [4]McGuiggan, 217. [5]Daniel Russell, *Preaching the Apocalypse* (New York: Abingdon Press, 1935), 185. [6]Myer Pearlman, *Windows Into the Future: Devotional Studies in the Book of Revelation* (Springfield, Mo.: Gospel Publishing House, 1941), 127. [7]Mounce, 271. [8]ಈ ವಿಚಾರವು Eugene H. Petersonನಿಂದ ಬಂದದ್ದಾಗಿದ್ದು, ಆತನು *Reversed Thunder* (San Francisco: HarperCollins Publishers, 1988), 128 ದಲ್ಲಿ "ಮಧ್ಯಾಕಾಶದ ಪ್ರಸಂಗಪೀಠದಿಂದ ಬೋಧಿನೆ" ಎಂಬದನ್ನು ಉಲ್ಲೇಖಿಸಿದನು. [9]Pearlman, 131. [10]J. W. Roberts, *The Revelation to John (The Apocalypse),* The Living Word Commentary, ed. Everett Ferguson (Austin, Tex.: Sweet Publishing Co., 1974), 119.

[11]Owen L. Crouch, *Expository Preaching and Teaching: Revelation* (Joplin, Mo.: College Press Publishing Co., 1985), 259. [12]Thomas F. Torrance, *The Apocalypse Today* (Grand Rapids, Mich.: Wm. B. Eerdmans Publishing Co., 1959), 96. [13]H. L. Ellison, *1 Peter-Revelation*, Scripture Union Bible Study Books (Grand Rapids, Mich.: Wm. B. Eerdmans Publishing Co., 1969), 71. [14]Mounce, 273. [15]Albert H. Baldinger, *Preaching From Revelation: Timely Messages for Troubled Hearts* (Grand Rapids, Mich.: Zondervan Publishing House, 1960), 79. [16]John Risse, "Evil Beasts and the Victorious Lamb," Southern Hills church of Christ, Abilene, Texas, 5 May 1991ದಲ್ಲಿ ಬೋಧೀಸಿದ ಒಂದು ಪ್ರಸಂಗವಾಗಿದೆ. [17]Bruce M. Metzger, *Breaking the Code: Understanding the Book of Revelation* (Nashville: Abingdon Press, 1993), 78. [18]Ray Summers, *Worthy Is the Lamb* (Nashville: Broadman Press, 1951), 181. [19]George Eldon Ladd, *A Commentary on the Revelation of John* (Grand Rapids, Mich.: Wm. B. Eerdmans Publishing Co., 1972), 198. [20]Summers, 182.

[21]ಈ ವಾಕ್ಯವು Merrill C. Tenney, *The Book of Revelation*, Proclaiming the New Testament (Grand Rapids, Mich.: Baker Book House, 1963), 72ದಿಂದ ಆಯ್ದುಕೊಳ್ಳಲ್ಪಟ್ಟಿದೆ. [22]M. Robert Mulholland, Jr., *Revelation: Holy Living in an Unholy World*, Francis Asbury Press Commentary, ed. M. Robert Mulholland, Jr. (Grand Rapids, Mich.: Francis Asbury Press, 1990), 251. [23]G. B. Caird, *A Commentary on the Revelation of St. John the Divine*, Harper's

New Testament Commentaries, ed. Henry Chadwick (London: Adam & Charles Black, 1966), 191. [24]Mounce, 279, n. [25]Quoted in Pearlman, 135. [26]Tenney, 71. [27]Mounce, 283 (emphasis added). [28]Martin H. Franzmann, *The Revelation to John* (St. Louis: Concordia Publishing House, 1976), 104. [29]This sentence was adapted from Summers, 183. [30]James Moffatt, "The Revelation of St. John the Divine," in *The Expositor's Greek New Testament*, ed. W. Robertson Nicoll (London: Hodder & Stoughton, 1910; reprint, Grand Rapids, Mich.: Wm. B. Eerdmans Publishing Co., 1951), 5:313.

[31]Warren W. Wiersbe, *The Bible Exposition Commentary*, vol. 2 (Wheaton, Ill.: Victor Books, 1989), 607–11. [32]Frank Pack, *Revelation*, Part 2 (Austin, Tex.: R. B. Sweet Co., 1965), 14. [33]Pearlman, 127. [34]McGuiggan, 217. [35]David F. Burgess, comp., *Encyclopedia of Sermon Illustrations* (St. Louis, Mo.: Concordia Publishing House, 1988), 80. ಬಳಸಲ್ಪಟ್ಟಿರುವ ನಿಖರವಾದ ಪದಗುಚ್ಛವು "ನಾನು *ಹತ್ತಿ* ಆಗಿದ್ದೇನೆ" ಎಂದಾಗಿರುತ್ತದೆ: ಕೆಲವು ದೇಶಗಳಲ್ಲಿ "*ಹತ್ತಿ*"ಯನ್ನು "ದಾರ" ಎಂದು ಕರೆಯಲಾಗುತ್ತದೆ. [36]Burgess, 177ದಲ್ಲಿ ಉಲ್ಲೇಖಿಸಲಾಗಿದೆ. [37]ಈ ದೃಷ್ಟಾಂತವನ್ನು Burgess, 99ದಿಂದ ಆಯ್ದುಕೊಳ್ಳಲಾಗಿದೆ.